ನೆಲ್ಸನ್ ಮಂಡೇಲಾ



ರಂಜಾನ್ ದರ್ಗಾ

ನೆಲ್ಸನ್ ಮಂಡೇಲಾ

ರಂಜಾನ್ ದರ್ಗಾ

ಕರ್ನಾಟಕ ದಲಿತ ಸಂಘರ್ಷ ಸಮಿತಿ
ಕೋಲಾರ ಜಿಲ್ಲಾ ಶಾಖೆ
ಕೋಲಾರ

NELSON MANDELA (a Biography) by Ramjan Darga, Sub-editor 'Prajavani' M. G. Road, Bangalore-1, Published by Karnataka Dalita Sangharsha Samiti, Kolar District unit, Kolar. Pages : viii+100 price : Rs 12. March 1990

ಮೊದಲ ಮುದ್ರಣ : 1990

ಬೆಲೆ : ರೂ. 12–00

ಪ್ರತಿಗಳಿಗೆ : ಬಿ. ಗಂಗಾಧರ ಮೂರ್ತಿ
ಎ–167, ಡಿ. ಎಚ್. ಬಡಾವಣೆ
ಗೌರಿಬಿದನೂರು–561208

ಮುದ್ರಣ : ಲಕ್ಷ್ಮೀ ಮುದ್ರಣಾಲಯ, ಬೆಂಗಳೂರು–18

ಅರ್ಪಣೆ

ಕಾರ್ಮಿಕ - ದಲಿತ - ಅಲ್ಪಸಂಖ್ಯಾತ, ಒಟ್ಟಾರೆ ಎಲ್ಲಾ ಬಡವರ ಪರವಾಗಿ ನಿಲ್ಲುವ, ಮಾರ್ಕ್ಸ್‌ವಾದ ದಲ್ಲಿ ಅಪಾರ ನಂಬಿಕೆ ಇಟ್ಟು ಹೊಸತನಕ್ಕಾಗಿ ತುಡಿಯುವ, ಸದಾಕಾಲ ಅಧ್ಯಯನಶೀಲರಾಗಿ, ಸಂಗೀತ–ಸಾಧಕರಾಗಿ, ತಮ್ಮ ವೃದ್ಧಾಪ್ಯದಲ್ಲೂ ತೀವ್ರ ಸಂಕಷ್ಟಗಳಲ್ಲೂ ಲವಲವಿಕೆಯಿಂದ ಕೂಡಿ ಮಾನವ ಘನತೆ, ಶಾಂತಿ ಮತ್ತು ಜೀವನ ಸಮೃದ್ಧಿ ಗಾಗಿ ಹಂಬಲಿಸುವ ಚಿಂತಕ – ಮಹಾನ್ ಚೇತನ ವಿಜಾಪುರದ ನರಸಿಂಗರಾವ್ ಕುಲಕರ್ಣಿ ಅವರಿಗೆ.

ಕಪ್ಪಿಲ್ಲ ನನ್ನ ಕೂದಲು
ಆದರೂ ನಾ ಏಷಿಯಾದವ

ನನ್ನ ಕಣ್ಣು ನೀಲಿ
ಆದರೂ ನಾ ಆಫ್ರಿಕಾದವ

—ನಜೀಂ ಹಿಕ್ಮತ್, ಟರ್ಕಿಯ ಕವಿ

ನಿವೇದನೆ

ವಸಾಹತುಷಾಹಿ ಆಳ್ವಿಕೆಗೆ ಒಳಗಾದವರ ದುರಂತದ ಆಳವನ್ನು ಮಾರ್ಕ್ಸ್, ಎಂಗೆಲ್ಸ್ ಅಳೆದರು. ರಾಷ್ಟ್ರೀಯ ವಿಮೋಚನಾ ಹೋರಾಟಗಳ ಎತ್ತರವನ್ನು ಲೆನಿನ್ ಕಂಡುಹಿಡಿದರು. ಮನುಷ್ಯನ ಒಳಗೆ ಅಡಗಿಕೊಂಡಿರುವ ನೋವಿನ ಬಗ್ಗೆ ಆಂದ್ರಪೊವ್ ಪಿಸುಗುಟ್ಟಿದರು. ನಿರ್ಮಲ ಬದುಕಿಗಾಗಿ ತಮ್ಮ ಮಲವನ್ನು ತಾವೇ ಹೊರಬೇಕು, ಇಲ್ಲದಿದ್ದರೆ ದುರ್ಗಂಧ ತಡೆಯಲಿಕ್ಕಾಗದು ಎಂದು ಗೊರ್ಬಚೆವ್ ಎಚ್ಚರಿಸಿದರು.

ಈ ಎಲ್ಲವನ್ನೂ ಮನದಲ್ಲಿಟ್ಟುಕೊಂಡು ನೋವು ಮತ್ತು ಭರವಸೆಗಳಿಂದ ಕೂಡಿದ ದಕ್ಷಿಣ ಆಫ್ರಿಕಾದ ನಾಯಕ ನೆಲ್ಸನ್ ಮಂಡೇಲಾರ ಆತ್ಮಚರಿತ್ರೆ ಬರೆಯಲು ಪ್ರಯತ್ನಿಸಿದ್ದೇನೆ.

ಅನೇಕರು ದಂತಕಥೆಯಾಗಿ ಹೋದರು. ಆದರೆ ದಕ್ಷಿಣ ಆಫ್ರಿಕಾದ ಕುಪ್ರಸಿದ್ಧ ಜೈಲುಗಳಲ್ಲಿ ಹತ್ತು ಸಾವಿರಕ್ಕೂ ಹೆಚ್ಚು ದಿನಗಳನ್ನು ಕಳೆದು ದಂತಕಥೆಯಾದ ನೆಲ್ಸನ್ ಮಂಡೇಲಾ ಇದೀಗ ನಮ್ಮ ಮುಂದೆ ಬಂದು ನಿಂತಿದ್ದಾರೆ. ಅವರು ಕಾಣಿಸಿಕೊಂಡಾಗ ಅನೇಕರಿಗೆ ಆಶ್ಚರ್ಯವಾಯಿತು, ಅತೀವ ಆನಂದವಾಯಿತು, ಎಲ್ಲೆಡೆ ಅಂತಃಕರಣದ ಹೊಳೆ ಹರಿಯಿತು. ದಂತಕಥೆಯೊಂದು ಮಾನವ ಮಹಾಕಾವ್ಯವಾಗಿ ನಮ್ಮ ಮುಂದೆ ನಿಂತ ಅನುಭವವಾಯಿತು.

ಅಷ್ಟೊಂದು ದಿನಗಳ ಸೆರೆವಾಸದಲ್ಲಿ ಅವರು ಹುಚ್ಚರಾಗಲಿಲ್ಲ, ನಿರಾಶಾಭಾವ ತಾಳಲಿಲ್ಲ. ಹೊರತಾಗಿ ಅವರ ಚೈತನ್ಯ ವಿಶ್ವವ್ಯಾಪಿಯಾಗಿ ಬೆಳೆಯತೊಡಗಿತು. ಜೈಲುಗೋಡೆಗಳ ಮಧ್ಯೆ ಅನುಭವ ಮತ್ತು ಕನಸುಗಳನ್ನು ಹಾಸುಹೊಕ್ಕಾಗಿಸಿ ವರ್ತಮಾನವನ್ನು ನೇಯುವಲ್ಲಿ ಅವರು ತಲ್ಲೀನರಾಗಿದ್ದರು. ಕರಿಯರ ಹೋರಾಟಗಳ ಸೂತ್ರಧಾರರಾಗೇ ಉಳಿದಿದ್ದರು.

ರಾಜಮನೆತನದಲ್ಲಿ ಹುಟ್ಟಿ ಕರಿಯರ ಕಣ್ಣಲ್ಲಿ ಮೇಲಾದ, ಕರಿಯರಾಗಿ ಹುಟ್ಟಿದ್ದರಿಂದ ಬಿಳಿಯರ ಕಣ್ಣಲ್ಲಿ ಕೀಳಾದ ನೆಲ್ಸನ್ ಮಂಡೇಲಾ ಇವೆರಡನ್ನೂ ಗಣನೆಗೆ ತೆಗೆದುಕೊಳ್ಳದೆ ತಮ್ಮೊಳಗಿನ ಮನುಷ್ಯನನ್ನು ಹುಡುಕಿಕೊಂಡು ಹೋದರು. ನಿರಂತರ ಹುಡುಕುವಿಕೆಯಿಂದಾಗಿ ಜನಸಾಗರದಲ್ಲಿ ತಮ್ಮನ್ನು ಕಂಡು ಕೊಂಡರು. ಅವಿಶ್ರಾಂತ ಹೋರಾಟಗಾರರಾದರು. ಕಪ್ಪು ಪ್ರಜ್ಞೆಯಿಂದ ಮಾನವ ಪ್ರಜ್ಞೆಯವರೆಗೆ ಮುಂದುವರಿದರು. ಅವರು ಹೀಗೆ ದೂರ ಬಹುದೂರ ಸಮಸ್ತ ಜನ ಕೋಟಿ ಇರುವಲ್ಲಿಗೆ ಹೋಗುವಾಗ ರಾಬ್ಬೆನ್ ದ್ವೀಪದ ಭೀಕರ ಗೋಡೆ ಗಳು, ಅಟ್ಲಾಂಟಿಕ್ ಸಾಗರದ ತೆರೆಗಳು, ಬಿಳಿಯರ ಬಂದೂಕುಗಳು ಅವರನ್ನು ತಡೆಯುವ ಶಕ್ತಿ ಹೊಂದಿರಲಿಲ್ಲ. ಅವರು ಎಲ್ಲರ ಬಳಿಗೆ ಹೋದರು. ಎಲ್ಲರ ಹೃದಯಗಳನ್ನು ತಟ್ಟಿದರು. ದಕ್ಷಿಣ ಆಫ್ರಿಕಾದಲ್ಲಿ ನಡೆಯುತ್ತಿರುವುದು ಕರಿಯರ ಮತ್ತು ಬಿಳಿಯರ ಮಧ್ಯದ ಹೋರಾಟವಲ್ಲ; ಮಾನವ ಪ್ರೀತಿ ಮತ್ತು ದ್ವೇಷದ ಹೋರಾಟವೆಂದು ತಿಳಿ ಹೇಳಿದರು.

ದಕ್ಷಿಣ ಆಫ್ರಿಕಾದ ಮುನ್ನೂರು ವರ್ಷಗಳ ಹೋರಾಟಗಳು ಮತ್ತು ಜನರ ಆಶಯಗಳು ನೆಲ್ಸನ್ ಮಂಡೇಲಾ ಅವರನ್ನು ಸೃಷ್ಟಿಸಿವೆ. ಅವರು ದಕ್ಷಿಣ ಆಫ್ರಿಕಾದ ಜನತೆಯ ಮಹಾನ್ ಪುತ್ರರಾಗಿದ್ದಾರೆ.

ಅವರು ಕಾಳಗಕ್ಕೆ ಎಂದೂ ಹಿಂಜರಿಯಲಿಲ್ಲ. ಆದರೆ ಸದಾ ಶಾಂತಿ ಬಯಸಿದರು. ಅವರು ಸಾವಿಗೆ ಎಂದೂ ಅಂಜಲಿಲ್ಲ. ಆದರೆ ಬದುಕಿನ ಮಹತ್ವವನ್ನು ಅರಿತರು. ಅವರು ಮನುಷ್ಯರ ಮಧ್ಯೆ ಇರುವ ಗೋಡೆ ಗಳನ್ನು ಒಡೆಯತೊಡಗಿದರು.

'ಮನುಷ್ಯ ಜಾತಿ ತಾನೊಂದೇ ವಲಂ' ಎಂದು ಆದಿಕವಿ ಪಂಪ ಸಾವಿರ ವರ್ಷಗಳಷ್ಟು ಹಿಂದೆಯೆ ಹೇಳಿದ್ದಾನೆ. ನಮ್ಮಲ್ಲಿನ 'ಸನಾತನ ವರ್ಣಭೇದ' ನೀತಿಯನ್ನು ತಿರಸ್ಕರಿಸಿದ್ದಾನೆ. ಕನ್ನಡ ಸಾಹಿತ್ಯದಲ್ಲಿ ಸವರ್ಣೀಯರ ಅಹಂ ಅನ್ನು ತಿರಸ್ಕರಿಸುವ ಪರಂಪರೆಯೇ ಇದೆ. ಇಂದು ದಲಿತ ಸಂಘರ್ಷ ಸಮಿತಿ, ಸಮುದಾಯ ಮತ್ತು ಬಂಡಾಯ ಮುಂತಾದ ಸಂಘಟನೆಗಳು ಈ ಪರಂಪರೆ ಯನ್ನು ಮುಂದುವರಿಸಿಕೊಂಡು ಹೋಗುತ್ತಿವೆ. ಇಂಥ ಸಂಘಟನೆಗಳ ಚಳವಳಿ

ಯಿಂದಾಗಿ ಕನ್ನಡ ನಾಡಿನಲ್ಲಿ ದಕ್ಷಿಣ ಆಫ್ರಿಕಾದ ಬದುಕಿನ ಬಗ್ಗೆ ಕೂಡ ವಿಶೇಷ ಕಾಳಜಿ ಉಂಟಾಗಿದೆ.


ದಕ್ಷಿಣ ಆಫ್ರಿಕಾ ಸರ್ಕಾರ ಕಪ್ಪು ಯುವ ಕವಿ ಬೆಂಜಾಮಿನ್ ಮೊಲಾಯಿಸ್‌ನನ್ನು ಗಲ್ಲಿಗೇರಿಸಿತು. ನಂತರ ಆ ಕವಿ ಕನ್ನಡ ಸಾಹಿತ್ಯದಲ್ಲಿ ಕಾವ್ಯವಾಗಿ ಹರಿದ. ಮೊಲಾಯಿಸ್ ಕುರಿತು ಕನ್ನಡದಲ್ಲಿ ನೂರಾರು ಕವನಗಳ ಸೃಷ್ಟಿಯಾಯಿತು. ದಕ್ಷಿಣ ಆಫ್ರಿಕಾ ಮೊದಲು ಮಾಡಿ ಜಗತ್ತಿನ ಯಾವ ಭಾಷೆಯಲ್ಲೂ ಮೊಲಾಯಿಸ್ ಕುರಿತು ಇಷ್ಟೊಂದು ಕವನಗಳ ಸೃಷ್ಟಿಯಾಗಿಲ್ಲ. ಇವೆಲ್ಲಾ ಶ್ರೇಷ್ಠ ಕವನಗಳಾಗಿರಲಿಕ್ಕಿಲ್ಲ. ಆದರೆ ಬದುಕಿನಲ್ಲಿ ಶ್ರೇಷ್ಠತೆಯನ್ನು ಬಯಸುವ ಆ ಕವನಗಳ ಹಿಂದೆ ಮಾನವೀಯತೆಗಾಗಿ ತುಡಿಯುವ ಮನಗಳಿವೆ ಎಂಬುದು ಬಹುಮುಖ್ಯ. ಸಾಹಿತ್ಯದಲ್ಲಿ ಶ್ರೇಷ್ಠತೆ ಇಲ್ಲದೆ ಮಾನವೀಯತೆ ಇರಲು ಸಾಧ್ಯ. ಆದರೆ ಮಾನವೀಯತೆ ಇಲ್ಲದೆ ಶ್ರೇಷ್ಠತೆ ಬರಲು ಸಾಧ್ಯವೇ ಇಲ್ಲ.

ನೆಲ್ಸನ್ ಮಂಡೇಲಾ ಈ ಕಾಲಘಟ್ಟದ ಮಾನವೀಯತೆಯ ಬಹುಮುಖ್ಯ ಕೊಂಡಿಯಾಗಿದ್ದಾರೆ. ಅಂತೆಯೆ ನಾವೆಲ್ಲ ಸ್ಪಂದಿಸಿದ್ದೇವೆ. ಅವರು ಹೋರಾಟಗಳ ಮೂಲಕ ಸದಾ ಮಾನವೀಯತೆಯನ್ನೇ ಸೃಷ್ಟಿಸಿದ್ದಾರೆ. ಅಂತೆಯೇ ನಮ್ಮ ಪು.ವ್ಯಾ.ಶ್ರೀ. ಮಂಡೇಲಾ ಅವರನ್ನು 'ಜೀವಂತ ಸ್ಪಾರ್ಟಕಸ್' ಎಂದು ಹೇಳಿದ್ದಾರೆ. ಬರಗೂರು ರಾಮಚಂದ್ರಪ್ಪ ಅವರು 'ಮಾನವ ಮಹಾಕಾವ್ಯ' ಎಂದು ಕರೆದಿದ್ದಾರೆ.

ಈ ಪುಸ್ತಕ ಹೊರಬರಲು ಕಾರಣರಾದ ಹ. ಮ. ರಾಮಚಂದ್ರ ಮತ್ತು ಗಂಗಾಧರ ಮೂರ್ತಿ ಅವರಿಗೆ, ಮಂಡೇಲಾ ಚಿತ್ರ ಬಿಡಿಸಿದ ಅಜ್ಞಾತ ಕಲಾವಿದನಿಗೆ, ಕಲಾವಿದ ಮಿತ್ರರಾದ ಗುಜ್ಜಾರಪ್ಪ ಮತ್ತು ಜಾನ್ ದೇವರಾಜ್ ಅವರಿಗೆ, ಅನೇಕ ವರ್ಷಗಳಿಂದ ಅನೇಕ ಪುಸ್ತಕಗಳನ್ನು ಮತ್ತು ಪೇಪರ್ ಕಟಿಂಗ್ಸ್ ಕೊಡುತ್ತ ದಕ್ಷಿಣ ಆಫ್ರಿಕಾ ಕುರಿತು ನನ್ನಲ್ಲಿ ಅತೀವ ಆಸಕ್ತಿ ಮೂಡಿಸಿದ ಪು.ವ್ಯಾ.ಶ್ರೀ.ಗೆ, ದಿ ಪ್ರಿಂಟರ್ಸ್ (ಮೈಸೂರು) ಲಿಮಿಟೆಡ್‌ನ ಮಾಹಿತಿ ಕೇಂದ್ರದ ಗ್ರಂಥಪಾಲ ರಾಮಮೂರ್ತಿ ಹಾಗೂ ಅವರ ಸಹೋದ್ಯೋಗಿಗಳಿಗೆ; ಲಕ್ಷ್ಮಿ ಮುದ್ರಣಾಲಯದ ಮಿತ್ರರಿಗೆ ಕೃತಜ್ಞನಾಗಿದ್ದೇನೆ.

ಮಾರ್ಚ್ 11, 1990

–ರಂಜಾನ್ ದರ್ಗಾ



ದಕ್ಷಿಣ ಆಫ್ರಿಕ
ಕರಿಯರ ಬಂಟೂಸ್ತಾನಗಳು
ತಾಯ್ನಾಡು
ಜನಾಂಗ
1. ಬೋಫುಥಾಟ್ಸ್ವಾನ ಟ್ಸ್ವಾನಾ
2. ಲೆಬೋವಾ ಉ. ಸೋತೋ
3. ನ್ಡಬೆಲೆ ನ್ಡೆಬೆಲೆ
4. ಗಜಾಂಕುಲು ಶಾಂಗಾನ್-ತ್ಸೊಂಗಾ
5. ವೆಂಡ ವೆಂಡ
6. ಕಂಗ್ವಾನೆ ಸ್ವಾಜಿ
7. ಕ್ವಾಕ್ವಾ ದ. ಸೋತೋ
8. ಕ್ವಾಜುಲು ಜುಲು
9. ಟ್ರಾನ್ಸ್ಕಿ ಕ್ಸೋಸಾ
10. ಸಿಸ್ಕಿ ಕ್ಸೋಸಾ
ಆಫ್ರಿಕ
300 ಕಿ.ಮೀ.
200 ಮೈಲಿ
ಜಿಂಬಾಬ್ವೆ
ಬೋಟ್ಸ್ವಾನಾ
ಪ್ರಿಟೋರಿಯ
ಸ್ವಾಜಿಲ್ಯಾಂಡ್
ಜೋಹಾನ್ಸ್‌ಬರ್ಗ್
ಕಿಂಬರ್ಲಿ
ಲೆಸೊತೊ
ಡರ್ಬಾನ್
ಪೋರ್ಟ್ ಎಲಿಜಬೆತ್
ಕೇಪ್ ಟೌನ್
ಅಟ್ಲಾಂಟಿಕ್ ಸಾಗರ
ಹಿಂದೂ ಮಹಾ ಸಾಗರ

ಪ್ರವೇಶ

1962ನೇ ನವೆಂಬರ್ 7 ರಿಂದ ದಕ್ಷಿಣ ಆಫ್ರಿಕಾದ ಕುಪ್ರಸಿದ್ಧ ಜೈಲುಗಳಲ್ಲಿದ್ದು 1990ನೇ ಫೆಬ್ರುವರಿ 11 ರಂದು ಬಿಡುಗಡೆ ಹೊಂದಿರುವ ನೆಲ್ಸನ್ ಮಂಡೇಲಾ 'ವಿಶ್ವ ಮಾನವ' ಆಗಿ ಬೆಳೆದಿದ್ದಾರೆ. ಜಗತ್ತಿನ ಎಲ್ಲಾ ಸ್ವಾತಂತ್ರ್ಯ ಪ್ರಿಯರ ನೆಚ್ಚಿನ ನಾಯಕರಾಗಿ ಕಂಗೊಳಿಸುತ್ತಿದ್ದಾರೆ. ಶಾಂತಿ, ಸಮಾನತೆ, ಸ್ವಾತಂತ್ರ್ಯ ಮತ್ತು ಮಾನವ ಘನತೆಯ ಪ್ರತೀಕವಾದ ನೆಲ್ಸನ್ ಮಂಡೇಲಾ ಅವರ ಚೈತನ್ಯವನ್ನು ಬಂಧಿಸುವಲ್ಲಿ ದಕ್ಷಿಣ ಆಫ್ರಿಕಾದ ಅಮಾನುಷ ವರ್ಣಭೇದ ನೀತಿಯ ಸರ್ಕಾರ ವಿಫಲವಾಯಿತು.

28 ವರ್ಷಗಳ ಜೈಲುವಾಸ ಅವರ ಆತ್ಮಸ್ಥೈರ್ಯವನ್ನು ಕುಂದಿಸಲಿಲ್ಲ. ಕಷ್ಟಗಳ ಸಂಕೋಲೆಗಳಲ್ಲಿ ಸಿಕ್ಕ ಅವರ ಜನರಲ್ಲಿ ಅವರಿಗೆ ಇರುವ ವಿಶ್ವಾಸವನ್ನು ಕಡಿಮೆಗೊಳಿಸಲಿಲ್ಲ. ಪ್ರಜಾಪ್ರಭುತ್ವದಲ್ಲಿನ ನಂಬಿಕೆಯನ್ನು ನಾಶಪಡಿಸಲಿಲ್ಲ. ಹೋರಾಟದ ಹಾದಿಯನ್ನು ಬದಲಿಸಲಿಲ್ಲ. ಮಾನವೀಯತೆಯನ್ನು ಕದಲಿಸಲಿಲ್ಲ.

ವಿಸ್ತಾರವಾದ ಜೈಲು ಗೋಡೆಗಳಿಂದ ಅವರ ಕೀರ್ತಿಯನ್ನು ತಡೆಯಲಿಕ್ಕಾಗಲಿಲ್ಲ. ಭಾರವಾದ ಬಾಗಿಲುಗಳನ್ನು ಭದ್ರವಾಗಿ ಮುಚ್ಚಿ ಅವರ ಹೋರಾಟದ ಸಂದೇಶಗಳನ್ನು ಬಚ್ಚಿಡಲಿಕ್ಕಾಗಲಿಲ್ಲ. ಜೀವಿತದಲ್ಲೇ ದಂತಕಥೆ ಆದ ಅವರ ಬದುಕು ಎಲ್ಲ ದೌರ್ಜನ್ಯಗಳನ್ನು ದಾಟಿ ಸ್ವಾತಂತ್ರ್ಯದೆಡೆಗೆ ಮುನ್ನಡೆಯಿತು. ಜಗತ್ತಿನ ಎಲ್ಲ ದೇಶಗಳ ಎಲ್ಲ ಜನಾಂಗಗಳ ಹೃದಯಗಳನ್ನು ತಟ್ಟಿತು. ಹೀಗಾಗಿ ಮಂಡೇಲಾ ಎಲ್ಲ ದೇಶಗಳ ಪ್ರಜೆ ಆಗಿದ್ದಾರೆ. ದಬ್ಬಾಳಿಕೆಯನ್ನು ನಿಗ್ರಹಿಸುತ್ತ ವಿಶ್ವಪ್ರೇಮವನ್ನು ಸಾರುವ ಶಕ್ತಿ ಆಗಿದ್ದಾರೆ.

ಈ ಕಪ್ಪು ಮನುಷ್ಯ ಇಡೀ ಜಗತ್ತನ್ನು ಹೇಗೆ ಆಕರ್ಷಿಸಿದ ? ಈತ

ಜೈಲಿಗೆ ಹೋದ ನಂತರ ಈ ಭೂಮಿಗೆ ಬಂದವರು ಈತನ ಚೈತನ್ಯಕ್ಕೆ ಸ್ಪಂದಿಸುತ್ತ ಜೀವವನ್ನೇ ಪಣಕ್ಕಿಟ್ಟು ವರ್ಣಭೇದ ನೀತಿಯ ವಿರುದ್ಧ ಹೋರಾಟ ಮಾಡಲು ಹೇಗೆ ಸಾಧ್ಯ ? ದಬ್ಬಾಳಿಕೆಯನ್ನೇ ಕಾನೂನು ಬದ್ಧಗೊಳಿಸಿದ ದಕ್ಷಿಣ ಆಫ್ರಿಕಾ ಸರ್ಕಾರ ಕೊನೆಗೂ ಈತನಿಗೆ ಜೀವಾವಧಿ ಶಿಕ್ಷೆ ವಿಧಿಸಲು ಸೋತ ಕಾರಣವೇನು ? ಎಂಬ ಪ್ರಶ್ನೆಗೆ ಉತ್ತರ ಕಂಡುಕೊಳ್ಳುವುದು ಅವಶ್ಯವಾಗಿದೆ. ಈ ಉತ್ತರಕ್ಕಾಗಿ ದಕ್ಷಿಣ ಆಫ್ರಿಕಾದ ಭೂತ, ವರ್ತಮಾನ ಮತ್ತು ಭವಿಷ್ಯದ ಕಡೆ ಕಣ್ಣರಳಿಸಬೇಕಾಗಿದೆ.

ದಕ್ಷಿಣ ಆಫ್ರಿಕಾದ ವರ್ಣಭೇದ ನೀತಿ ಮಾನವ ಚರಿತ್ರೆಯಲ್ಲಿ ಒಂದು ಕರಾಳ ಅಂಶವಾಗಿದೆ. ವಿಶ್ವವೇ ಅದನ್ನು ಕೈಬಿಡುವಂತೆ ಕರೆ ನೀಡಿದರೂ ಅಲ್ಲಿನ ಸರ್ಕಾರಕ್ಕೆ ಕೇಳಿಸುತ್ತಿಲ್ಲ. ಆದರೆ ಶತಮಾನಗಳಿಂದ ಹೆಪ್ಪುಗಟ್ಟಿದ ಕರಿಯರ ರೋಷ ಈಗ ಉಕ್ಕಿ ಹರಿಯುತ್ತಿದೆ. ದಕ್ಷಿಣ ಆಫ್ರಿಕಾದಲ್ಲಿ ಇಂದು ಕರಿಯರ ಪ್ರತಿಭಟನೆ ಇಲ್ಲದ ಘಳಿಗೆ ಇಲ್ಲ.

ಆಫ್ರಿಕಾ ಖಂಡದ ಹೆಬ್ಬಾಗಿಲು ಎಂದು ಕರೆಯಿಸಿಕೊಳ್ಳುವ ದಕ್ಷಿಣ ಆಫ್ರಿಕಾ ಇಡೀ ಖಂಡದಲ್ಲೇ ಶ್ರೀಮಂತ ದೇಶ. ಆದರೆ ಅಲ್ಲಿನ ಮೂಲ ನಿವಾಸಿಗಳು ಕಡುಬಡವರು. ಅಪಾರ್ಥೈಡ್ (ವರ್ಣಭೇದ) ವ್ಯವಸ್ಥೆ ಮೂಲಕ ಅಲ್ಲಿನ ಬಿಳಿಯರು ದೇಶವನ್ನು ತಮ್ಮ ಕಪಿಮುಷ್ಟಿಯಲ್ಲಿ ಹಿಡಿದಿದ್ದಾರೆ.

ಆಫ್ರಿಕಾ ಖಂಡದ ಕೆಳತುದಿಯಲ್ಲಿ ದಕ್ಷಿಣ ಆಫ್ರಿಕಾ ಇದೆ. ವಾಯುವ್ಯ ದಿಕ್ಕಿನ ಗಡಿಗೆ ಹೊಂದಿಕೊಂಡು ನಮೀಬಿಯಾ ಇದೆ. ಉತ್ತರಕ್ಕೆ ಬೋಟ್ಸ್ವಾನಾ (ಬೆಚುವಾನಾಲ್ಯಾಂಡ್) ಮತ್ತು ಜಿಂಬಾಬ್ವೆ ದೇಶಗಳಿವೆ. ಈಶಾನ್ಯ ಗಡಿಗೆ ಹೊಂದಿಕೊಂಡು ಮೊಜಾಂಬಿಕ್ ಇದೆ. ಪೂರ್ವಕ್ಕೆ ಸ್ವಾಜಿಲ್ಯಾಂಡ್ ಇದೆ. ದಕ್ಷಿಣ ಆಫ್ರಿಕಾ ಇಡೀ ಲೆಸೊತೋ (ಬಸುತೊಲ್ಯಾಂಡ್) ದೇಶವನ್ನು ಸುತ್ತುವರಿದಿದೆ.

4,71,445 ಚದರ ಮೈಲಿ ವಿಸ್ತೀರ್ಣದ ದಕ್ಷಿಣ ಆಫ್ರಿಕಾದಲ್ಲಿ ಶೇ 11.16 ರಷ್ಟು ಕೃಷಿ ಭೂಮಿ ಇದೆ. ಶೇ 65.40 ರಷ್ಟು ಹುಲ್ಲುಗಾವಲಿದೆ. ಶೇ 3.40 ರಷ್ಟು ಅರಣ್ಯವಿದೆ. ಶೇ 20.04 ರಷ್ಟು ಇತರ ಭೂಮಿ ಇದೆ.

ಶೇ. 11ರಷ್ಟು ವ್ಯವಸಾಯ ಯೋಗ್ಯ ಭೂಮಿ ಇದೆ. 1790 ಮೈಲಿಗಳಷ್ಟು ಉದ್ದದ ಕರಾವಳಿ ಪ್ರದೇಶವಿದೆ. 3090 ಮೈಲಿಗಳಷ್ಟು ಉದ್ದದ ಗಡಿ ಇದೆ.

ದಕ್ಷಿಣ ಆಫ್ರಿಕಾದ ಒಟ್ಟು ಜನಸಂಖ್ಯೆ 357 ಲಕ್ಷ. ಅವರಲ್ಲಿ 253 ಲಕ್ಷ ಕರಿಯರು, 60 ಲಕ್ಷ ಬಿಳಿಯರು, 32 ಲಕ್ಷ ಮಿಶ್ರವರ್ಣೀಯರು ಮತ್ತು 11 ಲಕ್ಷ ಏಷ್ಯನ್ನರು ಇದ್ದಾರೆ. ಏಷ್ಯನ್ನರಲ್ಲಿ 3.5 ಲಕ್ಷ ಮಂದಿ ಹಿಂದೂಗಳಿದ್ದಾರೆ. ಮುಸ್ಲಿಮರ ಸಂಖ್ಯೆ 2.5 ಲಕ್ಷ, 1.2 ಲಕ್ಷ ಯಹೂದಿಗಳೂ ಉಂಟು.

ಬಿಳಿಯರಲ್ಲಿ ಶೇ 60 ರಷ್ಟು ಆಫ್ರಿಕಾನರಿದ್ದಾರೆ. ಶೇ 40 ರಷ್ಟು ಬಿಳಿಯರು ಆಂಗ್ಲ ಸಂತತಿಗೆ ಸೇರಿದವರಾಗಿದ್ದಾರೆ. ಆಫ್ರಿಕಾನ್ ಜನಾಂಗದಲ್ಲಿ ಬಹುಪಾಲು ಮಂದಿ ಡಚ್ ಸಂತತಿಗೆ ಸೇರಿದವರಿದ್ದಾರೆ. ಉಳಿದವರು ಜರ್ಮನ್ ಮತ್ತು ಫ್ರೆಂಚ್ ಮೂಲದವರಾಗಿದ್ದಾರೆ.

ಡಚ್ ಬಿಳಿಯರ ಆಫ್ರಿಕಾನ್ ಭಾಷೆ ಮತ್ತು ಬ್ರಿಟಿಷ್ ಬಿಳಿಯರ ಇಂಗ್ಲಿಷ್ ಭಾಷೆ ಆಡಳಿತ ಭಾಷೆಗಳಾಗಿವೆ. ಪ್ರಿಟೋರಿಯಾ ನಗರ ಆಡಳಿತಕ್ಕೆ ಸಂಬಂಧಿಸಿದ ರಾಜಧಾನಿ. ಕೇಪ್‌ಟೌನ್ ಶಾಸಕಾಂಗದ ರಾಜಧಾನಿಯಾದರೆ ಬ್ಲೋಯೆಮ್‌ಫೋಂಟೇನ್ ನ್ಯಾಯಾಂಗಕ್ಕೆ ಸಂಬಂಧಿಸಿದ ರಾಜಧಾನಿ. ಇಲ್ಲಿ ಚಲಾವಣೆಯಲ್ಲಿರುವ ನಾಣ್ಯದ ಹೆಸರು ರ್‍ಯಾಂಡ್.

ಅನಾದಿ ಕಾಲದಿಂದಲೂ ಆಫ್ರಿಕಾ ಖಂಡ ಕರಿಯರ ವಾಸಸ್ಥಳವಾಗಿದೆ. ಖೊಯಿ ಖೊಯಿ ಎಂಬ ಕಪ್ಪು ಜನಾಂಗ ಕ್ರಿ. ಶ. 1000ಕ್ಕೆ ಮೊದಲು ಮಧ್ಯ ಆಫ್ರಿಕಾದಿಂದ ಈ ಪ್ರದೇಶಕ್ಕೆ ವಲಸೆ ಬಂದಿತು. ಟ್ರಾನ್ಸ್‌ವಾಲ್‌ನಲ್ಲಿ ತಳವೂರಿತು. ಜುಲು ಮತ್ತು ಕ್ಸೋಸಾ ಜನಾಂಗದ ಮೂಲದವರು ಕ್ರಿ.ಶ. 1500 ರ ವೇಳೆಗೆ ಪೂರ್ವದ ಕರಾವಳಿಯ ಬಹುಭಾಗದಲ್ಲಿ ಜೀವನ ಸಾಗಿಸಿದ್ದರು.

ಪೋರ್ತುಗೀಜ್‌ನ ಶೋಧಕ ಬಾರ್ತೊಲೊಮೆವ್ ಡಿಯಾಜ್ 1488ರಲ್ಲಿ ಕೇಪ್ ಆಫ್ ಗುಡ್ ಹೋಪ್ ತಲುಪಿದ. ಆಫ್ರಿಕಾ ಖಂಡದ ದಕ್ಷಿಣ ತುದಿಯಲ್ಲೆಲ್ಲ ಸುತ್ತಾಡಿದ.

ಕ್ರಿ.ಶ. 1600ರ ವೇಳೆಗೆ ಇಂಗ್ಲಿಷರು, ಡಚ್ಚರು ಮತ್ತು ಫ್ರೆಂಚರು

ಭಾರತೀಯ ವ್ಯಾಪಾರದ ಮೇಲೆ ಹಿಡಿತ ಸಾಧಿಸಿದ್ದರು. ಭಾರತಕ್ಕೆ ಹೋಗುವ ವ್ಯಾಪಾರಿ ಹಡಗುಗಳಿಗೆ ದಕ್ಷಿಣ ಆಫ್ರಿಕಾ ತಂಗುದಾಣವಾಯಿತು. 1652ನೇ ಏಪ್ರಿಲ್ 6ರಂದು ಡಚ್‌ಈಸ್ಟ್ ಇಂಡಿಯಾ ಕಂಪೆನಿಯ ಜಾನ್ ವಾನ್ ರಿಬೀಕ್ ಮೂರು ಹಡಗುಗಳೊಂದಿಗೆ ಬಂದಿಳಿದ. ನಾವಿಕರಿಗೆ ತಾಜಾ ಮಾಂಸದ ಅವಶ್ಯಕತೆ ಇತ್ತು. ಮುಂದೆ ಬಹುದೂರ ಸಾಗಬೇಕಿತ್ತು. ವಿಶ್ರಾಂತಿಯ ಈ ಸ್ಥಾನದ ಮೇಲೆ ಇಂಗ್ಲಿಷ್ ಮತ್ತು ಫ್ರೆಂಚರ ಕಣ್ಣು ಬಿದ್ದಿತ್ತು. ಆದರೆ ಜಾನ್‌ವಾನ್ ರಿಬೀಕ್ ತನ್ನ ನಾವಿಕರೊಂದಿಗೆ ಅಲ್ಲೇ ತಳವೂರಿದ. ಆ ಪ್ರದೇಶದ ಸಾನ್ ಮತ್ತು ಖೊಯಿ ಜನಾಂಗದವರಿಂದ ಭೂಮಿ ಮತ್ತು ದನಗಳನ್ನು ತೆಗೆದುಕೊಳ್ಳಲಾಯಿತು. ಅವರನ್ನು ಹತ್ತಿಕ್ಕಲಾಯಿತು. ಹೀಗೆ ದಕ್ಷಿಣ ಆಫ್ರಿಕಾದಲ್ಲಿ ಬಿಳಿಯರ ದಬ್ಬಾಳಿಕೆ ಶುರುವಾಯಿತು.

ಡಚ್ ಈಸ್ಟ್ ಇಂಡಿಯಾ ಕಂಪೆನಿ 1652ರಲ್ಲಿ ಸರಬರಾಜು ಕೇಂದ್ರ ಸ್ಥಾಪಿಸಿದ ನಂತರ ಬಿಳಿಯರು ಕೇಪ್‌ಟಾನ್‌ನಲ್ಲಿ ಶಾಶ್ವತವಾಗಿ ಉಳಿದರು. ಡಚ್ ಸೈನಿಕರನ್ನು ಸೇವೆಯಿಂದ ಬಿಡುಗಡೆ ಮಾಡಿ ಆಹಾರ ಧಾನ್ಯ ಬೆಳೆಯಲು ಅವಕಾಶ ನೀಡಲಾಯಿತು. 1688ರಲ್ಲಿ ಫ್ರೆಂಚರು ಬಂದು ನೆಲಸಿದರು. 1795ರಲ್ಲಿ ಬ್ರಿಟಿಷರು ಬಂದು ಡಚ್ ಕಾಲೋನಿ ಆಗಿದ್ದ ಕೇಪ್ ಆಫ್ ಗುಡ್ ಹೋಪ್‌ಗೆ ಮುತ್ತಿಗೆ ಹಾಕಿದರು. ಅಂದಿನಿಂದ ಆಫ್ರಿಕಾನರು ಮತ್ತು ಆಂಗ್ಲರ ಮಧ್ಯೆ ಕಿತ್ತಾಟ ಪ್ರಾರಂಭವಾಯಿತು. 1657ರಲ್ಲಿ ಕೃಷಿ ಕೆಲಸಕ್ಕಾಗಿ ಪಶ್ಚಿಮ ಆಫ್ರಿಕಾ ಮತ್ತು ಏಷ್ಯಾದಿಂದ ಗುಲಾಮರನ್ನು ತರಲಾಯಿತು.

1820ರವರೆಗೆ ಡಚ್ ಭಾಷೆಯಲ್ಲಿ ಆಡಳಿತ ನಡೆಯುತ್ತಿತ್ತು. ನಂತರ ಇಂಗ್ಲಿಷ್ ಆಡಳಿತ ಭಾಷೆ ಆಯಿತು. ಬ್ರಿಟಿಷರ ರಾಜಕೀಯ ಹಿಡಿತ ಮತ್ತು ಸಾಂಸ್ಕೃತಿಕ ಪ್ರಾಬಲ್ಯದಿಂದ ತಪ್ಪಿಸಿಕೊಳ್ಳುವುದಕ್ಕಾಗಿ 1836ರಲ್ಲಿ ಬೋಅರ್ (ಆಫ್ರಿಕಾನರ್ ರೈತರು)ಗಳು ಉತ್ತರದ ಕಡೆ ವಲಸೆ ಹೋದರು. ಇದಕ್ಕೆ 'ದಿ ಗ್ರೇಟ್ ಟ್ರೆಕ್' ಎಂದು ಕರೆಯುತ್ತಾರೆ.

10 ಸಾವಿರದಷ್ಟು ಬೋಅರ್ ಗಂಡಸರು ಮತ್ತು ಹೆಂಗಸರು ತಮ್ಮ ಮನೆ ಮಠ ಬಿಟ್ಟು ಕೇಪ್‌ನಲ್ಲಿನ ಬ್ರಿಟಿಷ್ ಸರ್ಕಾರದಿಂದ ಸಾಧ್ಯವಾದಷ್ಟು ದೂರ ದೂರ ಹೋದರು. ಇದರಿಂದಾಗಿ ತುಂಬ ಕಷ್ಟ-ನಷ್ಟ ಅನುಭವಿಸಿ

ದರು. ಈ ಸಂದರ್ಭದಲ್ಲಿ ಅವರು ಜುಲುಗಳ ಜತೆ ಹೋರಾಡಬೇಕಾಯಿತು. 1838ರಲ್ಲಿ ಬೋಅರ್‌ಗಳು ಜುಲು ಜನರನ್ನು ಸೋಲಿಸಿದರು. 1852 ಮತ್ತು 1854ರಲ್ಲಿ ಟ್ರಾನ್ಸ್‌ವಾಲ್ ಮತ್ತು ಆರೇಂಜ್ ಫ್ರೀ ಸ್ಟೇಟ್‌ಗಳೆಂಬ ಬೋಅರ್ ಗಣರಾಜ್ಯಗಳನ್ನು ಸ್ಥಾಪಿಸಲಾಯಿತು. ಬ್ರಿಟಿಷರು ಅವರ ಮೇಲೆ ಯುದ್ಧ ಸಾರುತ್ತಲೆ ಇದ್ದರು.

ಉತ್ತರ ನತಾಲ್‌ನಲ್ಲಿ ಜುಲುಗಳ ಪ್ರಾಬಲ್ಯ ಇನ್ನೂ ಇತ್ತು. 1879ರಲ್ಲಿ ಬ್ರಿಟಿಷರು ಅವರ ಮೇಲೆ ದಾಳಿ ಮಾಡಿ ಜುಲು ಸೈನ್ಯವನ್ನು ಧ್ವಂಸ ಮಾಡಿದರು. ಜುಲುಲ್ಯಾಂಡ್ ಮೇಲೆ ಪ್ರಭುತ್ವ ಸ್ಥಾಪಿಸಿದರು.

1867ರಲ್ಲಿ ಕಿಂಬರ್ಲಿಯಲ್ಲಿ ವಜ್ರದ ನಿಕ್ಷೇಪ ಪತ್ತೆ ಆಯಿತು. 19 ವರ್ಷಗಳ ನಂತರ ಟ್ರಾನ್ಸ್‌ವಾಲ್ ಪ್ರದೇಶದ ವಿಟ್ ವಾಟರ್ಸ್‌ರ್ಯಾಂಡ್‌ನಲ್ಲಿ ಚಿನ್ನದ ನಿಕ್ಷೇಪ ಪತ್ತೆ ಆಯಿತು. ತದನಂತರ ಯುರೋಪಿಯನ್ನರು ಮುಖ್ಯವಾಗಿ ಬ್ರಿಟಿಷರು ದಕ್ಷಿಣ ಆಫ್ರಿಕಾಕ್ಕೆ ನುಗ್ಗತೊಡಗಿದರು ಈ ಸಂಪತ್ತು ದಕ್ಷಿಣ ಆಫ್ರಿಕಾದ ರಾಜಕೀಯ ಮತ್ತು ಆರ್ಥಿಕ ಸ್ಥಿತಿಯನ್ನೇ ಬದಲಾಯಿಸಿತು.

ಈ ನಿಕ್ಷೇಪಗಳಿಂದಾಗಿ ಬ್ರಿಟಿಷರು ಬೋಅರ್‌ಗಳ ಮೇಲೆ ತೀವ್ರ ದಾಳಿ ಪ್ರಾರಂಭಿಸಿದರು. ಇವು ಆಂಗ್ಲೋ–ಬೋಅರ್ ಯುದ್ಧಗಳೆಂದು ಪ್ರಸಿದ್ಧವಾಗಿವೆ. 1880–81 ಮತ್ತು 1899–1902ರಲ್ಲಿ ಈ ಯುದ್ಧಗಳು ನಡೆದವು. ಕೊನೆಯ ಯುದ್ಧ ಭಯಂಕರವಾಗಿತ್ತು. ಬೋಅರ್ ಗಣರಾಜ್ಯಗಳ ಪ್ರತಿಯೊಂದು ಹೊಲ–ತೋಟ ಧ್ವಂಸವಾಗಿತ್ತು. 26 ಸಾವಿರ ಬೋಅರ್ ಹೆಂಗಸರು ಮತ್ತು ಮಕ್ಕಳು ಬ್ರಿಟಿಷರ ಯಾತನಾ ಶಿಬಿರಗಳಲ್ಲಿ ಸಾಂಕ್ರಾಮಿಕ ರೋಗದಿಂದ ಅಸುನೀಗಿದರು. ಯುದ್ಧದಲ್ಲಿ 6 ಸಾವಿರ ಬೋಅರ್ ಸೈನಿಕರು ಮತ್ತು 7792 ಬ್ರಿಟಿಷ್ ಸೈನಿಕರು ಸತ್ತರು. 35 ಸಾವಿರ ಬೋಅರ್‌ಗಳು ಮತ್ತು ಮೂರು ಲಕ್ಷ ಬ್ರಿಟಿಷರು ಯುದ್ಧದಲ್ಲಿ ಭಾಗವಹಿಸಿದ್ದರು. ಯುದ್ಧದಲ್ಲಿ ಗೆದ್ದ ಬ್ರಿಟಿಷರು ಬೋಅರ್ ಗಣರಾಜ್ಯಗಳನ್ನು ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಸೇರಿಸಿಕೊಂಡರು.

1910ನೇ ಮೇ 31ರಂದು ಕೇಪ್ ಮತ್ತು ನತಾಲ್ ಬ್ರಿಟಿಷ್ ಕಾಲೋನಿ ಮತ್ತು ಹಾಗೂ ಬೋಅರ್ ಗಣರಾಜ್ಯಗಳನ್ನು ಸೇರಿಸಿ ಬ್ರಿಟಿಷ್

ಸಾಮ್ರಾಜ್ಯದ ಅಡಿಯಲ್ಲಿ 'ಯೂನಿಯನ್ ಆಫ್ ಸೌತ್ ಆಫ್ರಿಕಾ' ಸ್ಥಾಪಿಸಲಾಯಿತು. ಜೂನ್ 1934ರಲ್ಲಿ ದಕ್ಷಿಣ ಆಫ್ರಿಕಾ ಸ್ವತಂತ್ರ ದೇಶವಾಯಿತು. 1961ನೇ ಮೇ 31ರಂದು ಬ್ರಿಟಿಷ್ ಹಿಡಿತದಿಂದ ಬಿಡಿಸಿಕೊಂಡು 'ಗಣರಾಜ್ಯ'ವಾಯಿತು.

ಆಡಳಿತ ನಡೆಸುತ್ತಿರುವ ನ್ಯಾಷನಲ್ ಪಾರ್ಟಿ ಆಫ್ರಿಕಾನರ್‌ಗೆ ಸೇರಿದ್ದರೆ ಆಂಗ್ಲರ ಪ್ರೊಗ್ರೆಸ್ಸಿವ್ ಫೆಡರಲ್ ಪಾರ್ಟಿ'ದಿ ಯುನೈಟೆಡ್ ಪಾರ್ಟಿ' ವಿರೋಧ ಪಕ್ಷವಾಗಿದೆ. ಈ ಗಣರಾಜ್ಯದಲ್ಲಿ ಕರಿಯರಿಗೆ ಮತ ಚಲಾಯಿಸುವ ಹಕ್ಕು ಇಲ್ಲ.

ಗಣಿ ಉದ್ಯಮ ಈ ದೇಶದ ಅರ್ಥ ವ್ಯವಸ್ಥೆಯ ಬೆನ್ನೆಲುಬಾಗಿದೆ. ಇಲ್ಲಿ 70 ಪ್ರಕಾರದ ಖನಿಜಗಳ ಗಣಿಗಳಿವೆ,ಬಂಡವಾಳ ಷಾಹಿ ಜಗತ್ತಿನ ಶೇ. 70ರಷ್ಟು ಬಂಗಾರ ಇಲ್ಲಿಯೇ ದೊರೆಯುತ್ತದೆ. ಕ್ರೋಮಿಯಂ, ಕಲ್ಲಿದ್ದಲು, ಮ್ಯಾಂಗನೀಜ್, ಕಬ್ಬಿಣ, ರತ್ನ, ವಜ್ರ, ಯುರೇನಿಯಂ, ಪ್ಲಾಟಿನಂ, ತಾಮ್ರ ಮುಂತಾದವುಗಳಿಗೆ ದಕ್ಷಿಣ ಆಫ್ರಿಕಾ ಪ್ರಸಿದ್ಧವಾಗಿದೆ. ಇಲ್ಲಿ 1200 ಬ್ರಿಟಿಷ್ ಕಂಪೆನಿಗಳಿವೆ. 350 ಅಮೇರಿಕನ್, 165 ಫ್ರೆಂಚ್ ಮತ್ತು 450 ಪಶ್ಚಿಮ ಜರ್ಮನಿ ಕಂಪೆನಿಗಳಿವೆ. ಬಿಳಿಯರು ಇಡೀ ದೇಶವನ್ನು 'ಅಪಾರ್ಥೈಡ್' ನೀತಿ ಮೂಲಕ ಲೂಟಿ ಮಾಡುತ್ತಿದ್ದಾರೆ. ಕರಿಯರು ತಮ್ಮ ನಾಡಿನಲ್ಲೇ ಪರಕೀಯರಾಗಿದ್ದಾರೆ.

ದಕ್ಷಿಣ ಆಫ್ರಿಕಾದ ಚಿನ್ನದ ಗಣಿಗಳಲ್ಲಿ ಪ್ರತಿವರ್ಷ ಕನಿಷ್ಠ 600 ಮಂದಿ ಸಾಯುತ್ತಾರೆ ಎಂದು ಅಧಿಕೃತ ಪ್ರಕಟನೆಯೆ ತಿಳಿಸಿದೆ. ನಿಜವಾದ ಅಂಕಿ-ಸಂಖ್ಯೆ ಇವಕ್ಕೂ ಭೀಕರವಾಗಿರುತ್ತದೆ.

ಅಪಾರ್ಥೈಡ್

ಆಫ್ರಿಕಾನ್ ಭಾಷೆಯಲ್ಲಿ ಅಪಾರ್ + ಥೈಡ್ ಎಂದರೆ ಪ್ರತ್ಯೇಕ ಅಭಿವೃದ್ಧಿ ಎಂದು ಅರ್ಥ. ಇದು 'ವರ್ಣಭೇದ ನೀತಿ' ಎಂದು ಕುಪ್ರಸಿದ್ಧವಾಗಿದೆ. ಬಿಳಿಯರು ಕರಿಯರನ್ನು ಸಂವಿಧಾನಾತ್ಮಕವಾಗಿ ದ್ವೇಷಿಸಲು ಮತ್ತು ಅವರಿಗೆ

ಯಾವುದೇ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಸೌಲಭ್ಯಗಳನ್ನು ದೊರೆಯದಂತೆ ಮಾಡಲು ಅಪಾರ್ಥೈಡ್ ಬಹು ಸಹಕಾರಿಯಾಗಿದೆ.

ಈ ಅಪಾರ್ಥೈಡ್ ನೀತಿಯ ಪ್ರಕಾರ ದಕ್ಷಿಣ ಆಫ್ರಿಕಾದ ಶೇ. 83ರಷ್ಟು ಭೂಮಿ ಶೇ 17ರಷ್ಟಿರುವ ಬಿಳಿಯರಿಗೆ ಮೀಸಲಾಗಿದೆ. ಶೇ. 13ರಷ್ಟು ಪಾಳು ಬಿದ್ದ ಭೂಮಿ ಶೇ. 71ರಷ್ಟಿರುವ ಕರಿಯರ ಪಾಲಿಗೆ ಬಂದಿದೆ! ಐಹಿಕ ಅಭ್ಯುದಯದಿಂದ ಬಿಳಿಯರು ಉನ್ಮತ್ತರಾಗಿದ್ದಾರೆ. ಕರಿಯರಿಗೆ ಜೀವಿಸಲು ಬೇಕಾದಷ್ಟು ಮಾತ್ರ ಸಿಗುತ್ತದೆ. ಬಿಳಿಯರ ಕೆಲಸ ಮಾಡಲು ಕರಿಯರು ಬದುಕಬೇಕಾಗಿದೆ. ಬಿಳಿಯ ಕಾರ್ಮಿಕರು ಕರಿಯರು ಪಡೆಯುವ ಕೂಲಿಗಿಂತ ಆರು ಪಟ್ಟು ಹೆಚ್ಚು ಪಡೆಯುತ್ತಾರೆ. ಕೆಲ ವರ್ಷಗಳ ಹಿಂದೆ ಅವರು 20ಪಟ್ಟು ಜಾಸ್ತಿ ಪಡೆಯುತ್ತಿದ್ದರು. ಕರಿಯರಿಗೆ ಯಾವುದೇ ಕುಶಲ ಕೆಲಸ ಕಲಿಯುವ ಅವಕಾಶವಿಲ್ಲ.

ಡಚ್ಚರು ಬಂದೊಡನೆ ಈ ಅಪಾರ್ಥೈಡ್ ವ್ಯವಸ್ಥೆ ಜಾರಿಗೆ ಬಂದಿತು. 1948ರ ಚುನಾವಣೆಯಲ್ಲಿ ಇದೊಂದು ಸಿದ್ಧಾಂತವಾಗಿ ರೂಪಗೊಂಡಿತು. ಆ ಚುನಾವಣೆ ಸಂದರ್ಭದಲ್ಲಿ ನ್ಯಾಷನಲ್ ಪಾರ್ಟಿಯ ಡೇನಿಯಲ್ ಎಫ್. ಮಲಾನ್ ಈ ಸಿದ್ಧಾಂತ ಬಳಸಿ ವಿಜಯ ಸಾಧಿಸಿದ. ಈ ಜನಾಂಗಭೇದ ನೀತಿ ಇಂದಿಗೂ ನ್ಯಾಷನಲ್ ಪಾರ್ಟಿಯ ಸಿದ್ಧಾಂತವಾಗಿದೆ.

ವರ್ಣಭೇದ ನೀತಿಯಿಂದಾಗಿ ಕರಿಯರ ಬದುಕು ಅತ್ಯಂತ ಹೀನ ಸ್ಥಿತಿಯನ್ನು ತಲುಪಿದೆ. ದಕ್ಷಿಣ ಆಫ್ರಿಕಾದಲ್ಲಿ ಪ್ರತಿವರ್ಷ 30 ಸಾವಿರದಷ್ಟು ಕರಿಯ ಮಕ್ಕಳು ಪೌಷ್ಟಿಕ ಆಹಾರದ ಕೊರತೆಯಿಂದ ಸಾಯುತ್ತಾರೆ. 400 ಬಿಳಿಯರಿಗೆ ಒಬ್ಬ ವೈದ್ಯನಿದ್ದರೆ 40 ಸಾವಿರ ಕರಿಯರಿಗೆ ಒಬ್ಬ ವೈದ್ಯನಿದ್ದಾನೆ. ಇಲ್ಲಿ ಜನಾಂಗಹತ್ಯೆ ಅವ್ಯಾಹತವಾಗಿದೆ. ಇಲ್ಲಿಯಷ್ಟು ಕ್ರೂರ ಕಾನೂನುಗಳು ಯಾವ ದೇಶದಲ್ಲೂ ಇಲ್ಲ. ಈ ಕಾನೂನುಗಳು ಬಿಳಿಯರ ರಕ್ಷಾಕವಚಗಳಾಗಿವೆ. ಕರಿಯರ ಬದುಕು ಹೀರುವ ಸಾಧನಗಳಾಗಿವೆ. ಇಲ್ಲಿನ ಜೈಲುಗಳಲ್ಲಿ ಪ್ರತಿ ವರ್ಷ ಕನಿಷ್ಠ 2,700,00 ಕರಿಯರನ್ನು ತುಂಬಲಾಗುತ್ತಿದೆ. ಗಲ್ಲುಶಿಕ್ಷೆ ವಿಧಿಸುವಲ್ಲಿ ಈ ದೇಶ ವಿಶ್ವದಲ್ಲೇ ಪ್ರಥಮಸ್ಥಾನ ಪಡೆದಿದೆ. ಇಲ್ಲಿನ ಪೊಲೀಸರು ಸಾಮೂಹಿಕ ಹತ್ಯೆ ಮಾಡುವಲ್ಲಿ ನಿಸ್ಸೀಮರು.

ಕರಿಯರು ಗುಂಡಿಗಷ್ಟೇ ಆಹುತಿ ಆಗುವುದಿಲ್ಲ. ಜೈಲುಗಳಲ್ಲಿ ಅವರನ್ನು ಹೊಡೆದು ಸಾಯಿಸಲಾಗುತ್ತಿದೆ. ವಿದ್ಯುತ್ ಸ್ಪರ್ಶದಿಂದ ಕೊಲ್ಲಲಾಗುತ್ತದೆ. ನಿದ್ದೆಗೆಡಿಸಿ ಉಪವಾಸವಿಟ್ಟು ಜೀವ ತೆಗೆದುಕೊಳ್ಳಲಾಗುತ್ತದೆ.

ಅಪಾರ್ಥೈಡ್ ನೀತಿ ಬರ್ಬರವಾಗಿದೆ. ಯಾವುದೇ ನಾಗರಿಕ ಸಮಾಜ ಹೇಸಿಕೊಳ್ಳುವಷ್ಟು ಜನಾಂಗ ದ್ವೇಷದಿಂದ ತುಂಬಿದೆ. ವಿಶ್ವಶಾಂತಿಗೆ ಬೆದರಿಕೆ ಒಡ್ಡುವಂಥದ್ದಾಗಿದೆ. ಇದರಿಂದಾಗಿ ದಕ್ಷಿಣ ಆಫ್ರಿಕಾ ಮಿಲಿಟರಿ ಮತ್ತು ಪೊಲೀಸ್ ರಾಜ್ಯವಾಗಿದೆ. ಈ ವರ್ಣಭೇದ ನೀತಿಯು ಜನಾಂಗವಾದೀ ಸರ್ಕಾರದ ಜತೆ ಸಹಕರಿಸುವುದು. ವಿಶ್ವಸಂಸ್ಥೆಯ ಉದ್ದೇಶ ಮತ್ತು ತತ್ವಗಳ ವಿರುದ್ಧವಾಗಿದೆ ಎಂದು ವಿಶ್ವಸಂಸ್ಥೆ ಘೋಷಿಸಿದೆ,

ಅಪಾರ್ಥೈಡ್ ವ್ಯವಸ್ಥೆಯಿಂದಾಗಿ ಬಿಳಿಯರು ಕರಿಯರನ್ನು ಪ್ರಾಣಿಗಳಂತೆ ಕಾಣುತ್ತಾರೆ. ಬಿಳಿಯರು ಎದುರು ಬಂದರೆ ಕರಿಯರು (ತಲೆಯ ಮೇಲೆ ಹ್ಯಾಟ್ ಇದ್ದರೆ ತೆಗೆದು) ಪಕ್ಕಕ್ಕೆ ಸರಿಯಬೇಕು. ಬಿಳಿಯರಿಗೆ ಮೀಸಲಾಗಿರುವ ಹೋಟೆಲ್, ಬಸ್, ರೈಲ್ವೆ ಬೋಗಿ, ಪಾರ್ಕ್ ಮುಂತಾದ ಸ್ಥಳಗಳಲ್ಲಿ ಕಾಲಿಡಬಾರದು.

ಕರಿಯ ಪುರುಷ ಟ್ರಾಕ್ಟರ್ ಚಾಲಕನಾಗುವುದೆಂದರೆ ಅತಿ ದೊಡ್ಡ ಹುದ್ದೆ ಪಡೆದಂತೆ. ಕರಿಯ ಮಹಿಳೆ ನರ್ಸ್ ಆಗುವುದೆಂದರೆ ಅತಿ ದೊಡ್ಡ ಸಾಧನೆ ಮಾಡಿದಂತೆ. ಉನ್ನತ ವಿದ್ಯಾಭ್ಯಾಸಕ್ಕಾಗಿ ಕರಿಯರಿಗೆ ಯಾವುದೇ ರೀತಿಯ ಅವಕಾಶಗಳಿಲ್ಲ. ಅಪಾರ್ಥೈಡ್ಎಂದರೆ ಬಿಳಿಯರ ಸುಖದ ಅಭಿವೃದ್ಧಿ ಮತ್ತು ಕರಿಯರ ದುಃಖದ ಅಭಿವೃದ್ಧಿ.

ಬಂಟುಸ್ತಾನ್‌ಗಳು

ಕ್ಸೋಸಾ ಭಾಷೆಯಲ್ಲಿ 'ಬಂಟು' ಎಂದರೆ ಜನಾಂಗ. ದಕ್ಷಿಣ ಆಫ್ರಿಕಾದಲ್ಲಿ ಮುಖ್ಯವಾಗಿ 10 ಬುಡಕಟ್ಟುಗಳಿವೆ. ಈ ಜನಾಂಗಗಳಿಗೆ 10 ತಾಯ್ನಾಡುಗಳಿವೆ. ಅವುಗಳಿಗೆ ಬಂಟುಸ್ತಾನ್‌ಗಳೆಂದು ಕರೆಯುತ್ತಾರೆ. ಬಂಟುಸ್ತಾನ್ ವ್ಯವಸ್ಥೆ ಮತ್ತು ವರ್ಣಭೇದ ನೀತಿ ಒಂದಕ್ಕೊಂದು ಪೂರಕ

ವಾಗುವಂತೆ ಸರ್ಕಾರ ನೋಡಿಕೊಂಡಿದೆ. ಕರಿಯರನ್ನು ಪ್ರತ್ಯೇಕವಾಗಿ ಇಡುವುದರ ಮೂಲಕ ಅವರಲ್ಲಿ ಒಗ್ಗಟ್ಟು ಮೂಡದಂತೆ ಪ್ರಯತ್ನಿಸಿದೆ.

ಹತ್ತು ಬಂಟುಸ್ತಾನ್‌ಗಳು ಮತ್ತು ಜನಾಂಗಗಳು ಈ ರೀತಿ ಇವೆ; (ಆವರಣದಲ್ಲಿ ಜನಾಂಗಗಳ ಹೆಸರುಗಳಿವೆ) ಬೊಫುಥಾಟ್ಸ್‌ವಾನಾ (ಟ್ಸ್ವಾನಾ) ಸಿಸ್ಕೇಯಿ (ಕ್ಸೋಸಾ) ಟ್ರಾನ್ಸ್‌ಕೆಯಿ (ಕ್ಸೋಸಾ) ವೆಂಡಾ (ವೆಂಡಾ) ಕಂಗ್ವಾನೆ (ಸ್ವಾಜಿ) ಕ್ವಾಜುಲು (ಜುಲು) ಲೆಬೋವಾ (ಉಸೋತೊ) ಕ್ವಾಕ್ವಾ (ದಸೋತೊ) ಗಜಾಂಕುಲು (ಶಾಂಗಾನ್-ತ್ಸೋಂಗಾ) ಕ್ವಾಂಡೆಬೆಲೆ(ನ್ಡೇಬೆಲೆ) ಈ ಬಂಟುಸ್ತಾನ್‌ಗಳು ಬೃಹತ್ ಬಯಲು ಬಂದೀಖಾನೆಗಳಂತಿವೆ.

ಟ್ರಾನ್ಸ್‌ಕೆಯಿ, ಬೊಫುಥಾಟ್ಸ್‌ವಾನಾ, ವೆಂಡಾ ಮತ್ತು ಸಿಸ್ಕೇಯಿ ಬಂಟುಸ್ತಾನ್‌ಗಳಿಗೆ ಸ್ವಾತಂತ್ರ್ಯ ಘೋಷಿಸಲಾಗಿದೆ. ಮತ್ತು ಉಳಿದ ಬಂಟುಸ್ತಾನ್‌ಗಳಲ್ಲಿ ಸ್ವಯಂ ಆಡಳಿತ ಪದ್ಧತಿ ಇದೆ ಎಂದು ದಕ್ಷಿಣ ಆಫ್ರಿಕಾ ಸರ್ಕಾರ ಹೇಳುವುದು ಹಾಸ್ಯಾಸ್ಪದವಾಗಿದೆ. ಜಗತ್ತಿನ ಯಾವುದೇ ದೇಶ ಇವುಗಳಿಗೆ ಮಾನ್ಯತೆ ನೀಡಿಲ್ಲ.

ಅಪಾರ್ಥೈಡ್ ವ್ಯವಸ್ಥೆಯನ್ನು ಗಟ್ಟಿಗೊಳಿಸುವುದಕ್ಕಾಗಿಯೇ ಬಂಟುಸ್ತಾನ್‌ಗಳನ್ನು ಸೃಷ್ಟಿಸಲಾಗಿದೆ. ಇವು ನಿಜವಾದ ಅರ್ಥದಲ್ಲಿ ನಿರುದ್ಯೋಗಿಗಳ ಕೊಳಚೆ ಪ್ರದೇಶಗಳಾಗಿವೆ. ಬಂಟುಸ್ತಾನ್‌ಗಳ ಕರಿಯ ನಾಯಕರನೇಕರು ಬಿಳಿಯರ ಬಾಲಂಗೋಚಿಗಳಾಗಿದ್ದಾರೆ. ಕರಿಯರ ಹೋರಾಟಗಳಿಗೆ ಅಡ್ಡಗಾಲು ಹಾಕುತ್ತಲೇ ಇರುತ್ತಾರೆ. ಈ ಬಂಟುಸ್ತಾನ್‌ಗಳಲ್ಲಿ ವಾಸಿಸುವವರಿಗೆ ಯಾವುದೇ ಪೌರ ಸೌಲಭ್ಯಗಳಿಲ್ಲ. ಕರಿಯರು ಈ ಬಂಟುಸ್ತಾನ್‌ಗಳನ್ನು ಬಿಟ್ಟು ಬಿಳಿಯರು ಇರುವ ಸ್ಥಳಗಳಿಗೆ ಬರುವಂತಿಲ್ಲ. ಬಿಳಿಯರಿಗೆ ಕೂಲಿಗಳು ಬೇಕಾದಾಗ ಈ ಬಂಟುಸ್ತಾನ್‌ಗಳಿಂದ ಕರಿಯರನ್ನು ಕರೆಸಿಕೊಳ್ಳುತ್ತಾರೆ. ಆವಾಗ ಮಾತ್ರ ಬಂಟುಸ್ತಾನ್‌ಗಳ ಕರಿಯರಿಗೆ ಬಿಳಿಯರು ಇರುವಲ್ಲಿಗೆ ಬರುವ ಅವಕಾಶವಿದೆ. ಅದಕ್ಕಾಗಿ ಪಾಸ್‌ಕಾಯ್ದೆಯನ್ನು ಜಾರಿಗೊಳಿಸಲಾಗಿದೆ. ದಕ್ಷಿಣ ಆಫ್ರಿಕಾದಲ್ಲಿ 16 ವರ್ಷಮೀರಿದ ಕರಿಯರು ಪಾಸ್ ಕಾಯ್ದೆ ಪ್ರಕಾರ ಗುರುತಿನ ಪುಸ್ತಕ ಇಟ್ಟುಕೊಳ್ಳಬೇಕು. ಅದರಲ್ಲಿ ಅವರ ಗುರುತಿನ ನಂಬರ್, ಭಾವಚಿತ್ರ, ಬುಡಕಟ್ಟಿನ ಹೆಸರು ಹಾಗೂ ಅವರು ಎಲ್ಲಿ ದುಡಿಯುವರೊ ಆ

ಮಾಲೀಕರ ಹೆಸರು ಮತ್ತು ಇತರ ಮಾಹಿತಿಗಳು ಇರುತ್ತವೆ. ಪತ್ನಿಯ ಗುರುತಿನ ಚೀಟಿಯಲ್ಲಿ ಪತಿಯ ವಿವರಗಳೂ ಇರಬೇಕು. ಈ ಗುರುತಿನ ಪುಸ್ತಕವನ್ನು ಅಧಿಕಾರಿಗಳು ಕೇಳಿದಾಗ ತೋರಿಸಬೇಕು. ಇದಿಲ್ಲದೆ ಬಂಟುಸ್ತಾನ್ ಬಿಟ್ಟು ಹೊರಬರುವಂತಿಲ್ಲ. ಈ ಕಾಯಿದೆ ಅಡಿ ಪ್ರತಿವರ್ಷ ಸರಾಸರಿ ಐದು ಲಕ್ಷ ಮಂದಿ ಕರಿಯರಿಗೆ ಶಿಕ್ಷೆ ವಿಧಿಸಲಾಗುತ್ತಿದೆ.

ಕಪ್ಪು ಮಹಿಳೆ

"ಕೊನೆಗೊಂಡಿತು ಕಾಳಗ
ಆದರೆ ಬಹಳ ವರುಷಗಳ ನಂತರ
ಕಥೆ ಹೇಳುವರು ಅಜ್ಜಿಗಳು
ತಮ್ಮ ಪುಟ್ಟ ಮರಿಗಳಿಗೆ—ನಾ ಬಲ್ಲೆ.
ಹಳೆಯ ಅನಿಷ್ಟದ ದಿನಗಳಲ್ಲಿ
ವಾಯಿಹೋಕ್‌ನ ಮಹಿಳೆಯರು
ಎಂಥ ಧೈರ್ಯದಿಂದ ಹೋರಾಡಿದರು
ಎಂಬ ದೀರ್ಘ ಕಥೆಯನ್ನು
ಹೇಳಲಾಗುವುದು
ಅಭಿಮಾನದೊಂದಿಗೆ,
ನಗೆಯೊಂದಿಗೆ"

ದಕ್ಷಿಣ ಆಫ್ರಿಕಾದ ಆರೇಂಜ್ ಫ್ರೀ ಸ್ಟೇಟ್‌ನ ಕಪ್ಪು ಮಹಿಳೆಯರು ನೆಲ್ಸನ್ ಮಂಡೇಲಾ ಅವರು ಹುಟ್ಟುವುದಕ್ಕೆ ಐದು ವರ್ಷಗಳ ಮುಂಚೆ (ಜೂನ್ 6, 1913) ಪಾಸ್ ಕಾಯ್ದೆ ವಿರುದ್ಧ ಹೋರಾಡಿದರು. ಅದಿಲ್ಲದೆ ಕರಿಯರು ತಮ್ಮ ವಾಸಸ್ಥಾನಗಳಾದ ಬಂಟುಸ್ತಾನ್‌ಗಳನ್ನು ಬಿಟ್ಟು ಹೊರ ಬರುವಂತಿಲ್ಲ. ಆದರೆ ಆ ದಿನ ಆರುನೂರು ಮಂದಿ ಮಹಿಳೆಯರು ಅಪಮಾನದ ಸಂಕೇತವಾದ ಪಾಸ್‌ಪುಸ್ತಕಗಳ ಬದಲಿಗೆ ಅಭಿಮಾನದ ಸಂಕೇತವಾದ ಬಡಿಗೆ ಗಳನ್ನು ಹಿಡಿದುಕೊಂಡು ಮೆರವಣಿಗೆ ಹೊರಡಿಸಿದರು. ಅವರು ಯುದ್ಧಕ್ಕೆ

ಪೊರಟವರಂತೆ ಘೋಷಣೆ ಕೂಗುತ್ತಿದ್ದರು. ಅವರ ಆವೇಶವನ್ನು ನೋಡಿದ ನ್ಯಾಯಾಧೀಶ ನಡುಗಿದ. ಆದರೆ ಪೊಲೀಸ್ ಪೇದೆಯೊಬ್ಬ ಮಹಿಳೆಯೊಬ್ಬಳ ಕಾಲರ್ ಅನ್ನು ಗಟ್ಟಿಯಾಗಿ ಹಿಡಿದದ್ದೇ ತಡ ಆರುನೂರು ಬಡಿಗೆಗಳಿಗೆ ಬಲಿಯಾದ.

ಹೀಗೆ ಕೊನೆಗೊಂಡ ಕಾಳಗವನ್ನು ಕುರಿತು ಅಂತ್ಯ ಪ್ರಾಸದಿಂದ ಕೂಡಿದ ಸುಂದರ ಕವನವನ್ನು ಅಜ್ಞಾತ ಕವಿಯೊಬ್ಬ 'ಜಾನಿ ದಿ ಆಫೀಸ್ ಬಾಯ್' ಎಂಬ ಕಾವ್ಯನಾಮದಿಂದ ಬರೆದ. ಮಿಶ್ರ ವರ್ಣೀಯರ ಸಂಘಟನೆಯಾದ ಆಫ್ರಿಕನ್ ಪೀಪಲ್ಸ್ ಆರ್ಗನೈಸೇಷನ್ 1913ನೇ ಜೂನ್ 27ರ ತನ್ನ ಪತ್ರಿಕೆ ಯಲ್ಲಿ ಈ ಕವನವನ್ನು ಪ್ರಕಟಿಸಿತು. ಮೇಲೆ ತಿಳಿಸಿದಂತೆ ಆ ಕವನ ಆಶಾ ದಾಯಕವಾಗಿ ಕೊನೆಗೊಳ್ಳುವುದು. ಆದರೆ ಆ ಘಟನೆ ಸಂಭವಿಸಿ 77 ವರ್ಷ ಗಳಾದರೂ ಕಾಳಗ ಕೊನೆಗೊಂಡಿಲ್ಲ, ಬಿಳಿಯರ ಸರ್ಕಾರ ಕಪ್ಪು ಮಹಿಳೆಯನ್ನು ಅತ್ಯಂತ ಹೀನಾಯಮಾನವಾಗಿ ಕಾಣುವುದನ್ನು ಬಿಟ್ಟಿಲ್ಲ.

ಬಂಡವಾಳಷಾಹಿ ವ್ಯವಸ್ಥೆಗೆ ಕಾರಣವಾದ ಬಿಳಿಯರು ತಳವೂರುವುದಕ್ಕೆ ಮೊದಲಿನ ದಕ್ಷಿಣ ಆಫ್ರಿಕಾ ಸಮಾಜದಲ್ಲಿ ವಿವಿಧ ಗುಂಪುಗಳು ತಮ್ಮ ಪಾಲಿನ ಕೆಲಸ ನಿರ್ವಹಿಸುತ್ತಿದ್ದವು. ಒಂದು ಗುಂಪು ಉತ್ಪಾದನಾ ಸಾಧನಗಳನ್ನು ಹೊಂದಿದ್ದು ವಿನಿಮಯವನ್ನು ಹತೋಟಿಯಲ್ಲಿಟ್ಟುಕೊಂಡಿತ್ತು. ಬೇರೆ ಗುಂಪು ಗಳು ತಮಗೆ ಸಂಬಂಧಿಸಿದ ಉತ್ಪಾದನೆಯಲ್ಲಿ ತೊಡಗಿರುತ್ತಿದ್ದವು. ನಿರ್ಣಾ ಯಕ ಉತ್ಪಾದನಾ ಸಾಧನಗಳನ್ನು ಮತ್ತು ಭೂಮಿಯನ್ನು ಸಾಮೂಹಿಕ ಒಡೆತನಕ್ಕೆ ಒಳಪಡಿಸಲಾಗಿತ್ತು. ದನ-ಕರುಗಳನ್ನು ಜನ ಖಾಸಗಿಯಾಗಿ ಸಾಕು ತ್ತಿದ್ದರು. ಅವರ ಜೀವನ ವಿಧಾನದಲ್ಲಿ ಬದಲಾವಣೆಯಾದ ನಂತರ ಲೈಂಗಿಕ ಆಧಾರದ ಮೇಲೆ ಶ್ರಮ ವಿಭಜನೆಯಾಯಿತು. ನಂತರ ಕೃಷಿ ಕಾರ್ಯ ಮತ್ತು ಜಾನುವಾರು ಸಾಕಣೆಯನ್ನು ಒಂದೇ ಮನೆಯವರು ಮಾಡಿದರೂ ಉಳುವ ಕೆಲಸವನ್ನು ಮಹಿಳೆ ವಹಿಸಿಕೊಂಡಳು. ಜಾನುವಾರು ಸಾಕಣೆ ಗಂಡಸಿನ ದಾಯಿತು. (ಆಫ್ರಿಕಾದ ಬಹಳಷ್ಟು ಕಡೆಗಳಲ್ಲಿ ಈ ಪದ್ಧತಿ ಜಾರಿಯಲ್ಲಿತ್ತು) ದುಡಿಮೆಯ ಈ ಎರಡೂ ಕ್ಷೇತ್ರಗಳು ಆರ್ಥಿಕ ಮತ್ತು ಸಾಮಾಜಿಕ ಮಹತ್ವ ವನ್ನು ಪಡೆದಿದ್ದವು. ಆದರೆ ಮಹಿಳೆಯರು ವಿಶೇಷ ಗೌರವಕ್ಕೆ ಅರ್ಹರಾಗಿದ್ದರು.

ಏಕೆಂದರೆ ಸಂತತಿ ಮತ್ತು ಆಹಾರ ಉತ್ಪಾದನೆಯಲ್ಲಿ ಅವರ ಪಾತ್ರ ಪ್ರಮುಖ ವಾಗಿತ್ತು.

ಆಫ್ರಿಕಾದಲ್ಲಿ ಲೊಬೋಲಾ (ಕನ್ಯಾ ಸಂಪತ್ತು) ಎಂಬ ಪದ್ಧತಿ ಇದೆ. ಮದುವೆ ಸಮಯದಲ್ಲಿ ವರನಾದವನು ಕನ್ಯೆಯ ಮನೆಯವರಿಗೆ 'ಪರಿಹಾರ' ರೂಪದಲ್ಲಿ ಲೊಬೋಲಾ ಕೊಡಬೇಕಾಗುತ್ತದೆ. ಮಹಿಳೆಯ ದುಡಿಮೆ ಮತ್ತು ಜಾಣ್ಮೆಯನ್ನು ಗೌರವಿಸುವ ರೀತಿ ಇದು.

ಸಮಾಜದ ಸಮಸ್ಯೆಗಳ ಪರಿಹಾರ ಮತ್ತು ನೀತಿ ನಿಯಮಗಳನ್ನು ನಿರ್ಧರಿಸುವುದಕ್ಕಾಗಿ ಕರೆಯುವ ಸಭೆಯಲ್ಲಿ ಭಾಗವಹಿಸುವ ಹಕ್ಕು ಮಹಿಳೆಗೆ ಇಲ್ಲ. ಮದುವೆಗೆ ಮುಂಚೆ ಮಹಿಳೆಯಾದವಳು ತಂದೆ, ಅಣ್ಣ ಇಲ್ಲವೆ ಸೋದರ ಮಾವನ ಅಧೀನದಲ್ಲಿರುತ್ತಾಳೆ. ಮದುವೆಯ ನಂತರ ಗಂಡನ ಅಧೀನದಲ್ಲಿರು ತ್ತಾಳೆ. ಮಕ್ಕಳನ್ನು ಸಾಕುವ ಕೆಲಸ ಅವಳದಾಗಿದ್ದರೆ ಹೊರಗಿನ ಕೆಲಸವನ್ನು ಗಂಡ ನಿಭಾಯಿಸುತ್ತಾನೆ. ಇಂಥ ಸಂಪ್ರದಾಯದ ಸಮಾಜದಲ್ಲಿ ಕೂಡ ಆಫ್ರಿಕಾದ ಮಹಿಳೆ ಅನೇಕ ಹಕ್ಕುಗಳನ್ನು ಪಡೆದಿದ್ದಾಳೆ. ಸೂಲಗಿತ್ತಿಯರು, ನಾಟಿ ವೈದ್ಯೆಯರು ಮತ್ತು ಕಣಿ ಹೇಳುವವರು—ಹೀಗೆ ಮಹಿಳೆಯರು ತಮ್ಮ ಜಾಣ್ಮೆಯ ಮೂಲಕ ಗಳಿಸುವ ಹಣದಲ್ಲಿ ಗಂಡನಿಗೆ ಯಾವುದೇ ಪಾಲಿಲ್ಲ. ಅದೇ ಪ್ರಕಾರ ಚಾಪೆ ಹೆಣೆಯುವ, ಮಡಿಕೆ ಮಾಡುವ ಮತ್ತು ಚರ್ಮದ ವಸ್ತುಗಳನ್ನು ತಯಾರಿಸುವ ಮಹಿಳೆಯರು ಕೂಡ ತಮ್ಮ ಗಳಿಕೆಯನ್ನು ಪ್ರತ್ಯೇಕವಾಗಿ ಇಟ್ಟುಕೊಳ್ಳುವ ಹಕ್ಕನ್ನು ಪಡೆದಿದ್ದಾರೆ. ಈ ರೀತಿಯ ವೈಯ ಕ್ತಿಕ ಆಸ್ತಿಯಲ್ಲದೆ ಮದುವೆ ಸಮಯದಲ್ಲಿ ತವರು ಮನೆಯವರು ಬಳುವಳಿ ಯಾಗಿ ಕೊಟ್ಟ ದನ (ಉಬುಲುಂಗಾ) ಕೂಡ ಎಂಥ ಪ್ರಸಂಗದಲ್ಲೂ ಗಂಡನ ಆಸ್ತಿಯಲ್ಲಿ ಸೇರ್ಪಡೆಯಾಗುವುದಿಲ್ಲ. ಮಹಿಳೆ ಸತ್ತ ನಂತರ ವೈಯಕ್ತಿಕ ಆಸ್ತಿ ಯೆಲ್ಲ ಆಕೆಯ ಕೊನೆಯ ಕೂಸಿಗೆ ಹೋಗುವುದು. ಗಂಡನ ಸಾಲ ತೀರಿಸಲು ಹೆಂಡತಿ ಆಸ್ತಿಯನ್ನು ಬಳಸುವಂತಿಲ್ಲ. ಒಂದು ವೇಳೆ ವಿವಾಹ ವಿಚ್ಛೇದನವಾದರೆ ತನ್ನೆಲ್ಲ ಆಸ್ತಿಯನ್ನು ಆಕೆ ತೆಗೆದುಕೊಂಡು ಹೋಗುವಳು. ಹಿಂದಿನ ಕಾಲದಲ್ಲಿ ಹೆಂಡತಿಯನ್ನು ಹೊಡೆಯುವುದು ನಾಚಿಕೆಗೇಡಿತನದ ವಿಚಾರವಾಗಿತ್ತು. ಆತ ಸಾಮಾಜಿಕ ತಿರಸ್ಕಾರಕ್ಕೆ ಒಳಗಾಗುತ್ತಿದ್ದ.

ವಸಾಹತುಶಾಹಿ ವ್ಯವಸ್ಥೆ ಬಂದಾಗ ಕೃಷಿಯಲ್ಲಿ ಕೂಡ ಗಂಡಸರ ಪಾತ್ರ ಪ್ರಧಾನವಾಗಿ ಹೆಂಗಸರ ಕೆಲಸ ಅಡುಗೆ ಮನೆಗೆ ಸೀಮಿತವಾಯಿತು. ಮಹಿಳೆ ಉತ್ಪಾದಿಸುತ್ತಿದ್ದ ಮಡಿಕೆ, ಚಾಪೆ, ಸೋರೆ ಬುರುಡೆ ಮುಂತಾದವುಗಳಿಗೆ ಬೇಡಿಕೆ ಕಡಿಮೆಯಾಗಿ ಅವುಗಳ ಬದಲಿಗೆ ಬಂಡವಾಳಶಾಹಿ ಪದ್ಧತಿಯಿಂದ ಉತ್ಪಾದಿಸಿದ ವಸ್ತುಗಳು ಬಳಕೆಗೆ ಬಂದವು.

ದಕ್ಷಿಣ ಆಫ್ರಿಕಾದಲ್ಲಿ 'ವಲಸೆ ಕಾರ್ಮಿಕರ ವ್ಯವಸ್ಥೆ' ಎಂಬ ಅಮಾನುಷ ವ್ಯವಸ್ಥೆಯೊಂದಿದೆ. ಬಿಳಿಯರ ನಗರಗಳಲ್ಲಿ ಕರಿಯರನ್ನು ಗುತ್ತಿಗೆ ಕೂಲಿಗಳನ್ನಾಗಿ ನೇಮಿಸಿಕೊಳ್ಳಲಾಗುತ್ತದೆ. ಆದರೆ ಬಂಟುಸ್ತಾನಗಳಿಂದ ಬರುವ ಕರಿಯರು ಜೊತೆಯಲ್ಲಿ ತಮ್ಮ ಹೆಂಡಿರು, ಮಕ್ಕಳು ಮತ್ತು ವೃದ್ಧ ತಾಯಿ-ತಂದೆಗಳನ್ನು ಕರೆದುಕೊಂಡು ಬರುವಂತಿಲ್ಲ. ಎಲ್ಲವನ್ನೂ ಕಳೆದುಕೊಂಡ ಕರಿಯರು ಹೊಟ್ಟೆಪಾಡಿಗಾಗಿ ಕೊನೆಗೆ ತಮ್ಮ ಕುಟುಂಬವನ್ನೂ 'ಕಳೆದುಕೊಂಡು' ನಗರಗಳಿಗೆ ಬರುತ್ತಾರೆ. ಅಲ್ಲಿ ಯಾವುದೇ ಸರಿಯಾದ ಸೌಲಭ್ಯಗಳಿರದ ಪುರುಷರ ವಸತಿ ಗೃಹಗಳೆಂಬ ಕಡೆ ವಾಸಿಸುತ್ತಾರೆ. ಅವನ್ನು ಕರಿಯ ಕೂಲಿಗಳಿಗಾಗಿಯೇ ನಿರ್ಮಿಸಲಾಗಿದೆ. ಅಂಥ ಅಸಹ್ಯ ಸ್ಥಳಗಳಲ್ಲಿ ಕೂಡ ಎಷ್ಟೋ ಕೂಲಿಕಾರರಿಗೆ ಉಳಿದುಕೊಳ್ಳಲು ಅವಕಾಶ ಸಿಗುವುದಿಲ್ಲ. ಹೀಗೆ ದಕ್ಷಿಣ ಆಫ್ರಿಕಾ ಸರ್ಕಾರದ ಕಣ್ಣಲ್ಲಿ ಕಪ್ಪು ಗಂಡಸರೆಂದರೆ ದುಡಿಯುವ ಯಂತ್ರಗಳು. ಹೆಂಗಸರೆಂದರೆ ಕೂಲಿಗಳನ್ನು ಹಡೆಯುವ ಯಂತ್ರಗಳು !

ಬರಗಾಲದಿಂದಾಗಿ ಕರಿಯರ ತುಂಡು ಭೂಮಿಗಳು ನಿರುಪಯುಕ್ತವಾಗಿವೆ. ಸಾಂಕ್ರಾಮಿಕ ರೋಗದಿಂದಾಗಿ ದನ-ಕರುಗಳನ್ನು ಕಳೆದುಕೊಂಡಿದ್ದಾರೆ. ಬರಡು ಭೂಮಿಯಲ್ಲಿ ದುಡಿಯುತ್ತ ಬಂಟುಸ್ತಾನಗಳಲ್ಲಿ ದಿನ ಕಳೆಯುವ ಹೆಂಗಸರು ಅನ್ನ ಬಟ್ಟೆಗಳಿಗಾಗಿ ವಲಸೆ ಹೋದ ಗಂಡಂದಿರು ಮತ್ತು ಮಕ್ಕಳು ಹಣ ಕಳಿಸುವುದನ್ನು ಕಾಯುತ್ತ ಕುಳಿತಿರುತ್ತಾರೆ. ಭೂಮಿ ಕಾಯ್ದೆ, ಪಾಸ್ ಕಾಯ್ದೆ ಮತ್ತು ನಗರ ಪ್ರದೇಶದ ಕಾಯ್ದೆಗಳಿಂದಾಗಿ ಕಪ್ಪು ಮಹಿಳೆಯ ಜೀವನ ಬಂಟುಸ್ತಾನ್‌ಗಳಿಗೆ ಸೀಮಿತವಾಗಿದೆ. 'ವಲಸೆ ಕಾರ್ಮಿಕ ವ್ಯವಸ್ಥೆ'ಯಿಂದಾಗಿ ಆಕೆ ಇನ್ನಷ್ಟು ನಿರ್ಗತಿಕಳಾಗಿದ್ದಾಳೆ. ಹೀಗೆ ಬಿಳಿಯರ ಆಮದೀಕರಣ ಕಪ್ಪು ಮಹಿಳೆಗೆ ಎಲ್ಲ ರೀತಿಯಿಂದಲೂ ಮಾರಕವಾಗಿದೆ. ಸ್ಥಳೀಯರ

ಆಡಳಿತ ಕಾಯ್ದೆ—1927ರ ಪ್ರಕಾರ ಮಹಿಳೆಯರು ಸದಾ ಅಪ್ರಾಪ್ತ ವಯಸ್ಕರು, ಅವರ ಪಾಲನೆ—ಪೋಷಣೆ ಮಾಡುವ ಅಧಿಕಾರ ತಂದೆ ಇಲ್ಲವೆ ಗಂಡಂದಿರ ಕೈಯಲ್ಲಿದೆ. ಇಡೀ ಕರಿಯ ಜನಾಂಗವನ್ನು ಸಂವಿಧಾನ ಬದ್ಧವಾಗಿ ಕಡೆಗಣಿಸಲಾಗಿದೆ. ಜನಾಂಗ, ಲಿಂಗ ಮತ್ತು ವರ್ಗಭೇದಗಳಿಂದಾಗಿ ಕಪ್ಪು ಮಹಿಳೆ ಅತ್ಯಂತ ಕೆಳಸ್ತರದಲ್ಲಿದ್ದಾಳೆ.

1903–5ರ ಅವಧಿಯಲ್ಲಿ ವಿಪರೀತ ಬರಗಾಲ ಎದುರಿಸಿ ಸಾಂಕ್ರಾಮಿಕ ರೋಗದಿಂದಾಗಿ ಲಕ್ಷಗಟ್ಟಲೆ ದನಕರುಗಳನ್ನು ಕಳೆದುಕೊಂಡ ನಂತರ ಕಪ್ಪು ಮಹಿಳೆಯರು ನಗರಗಳ ಕಡೆಗೆ ಬರಲು ಪ್ರಾರಂಭಿಸಿದರು. ನಗರದ ಬಿಳಿಯರ ಮನೆಗಳಲ್ಲಿ ಮನೆಗೆಲಸದವರಾಗಿ ಸೇರಿಕೊಂಡರು. ಕೂಲಿಗಳನ್ನು ಪಡೆಯುವುದು ಬಿಳಿಯರಿಗೆ ಗೌರವದ ಪ್ರತೀಕ ಕೂಡ ಆಗಿದೆ. ದುಡಿಯುವ ಕಪ್ಪು ಮಹಿಳೆಯರಲ್ಲಿ ಶೇಕಡಾ 80ರಷ್ಟು ಮಂದಿ ಮನೆಗೆಲಸ ಮತ್ತು ಕೃಷಿ ಕ್ಷೇತ್ರಕ್ಕೆ ಸಂಬಂಧಿಸಿದ್ದರೆ. ಶೇಕಡಾ 4ರಷ್ಟು ಮಹಿಳೆಯರು ಕೈಗಾರಿಕಾ ಕ್ಷೇತ್ರದಲ್ಲಿದ್ದು ಉಳಿದವರು ಹೆಚ್ಚಾಗಿ ದಾದಿ, ಶಿಕ್ಷಕಿಯರಾಗಿದ್ದಾರೆ.

ಇಡೀ ಕಪ್ಪು ಜನಾಂಗದಲ್ಲಿ ಅತ್ಯಂತ ಹೀನ ಸುಲಿಗೆ ಮತ್ತು ದಬ್ಬಾಳಿಕೆಗೆ ಒಳಗಾದವರೆಂದರೆ ಕೃಷಿ ಕೂಲಿ ಮಾಡುವವರು. ಅವರಿಗೆ ಯಾವುದೇ ರೀತಿಯ ಸಂರಕ್ಷಣೆ ಇಲ್ಲ. ರಾಜಕೀಯ ಆಂದೋಲನ ಅವರಿಗೆ ತಲುಪಿಲ್ಲ. ಕೃಷಿ ಕ್ಷೇತ್ರದಲ್ಲಿ ಬೇಡಿಕೆಗಿಂತ ಹೆಚ್ಚಿನ ಕೂಲಿಗಳಿರುವುದರಿಂದ ಬಂದಷ್ಟು ಕೂಲಿಗೆ ಅವರು ದುಡಿಯಲು ಸಿದ್ಧರಿದ್ದಾರೆ. ಕೃಷಿ ಕೂಲಿಕಾರರಿಗೆ ತಿಂಗಳಿಗೆ ಹತ್ತು ರ್ಯಾಂಡ್ ಕೂಲಿ ಮತ್ತು ಒಂದು ಚೀಲದಷ್ಟು ಮುಸುಕಿನ ಜೋಳದ ಹಿಟ್ಟನ್ನು ಕೊಡಲಾಗುವುದು. ಅವರು ಕೆಲವು ಸಲ 17 ಗಂಟೆಗಳಷ್ಟು ಕಾಲ ಕೆಲಸ ಮಾಡಬೇಕಾಗುವುದು. ಅಲ್ಲಿ ಬಾಲಕಾರ್ಮಿಕರನ್ನು ಕಾನೂನು ಬದ್ಧವಾಗಿ ನೇಮಿಸಿಕೊಳ್ಳಬಹುದು. ಅವರಿಗೆ ವಾಸಿಸಲು ಕೊಡುವ ಮನೆಗಳು ದನದ ಕೊಟ್ಟಿಗೆಯಂತೆ ಇರುತ್ತವೆ.

ದಕ್ಷಿಣ ಆಫ್ರಿಕಾದಲ್ಲಿ ಬಿಳಿಯರು, ಭಾರತೀಯರು ಮತ್ತು ಮಿಶ್ರ ವರ್ಣೀಯರಿಗಿಂತ ಆಫ್ರಿಕದ ಗಂಡಸರು ಕಡಿಮೆ ಕೂಲಿ ಪಡೆಯುತ್ತಾರೆ. ಅವರ ಹೆಂಡಂದಿರಿಗೆ ಅವರಿಗಿಂತ ಶೇಕಡಾ 20ರಷ್ಟು ಕಡಿಮೆ ಕೂಲಿ ಕೊಡಲಾಗುತ್ತದೆ.

ನತಾಲ್ ಪ್ರಾಂತದಲ್ಲಿ ಅವರ ಪರಿಸ್ಥಿತಿ ಇನ್ನೂ ಅಸಹ್ಯವಾಗಿದೆ. ಗುತ್ತಿಗೆ ರೀತಿಯಲ್ಲಿ ಅಲ್ಲಿ ಎರಡು ಲಕ್ಷ ಕೂಲಿಗಳು ದುಡಿಯುತ್ತಿದ್ದಾರೆ. ಕುಟುಂಬದ ಯಜಮಾನನಿಗೆ ತಿಂಗಳಿಗೆ 5 ರ್ಯಾಂಡ್ ಮತ್ತು ಒಂದು ಚೀಲ ಮುಸುಕಿನ ಜೋಳದ ಹಿಟ್ಟನ್ನು ಕೊಡಲಾಗುವುದು. ಹಿರಿಯ ಮಗನಿಗೆ ತಂದೆ ಪಡೆಯುವ ಅರ್ಧದಷ್ಟುಸಿಗುವುದು. ಹೆಂಡತಿ, ಹೆಣ್ಣುಮಕ್ಕಳು ಮತ್ತು ಬಾಲಕರು ಅಲ್ಲಿ ಪುಕ್ಕಟೆ ದುಡಿಯುತ್ತಾರೆ ! ಒಂದೇ ಕಡೆ ಬದುಕುವುದೊಂದೇ ಅವರಿಗೆ ಸಿಗುವ ಪ್ರತಿಫಲ. ಆರು ತಿಂಗಳುಗಳವರೆಗೆ ಮಾತ್ರ ಅವರಿಗೆ ಅಲ್ಲಿ ಕೃಷಿ ಕೆಲಸ ಸಿಗುವುದು. ನಂತರ ಗಂಡಸರು ಗುತ್ತಿಗೆ ಕೆಲಸಕ್ಕಾಗಿ ನಗರಗಳಿಗೆ ವಲಸೆ ಹೋಗುವರು. ಮತ್ತೆ ಹೆಂಡರು, ಮಕ್ಕಳು ಬಂಟುಸ್ತಾನ್ ಸೇರುವರು.

ದಾರಿದ್ರ್ಯ ಮತ್ತು ಒಂಟಿತನಕ್ಕೆ ಬೇಸತ್ತು ಕಪ್ಪು ಮಹಿಳೆಯರು ಕಾನೂನಿಗೆ ವಿರುದ್ಧವಾಗಿ ನಗರಗಳಿಗೆ ವಲಸೆ ಹೋಗುವಾಗ ರಸ್ತೆಗಳಲ್ಲಿ ತಡೆಯಲಾಗುವುದು. ಗುರುತಿನ ಪುಸ್ತಕವನ್ನು ಚೆಕ್ ಮಾಡವ ನೆಪದಲ್ಲಿ ಪೋಲಿಸರು ಅವರ ಮೈ ತುಂಬ ಕೈಯಾಡಿಸುವರು. ಪ್ರತಿಭಟಿಸಿದರೆ ಕಡಿದು ಓಡಿಸುವಲ್ಲಿ ತರಬೇತಿ ಪಡೆದ ನಾಯಿಗಳನ್ನು ಅವರ ಮೇಲೆ ಬಿಡುವರು. ಹೀಗೆ ಪಾಸ್ ಕಾಯ್ದೆ ಮೂಲಕ ಮಹಿಳೆಯರು ಮಾನಸಿಕ ಹಿಂಸೆ ಅನುಭವಿಸುತ್ತಾರೆ. ತಮ್ಮ ಗಂಡಸರು ಮತ್ತು ಮಕ್ಕಳಿಂದ ಬೇರೆಯಾಗಿ ಬಂಟುಸ್ತಾನಗಳೆಂಬ 'ಯಾತಾನಾ ಶಿಬಿರ'ಗಳಲ್ಲಿ ಬದುಕುತ್ತಾರೆ.

ದಿ ಫೆಡರೇಷನ್ ಆಫ್‌ಸೌತ್ ಆಫ್ರಿಕನ್‌ವುಮೆನ್ 1956ನೇ ಆಗಸ್ಟ್ ಒಂಬತ್ತರಂದು ಪಾಸ್ ಕಾಯ್ದೆಯನ್ನು ತಿರಸ್ಕರಿಸಿ ಇಪ್ಪತ್ತು ಸಾವಿರ ಮಹಿಳೆಯರ ಮೆರವಣಿಗೆ ಹೊರಡಿಸಿ ಅಪಾರ್ಥೈಡ್ ಸರ್ಕಾರದ ವಿರುದ್ಧ ಪ್ರತಿಭಟನೆ ವ್ಯಕ್ತಪಡಿಸಿತು.

ಅನೇಕ ಮಹಿಳೆಯರು ಹೋರಾಟದ ಮೂಲಕ ನಗರದ ಹೊರ ವಲಯಗಳಲ್ಲಿ ತಾವು ಬೀಡುಬಿಟ್ಟ ಸ್ಥಳದಲ್ಲೇ ಉಳಿಯುವಲ್ಲಿ ಸಫಲರಾಗಿದ್ದಾರೆ. ಆದರೆ ಸರ್ಕಾರ ಯಾವುದೇ ರೀತಿಯ ಮೂಲಭೂತ ಸೌಲಭ್ಯಗಳನ್ನು ನೀಡಿಲ್ಲ. ಅವರಿಗೆ ತಮ್ಮ ಮನೆ ದುರಸ್ತಿ ಮಾಡಿಕೊಳ್ಳುವ ಹಕ್ಕೂ ಇಲ್ಲ. ತಮ್ಮ ಹಕ್ಕುಗಳಿಗಾಗಿ ಹೋರಾಡುತ್ತ ಅನೇಕ ಮಹಿಳೆಯರು ಸಾವಿಗೀಡಾಗಿದ್ದಾರೆ,

ಅಪಾರ್ಥೈಡ್ ಸರ್ಕಾರ ಜೈಲಿನಲ್ಲಿ ಕೂಡ ಅನೇಕ ಮಹಿಳೆಯರ ಕೊಲೆ ಮಾಡಿದೆ.

ಪೊಲೀಸರ ಹಿಂಸೆಗೆ ಬೇಸರ ಪಟ್ಟು ಬಂಟುಸ್ತಾನಗಳಲ್ಲೇ ಉಳಿಯುವ ಮಹಿಳೆಯರಲ್ಲಿ ಕೆಲವರು ಸೂಳೆಗಾರಿಕೆಗೆ ಇಳಿದರೆ ಮತ್ತೆ ಕೆಲವರು ಹತಾಶ ರಾಗಿ ಕುಡಿತದ ಚಟಕ್ಕೆ ಬಲಿಯಾಗಿದ್ದಾರೆ.

ಮಹಿಳೆಯರು ತಮ್ಮ ಗಂಡಂದಿರೊಡನೆ ಬದುಕುವ ಹಕ್ಕನ್ನು ಕೇಳುತ್ತಾರೆ. ಗುತ್ತಿಗೆ ವ್ಯವಸ್ಥೆಯ ಕೂಲಿಯ ನೆಪದಲ್ಲಿ ಗಂಡ ಹೆಂಡಂದಿರನ್ನು ಬೇರ್ಪಡಿಸುವ ತಂತ್ರವನ್ನು ಅವರು ವಿರೋಧಿಸುತ್ತಾರೆ. ಅವರು ಪುನರ್ವಸತಿ ಕೇಂದ್ರಗಳಲ್ಲಿ ಇಲ್ಲವೆ ಬಂಟುಸ್ತಾನಗಳಲ್ಲಿ ಕೈತುಂಬ ಕೆಲಸವಿಲ್ಲದೆ ಅರೆ ಹೊಟ್ಟೆ ಯಿಂದ ಒಂಟಿಯಾಗಿ ಬದುಕುವುದನ್ನು ತಿರಸ್ಕರಿಸುತ್ತಾರೆ. ಆ ಪ್ರದೇಶಗಳಲ್ಲಿ ದುಃಖವೊಂದನ್ನುಳಿದು ಮತ್ತೇನೂ ಇಲ್ಲ.

ದಕ್ಷಿಣ ಆಫ್ರಿಕಾದ ಶೇ. ೭9ರಷ್ಟು ಸಂಪತ್ತು ಅಲ್ಪಸಂಖ್ಯಾತ ಬಿಳಿಯರ ಕೈಯಲ್ಲಿದೆ. ಬಹುಸಂಖ್ಯಾತ ಕರಿಯರ ಆರ್ಥಿಕ ಸ್ಥಿತಿ ಮತ್ತು ಅವರ ಉತ್ಪಾದನಾ ಸಾಮರ್ಥ್ಯ ಎಷ್ಟರ ಮಟ್ಟಿಗೆ ಇದೆ ಎಂಬುದಕ್ಕೆ ಇದೊಂದು ವಾಸ್ತವಾಂಶ ಸಾಕು. ಕರಿಯರಿಗೆ ಮಕ್ಕಳೇ ಸಂಪತ್ತು. ವೃದ್ಧಾಪ್ಯದಲ್ಲಿ ಆಸರೆಗೆ ಬರುವ ಬೇರೆ ಸಂಪತ್ತಿಲ್ಲದಾದ್ದರಿಂದ ಅವರು ಎಲ್ಲ ಭರವಸೆಯನ್ನು ಮಕ್ಕಳ ಮೇಲೆ ಇಟ್ಟಿರುತ್ತಾರೆ. ಚಿಂತಾಜನಕವಾದ ಇಂಥ ಆರ್ಥಿಕ ಪರಿಸ್ಥಿತಿ ಇದ್ದರೆ ಬಿಳಿಯರು ಕೂಡ 'ಮಕ್ಕಳೇ ಆಸರೆ' ಎಂದು ಭಾವಿಸದೆ ಗತ್ಯಂತರವಿರು ತ್ತಿರಲಿಲ್ಲ. ಆದರೆ ಹೆಚ್ಚು ಮಕ್ಕಳನ್ನು ಹೆರುವ ಕರಿಯರ ಬಗ್ಗೆ ಸರ್ಕಾರಕ್ಕೆ ತಿರಸ್ಕಾರವಿದೆ. ಅವರನ್ನು ನಿರ್ನಾಮಗೊಳಿಸುವ ಹುಚ್ಚು ಕಲ್ಪನೆಯೊಂದಿಗೆ ಕಪ್ಪು ಮಹಿಳೆಯರಿಗೆ ಒತ್ತಾಯದಿಂದ ಮತ್ತು ಅನೇಕ ಸಲ ಅರಿಯದಂತೆ ಕೂಡ ಸಂತಾನ ಹರಣ ಶಸ್ತ್ರ ಚಿಕಿತ್ಸೆಯನ್ನು ಮಾಡುತ್ತದೆ. "ಮನುಕುಲದಲ್ಲಿ ಉಳ್ಳವರು, ಬಡವರು ಎಂಬ ಎರಡು ಗುಂಪುಗಳಿವೆ. ಉಳ್ಳವರು ಉತ್ಪಾದನಾ ಸಾಮರ್ಥ್ಯದೊಂದಿಗೆ ಜಾಣರೂ ಆಗಿದ್ದಾರೆ. ನಾಗರೀಕತೆಯುಳ್ಳ ಅವರಿಗೆ ಹೊಣೆಗಾರಿಕೆ ಪ್ರಜ್ಞೆ ಇದೆ. ಬಡವರು ಕಡಿಮೆ ಜವಾಬ್ದಾರಿಯುಳ್ಳವರಾಗಿದ್ದು ಮುಂದಾಲೋಚನೆ ಇಲ್ಲದೆ ಹುಟ್ಟಿಸುತ್ತಾರೆ" ಇದು ಬಿಳಿಯರ ಕುಟುಂಬ

ಯೋಜನಾ ಪ್ರಚಾರ ವೈಖರಿ ! ಕಪ್ಪು ಮಹಿಳೆಯರು ಕುಟುಂಬ ಯೋಜನೆಗೆ ವಿರೋಧವಾಗಿಲ್ಲ ಆದರೆ ಒತ್ತಾಯದ ಶಸ್ತ್ರ ಚಿಕಿತ್ಸೆಯನ್ನು ವಿರೋಧಿಸುತ್ತಾರೆ.

ಅಪಾರ್ಥೈಡ್ ಸುಲಿಗೆಯಿಂದ ಕಪ್ಪು ಮಹಿಳೆಯ ಬದುಕು ಅತ್ಯಂತ ಕೀಳು ಮಟ್ಟವನ್ನು ತಲುಪಿದೆ. ಅವಳು ಅನುಭವಿಸುತ್ತಿರುವ ಅಸಾಧ್ಯ ಕಷ್ಟ ಜಗತ್ತಿನ ಯಾವ ಮಹಿಳೆಯೂ ಅನುಭವಿಸಿಲ್ಲ.

ಕಪ್ಪು ಮಹಿಳೆ ಕೂಲಿ ಕೆಲಸದ ಜೊತೆ ಮನೆಯ ಕೆಲಸವನ್ನೂ ನೋಡಿ ಕೊಳ್ಳುತ್ತಾಳೆ. ಹೆಚ್ಚಿನ ಕೂಲಿಗಾಗಿ ಗಂಡನಿಗೆ ಜೊತೆಯಾಗಿ ಹೋರಾಡುತ್ತಾಳೆ. ಆತನೊಡನೆ ಬದುಕುವುದಕ್ಕಾಗಿ ಪೋಲಿಸರ ಲಾಠಿ ಎದುರಿಸುತ್ತಾಳೆ. ಮಕ್ಕಳ ಶಿಕ್ಷಣಕ್ಕಾಗಿ ಪ್ರತಿಭಟಿಸುತ್ತಾಳೆ. ವಿಮೋಚನಾ ಹೋರಾಟದಲ್ಲಿ ಸತ್ತ ಮಕ್ಕಳಿಗಾಗಿ ಅಳುತ್ತಾಳೆ. ಜೀವದ ಹಂಗು ತೊರೆದು ರಾಜಕೀಯ ಕೈದಿಗಳಿಗೆ ಬೆಂಬಲ ವ್ಯಕ್ತಪಡಿಸುತ್ತಾಳೆ. ವರ್ಣದ್ವೇಷ ನೀತಿಯ (ಅಪಾರ್ಥೈಡ್) ವಿರುದ್ಧದ ಹೋರಾಟದಲ್ಲಿ ತನ್ನತನವನ್ನು ತೋರಿಸುತ್ತಾಳೆ.

ಅನೇಕ ಮಹಿಳೆಯರು ಮೂವತ್ತು ತಲುಪುವುದರೊಳಗಾಗಿ ವಿಧವೆ ಯಾರಾಗುತ್ತಾರೆ. ಚಿನ್ನದ ಗಣಿಯಲ್ಲಿ ಕೆಲಸ ಮಾಡಿ ಮರಳಿದ ಗಂಡಸರು ಎಲುಬಿನ ಗೂಡಾಗಿರುತ್ತಾರೆ. ದಿಕ್ಕು ತೋಚದ ನಿರಕ್ಷರಿ ಹೆಣ್ಣು ಮಕ್ಕಳು ಒಂದಿಷ್ಟು ಕೂಲಿಗಾಗಿ ಜೀವ ಸವೆಸುತ್ತಾ ದಿನ ಕಳೆಯುತ್ತಾರೆ. ಸರಿಯಾದ ಆಹಾರವಿಲ್ಲದೆ ಅನಾರೋಗ್ಯಕರವಾದ ವಾತಾವರಣದಲ್ಲಿ ಬದುಕುವುದರಿಂದಾಗಿ ಅನೇಕರು ಕ್ಷಯರೋಗ ಪೀಡಿತರಾಗಿದ್ದಾರೆ. ಅಕಾಲ ಮರಣಗಳ ಸಂಖ್ಯೆ ಹೆಚ್ಚಿದೆ. ಹೀಗೆ ಅವರ ಬದುಕೊಂದು ದುಃಖದ ನೀಳ್ಗವನವಾಗಿದೆ. ಸ್ಥಳೀಯ ನೀತಿಯ ಪ್ರಕಾರ ಕರಿಯರು ಬಂಟುಸ್ತಾನಗಳಲ್ಲೇ ವಾಸಿಸಬೇಕು. ಕೂಲಿಗಳು ತಮ್ಮ ಕೆಲಸವನ್ನು ಬದಲಾಯಿಸಬಾರದು. ಕರಿಯರು ತಾವು ಬೀಡು ಬಿಟ್ಟಿರುವ ಪ್ರದೇಶಗಳಿಂದ ಬೇರೆಡೆ ಹೋಗಲು ಸರ್ಕಾರ ಆಜ್ಞೆ ಮಾಡಿದಾಗ ಗಂಟು ಮೂಟೆ ಕಟ್ಟಿಕೊಂಡು ಹೋಗಬೇಕು. ಈ ಎಲ್ಲ ಕಟ್ಟುಪಾಡುಗಳು ಕಪ್ಪು ಮಹಿಳೆಯ ಮೇಲೆ ನೇರವಾದ ದುಷ್ಪರಿಣಾಮ ಬೀರುತ್ತವೆ.

'ಮಹಿಳೆಯರ ವಿಮೋಚನೆ ಇಲ್ಲದೆ ರಾಷ್ಟ್ರೀಯ ವಿಮೋಚನೆ ಇಲ್ಲ ರಾಷ್ಟ್ರೀಯ ವಿಮೋಚನೆ ಇಲ್ಲದೆ ಮಹಿಳೆಯರ ವಿಮೋಚನೆ ಇಲ್ಲ' ಎಂಬುದನ್ನು

ದಕ್ಷಿಣ ಆಫ್ರಿಕಾದ ಸ್ವಾತಂತ್ರ್ಯ ಪ್ರಿಯರು ಮನಗಂಡಿದ್ದಾರೆ. ವಿಶ್ವ ಮಹಿಳಾ ದಿನವಾಗಿ ಮಾರ್ಚ್ 8 ಅನ್ನು ಸಂಭ್ರಮದಿಂದ ಆಚರಿಸಿದರೂ ಆಗಸ್ಟ್ 9 ಆಫ್ರಿಕಾದ ಮಹಿಳೆಯರ ದಿನವಾಗಿದೆ. ಅಂದು ಅವರು ಏಕತೆಯ ಮೂಲಕ ತಮ್ಮ ಬಲ ಪ್ರದರ್ಶನ ಮಾಡುವುದಷ್ಟೇ ಅಲ್ಲದೆ ತಮ್ಮ ಹೋರಾಟದ ಪರಂಪರೆಯಲ್ಲಿ ತ್ಯಾಗ. ಬಲಿದಾನ ಮಾಡಿದವರನ್ನು ಸ್ಮರಿಸುತ್ತಾರೆ. ಹೀಗೆ ಅನ್ಯಾಯ. ದಬ್ಬಾಳಿಕೆಗಳ ವಿರುದ್ಧ ಗಂಡಸರ ಹೆಗಲಿಗೆ ಹೆಗಲು ಕೊಟ್ಟು ಹೋರಾಡುವುದರ ಮೂಲಕ ಕಪ್ಪು ಮಹಿಳೆಯರು ಸಾಮಾನತೆಯನ್ನು ಕೂಡ ಸಾಧಿಸುವ ಸಾಧ್ಯತೆಯನ್ನು ತೋರಿಸಿದ್ದಾರೆ.

ಮೇಲೆ ಸರ್ಕಾರದ ಕಾನೂನಿನ ಖಡ್ಗ ನೇತಾಡುತ್ತಿದ್ದರೂ ಕಪ್ಪು ಪುಟ್ಟ ಬಂಡವಾಳಷಾಹಿಗಳು ಆಫ್ರಿಕಾ ಜನಾಂಗದ ಮಧ್ಯೆ ತೀವ್ರ ಬಡತನವಿರುವ ಪ್ರದೇಶಗಳಲ್ಲಿ ತಮ್ಮ ವ್ಯವಹಾರ ನಡೆಸುತ್ತಾರೆ. ಪುಟ್ಟ ಬಂಡವಾಳ ಷಾಹಿ ಮನೆತನಕ್ಕೆ ಸೇರಿದ ಮಹಿಳೆಯರು ಆಫ್ರಿಕನ್ ಮಹಿಳಾ ಸಮಾಜದ ಸಂಘಟನೆ ಗಳ ನಾಯಕಿಯರಾಗಿದ್ದಾರೆ. ರಾಜಿ ರಾಜಕೀಯ ನೀತಿ ಮತ್ತು ಮಧ್ಯಮ ವರ್ಗದ ನಡವಳಿಕೆಯನ್ನು ಅವರು ಹೊಂದಿದ್ದಾರೆ. ಉಪನಗರಗಳ ಬಿಳಿ ಮಹಿಳೆಯರು ಅವರಿಗೆ ಮಾದರಿಯಾಗಿದ್ದಾರೆ. ಬಿಳಿ ಮಹಿಳೆಯರ ಹುಡುಗಾಟಿಕೆ ಮತ್ತು ನ್ಯೂನತೆಯನ್ನು ಶ್ಲಾಘ್ಯವೆಂದೇ ಭ್ರಮಿಸಿ ಅವರು ಹೆಮ್ಮೆ ಪಡುತ್ತಾರೆ.

ದುಡಿಯುವ ವರ್ಗದ ಕಪ್ಪು ಮಹಿಳೆಯರು ಇತರ ಜನಾಂಗಗಳೊಡನೆ ದುಡಿಯುತ್ತ ಬದುಕುವುದರಿಂದ ಅವರ ಮಧ್ಯೆ ಸಾಮರಸ್ಯವೇರ್ಪಟ್ಟು ಜನಾಂಗೀಯ ಎಲ್ಲೆಗಳು ಮಾಯವಾಗುತ್ತವೆ. ಹೀಗೆ ಒಂದುಗೂಡುವುದರ ಮೂಲಕ ವಿಮೋಚನಾ ಪ್ರಜ್ಞೆ ತೀವ್ರಗೊಳ್ಳುತ್ತದೆ. ಆಫ್ರಿಕನ್ ಜನಾಂಗ ಮತ್ತು ಮಿಶ್ರವರ್ಣೀಯ ಕೆಲಸಗಾರರ ಮಧ್ಯೆ ಬಿಕ್ಕಟ್ಟನ್ನುಂಟು ಮಾಡಲು ಸರ್ಕಾರ ಅನೇಕ ಸಲ ವಿಫಲ ಪ್ರಯತ್ನ ಮಾಡಿದೆ. ದಕ್ಷಿಣ ಆಫ್ರಿಕಾದ ಅನೇಕ ಖ್ಯಾತ ನಾಯಕಿಯರು ದುಡಿಯುವ ವರ್ಗದಿಂದಲೇ ಬಂದಿದ್ದಾರೆ.

ಬಿಳಿಯರ ಮನೆಗೆಲಸ ಮಾಡುವ ಮಹಿಳೆಯರು ಬೃಹತ್ ಪ್ರಮಾಣ ದಲ್ಲಿದ್ದು ಬಿಳಿಯ ಗಂಗಸರು ಅವರನ್ನು ಕೀಳಾಗಿ ಕಾಣುತ್ತಾರೆ.

ಅವರೆಲ್ಲ ಒಂಟಿಯಾಗಿ ಕೆಲಸ ಮಾಡುವುದರಿಂದ ಅವರನ್ನು ಸಂಘಟಿಸುವುದು ಕಠಿಣ ಕೆಲಸವಾಗಿದೆ. ಆದರೆ ದೇಶದಲ್ಲಿ ನಡೆಯುತ್ತಿರುವ ಯಾವುದೇ ಪ್ರತಿಭಟನೆ ತಾವು ಅನುಭವಿಸುತ್ತಿರುವ ಹಿಂಸೆಗೆ ವಿರೋಧವಾಗಿಯೇ ಇದೆ ಎಂಬುದರ ಅರಿವು ಅವರಿಗಿದೆ. ಹೀಗಾಗಿ ಅವರ ಯಾವುದೇ ತೆರನಾದ ಪ್ರತಿಭಟನೆ ಕ್ರಾಂತಿಗೆ ಪೂರಕವಾಗೇ ಇರುತ್ತದೆ.

ಮಹಿಳೆಯರ ಹೋರಾಟ ಮತ್ತು ರಾಷ್ಟ್ರೀಯ ವಿಮೋಚನೆಯ ಅಂತಿಮ ಗುರಿ ಸಾಮಾಜಿಕ ಬದಲಾವಣೆ ಆದ್ದರಿಂದ ಕಪ್ಪು ಮಹಿಳೆಯರ ಹೋರಾಟ ಅಪಾರ್ಥೈಡ್ ವಿರುದ್ಧದ ಹೋರಾಟದ ಒಂದು ಮಹತ್ವದ ಅಂಗವಾಗಿದೆ.

ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್‌ನಲ್ಲಿ ಮಹಿಳೆಯರಿಗೆ ಸಮಾನ ಸ್ಥಾನವಿದೆ. ಉಮ್‌ಖೊಂಟೊ ವೆ ಸಿಜ್ವೆ (ದೇಶದ ಈಟಿ) ಎಂಬ ಹೆಸರಿನ ಆದರ ಮಿಲಿಟರಿ ವಿಭಾಗದಲ್ಲಿ ಅವರಿಗೆ ಸರಿ ಸಮಾನವಾದ ತರಬೇತಿ ನೀಡಲಾಗುತ್ತಿದೆ. ಆದರೆ ಅನೇಕ ವರ್ಷಗಳಿಂದ ಶಿಕ್ಷಣವಿಲ್ಲದೆ ಹಾಗೂ ತಲೆತಲಾಂತರದಿಂದ ಬಂದ ಕೀಳರಿಮೆಯಿಂದಾಗಿ ಅನೇಕ ಮಹಿಳೆಯರು ಮುಂದುವರಿಯಲಿಕ್ಕಾಗುತ್ತಿಲ್ಲ. ವಿಮೋಚನಾ ಹೋರಾಟದಲ್ಲಿನ ಪುರುಷರು ತಮ್ಮ ಸ್ತ್ರೀಯರನ್ನು ಸಮಾನವಾಗಿ ಕಾಣುತ್ತಾರೆ. ಸಾಂಪ್ರದಾಯಿಕ ಸಮಾಜದಲ್ಲಿ ಕೂಡ ಈ ಪ್ರಜ್ಞೆ ಮೂಡುತ್ತಿದೆ.

ದಬ್ಬಾಳಿಕೆ ನಡೆಸುವವರಿಗೆ ಶರಣಾಗತರಾಗದಿರುವುದೇ ಸ್ವಾತಂತ್ರ್ಯ ಹೋರಾಟದ ಮೂಲವಾಗಿರುತ್ತದೆ. ಇಂದು ಪ್ರಜ್ಞಾವಂತ ಕಪ್ಪು ಮಹಿಳೆಯರು ಅಪಾರ್ಥೈಡ್ ಸರ್ಕಾರಕ್ಕೆ ಮತ್ತು ಗಂಡುಮಯವಾದ ಸಾಂಪ್ರದಾಯಿಕ ಸಮಾಜಕ್ಕೆ ಶರಣಾಗದೆ ಹೋರಾಡುತ್ತಿದ್ದಾರೆ.

"ಮಹಿಳೆಯರೇ ಎದ್ದೇಳಿ, ಒಂದುಗೂಡಿ, ಏಕತೆ ಸಾಧಿಸಿ" ಇದು ಅವರ ಘೋಷಣೆ.

ವಿಶ್ವಮಾನವ

ಗುಲಾಮಗಿರಿಯನ್ನು ರಾಜಕೀಯವಾಗಿ ಕ್ರಮಬದ್ಧಗೊಳಿಸಿರುವ ದೇಶವೆಂದರೆ ದಕ್ಷಿಣ ಆಫ್ರಿಕಾ ಒಂದೇ. ಒಂದು ಜನಾಂಗವನ್ನು ಸದಾಕಾಲ ಗುಲಾಮಗಿರಿಯಲ್ಲಿಡಲಿಕ್ಕಾಗದು ಎನ್ನುವುದಕ್ಕೆ ಇತಿಹಾಸ ಸಾಕ್ಷಿ ಇದೆ.

ಕರಿಯರ ಹೋರಾಟಗಳ ಸಂಕೇತವಾಗಿರುವ ನೆಲ್ಸನ್ ಮಂಡೇಲಾ ಟ್ರಾನ್ಸ್‌ಕೆಯಿ ಬಂಟುಸ್ತಾನದ ಉಮ್‌ಟಾಟಾ ಬಳಿಯ ಕುನು ಗ್ರಾಮದಲ್ಲಿ 1918ನೇ ಜುಲೈ 18ರಂದು ಜನಿಸಿದರು. ಅವರದು ಥೆಂಬು ರಾಜ ಮನೆತನಕ್ಕೆ ಸೇರಿದ ಕುಟುಂಬ. ತಂದೆ ಹೆನ್ರಿ ಗಾಡ್ಲಾ ಮಂಡೇಲಾರವರು ಥೆಂಬುಗಳ ನಾಯಕರಾಗಿದ್ದರು. ಥೆಂಬುಗಳ ಸಾರ್ವಭೌಮ ನಾಯಕ ಡೆವಿಡ್ ಡಲಿಂಡಿಯೆಬೊಗೆ ಮುಖ್ಯ ಸಲಹೆಗಾರರಾಗಿದ್ದರು.

ಬಹುಪತ್ನೀಕ ಹೆನ್ರಿಗೆ ನಾಲ್ವರು ಹೆಂಡಂದಿರಿದ್ದರು. ನೆಲ್ಸನ್ ತಾಯಿಯ ಹೆಸರು ನೊಂಕಾಫಿ. ಮನೆಯಲ್ಲಿ ಕರೆಯುವ ಹೆಸರು ನೊಸೆಕೆನಿ. ಆಕೆ ದೃಢ ಮನಸ್ಸಿನ ಹಾಗೂ ಘನತೆ ಗೌರವಗಳಿಂದ ಕೂಡಿದ ಮಹಿಳೆ ಆಗಿದ್ದರು.

ಹಿಂದೂ ಮಹಾಸಾಗರದಿಂದಾಗಿ ಪೂರ್ವ ಕರಾವಳಿ ಹೊಂದಿರುವ ಟ್ರಾನ್ಸ್‌ಕೆಯಿ ಬಂಟುಸ್ತಾನದ ಪರ್ವತಶ್ರೇಣಿಯ ಸುಂದರ ಕೊಳ್ಳದಲ್ಲಿ ಮಬಷೆ ನದಿಯ ಪಕ್ಕದಲ್ಲಿ, ಸಮೃದ್ಧ ಮುಸುಕಿನ ಜೋಳದ ಪ್ರದೇಶದಲ್ಲಿ ಹಾಗೂ ಹಚ್ಚನೆ ಹಸಿರು ತುಂಬಿದ ಹುಲ್ಲುಗಾವಲುಗಳಲ್ಲಿ ಅವರು ಬಾಲ್ಯದ ದಿನಗಳನ್ನು ಕಳೆದರು. ನಿಸರ್ಗ ರಮ್ಯ ವಾತಾವರಣ, ತಾಯಿಯ ಆತ್ಮಾಭಿಮಾನ ಮತ್ತು ತಂದೆಯ ಶಿಸ್ತುಗಳ ಮಧ್ಯೆ ರಾಜ ಮನೆತನಕ್ಕೆ ತಕ್ಕಂಥ ಗೌರವ ಸಂಪ್ರದಾಯ ಹಾಗೂ ಹೊಣೆಗಾರಿಕೆಯೊಂದಿಗೆ ನಿಶ್ಚಿಂತವಾಗಿ ಬೆಳೆದರು.

ಅವರ ಗ್ರಾಮದ ವಯೋವೃದ್ಧರು ರಾತ್ರಿ ವೇಳೆ ಬೆಂಕಿಯ ಸುತ್ತ ಕುಳಿತು ಬಿಳಿಯರು ಬರುವುದಕ್ಕೆ ಮುಂಚಿನ ಸುಖದ ಹಳೆಯ ದಿನಗಳ ಕುರಿತು

ಮಾತನಾಡುತ್ತಿದ್ದುದನ್ನು ಅವರು ಆಸಕ್ತಿಯಿಂದ ಕೇಳಿದರು. ಆಗ ಅವರಲ್ಲಿ ಮೊದಲ ಬಾರಿಗೆ ರಾಜಕೀಯ ಪ್ರಜ್ಞೆ ಮೂಡಿತು. "ವಿಮೋಚನೆ ಮತ್ತು ದೇಶ ರಕ್ಷಣೆಗಾಗಿ ನಮ್ಮ ಪೂರ್ವಜರು ಮಾಡಿದ ಹೋರಾಟ ಮತ್ತು ಆ ವೀರ ಗಾಥೆಯ ದಿನಗಳಲ್ಲಿ ಸೇನಾಪತಿಗಳು ಮತ್ತು ಸೈನಿಕರು ತೋರಿದ ಪರಾಕ್ರಮದ ಕುರಿತು ಹಿರಿಯರು ನಮಗೆ ಹೇಳುತ್ತಲೇ ಇದ್ದರು. ಬದುಕು ನನಗೆ ಕೊಡ ಬಹುದಾದ ಸಂತೋಷಗಳಲ್ಲಿ ನನ್ನ ಜನರ ಸೇವೆ ಮಾಡುವ ಅವಕಾಶವೂ ಇರು ವುದು. ಸ್ವಾತಂತ್ರ್ಯಕ್ಕಾಗಿ ಅವರು ನಡೆಸುವ ಹೋರಾಟಕ್ಕೆ ವಿನಮ್ರ ಕಾಣಿಕೆ ಅರ್ಪಿಸಬೇಕು ಎಂದು ನಾನು ಆಶಿಸಿದೆ ; ನಂತರ ಪ್ರತಿಜ್ಞೆ ಮಾಡಿದೆ" ಎಂದು ಅವರು ತಮ್ಮ ಜೀವನ ಚರಿತ್ರೆಯ ಟಿಪ್ಪಣಿಯಲ್ಲಿ ಬರೆದಿದ್ದಾರೆ.

ಹದಿಹರೆಯದ ಮನದಲ್ಲಿ ಸಾಹಸದ ಬೀಜಗಳು ಮೊಳಕೆ ಒಡೆದವು. ಮಿಷನ್ ಸ್ಕೂಲಿಗೆ ಸೇರಿದಾಗ ಅವರಿಗೆ ಅಚ್ಚರಿ ಕಾದಿತ್ತು. ಇತಿಹಾಸ ಗ್ರಂಥ ಗಳಲ್ಲಿ ಬಿಳಿಯ ವೀರರು ಮಿಂಚುತ್ತಿದ್ದರು. ಕರಿಯರು ಅನಾಗರಿಕರು ಮತ್ತು ದನಗಳ್ಳರು ಎಂದು ಮೂಲೆಗುಂಪಾಗಿದ್ದರು !

ಹೃದಯವಿದ್ರಾವಕ ಘಟನೆಗಳು

ಈಸ್ಟರ್ನ್ ಕೇಪ್‌ನ ಬುಲ್‌ಹೊಯೆಕ್ ಬಳಿ ಯಹೂದ್ಯರ ಪಂಗಡ ದವರು ವಾಸವಾಗಿದ್ದರು. ಆ ಪ್ರದೇಶ ಬಿಟ್ಟು ತೊಲಗಬೇಕೆಂದು ಸರ್ಕಾರ 1921ರಲ್ಲಿ ಆಜ್ಞೆ ಮಾಡಿತು. ಆ ಊರೊಟ್ಟಿನ ಜಮೀನನ್ನು ಬಿಟ್ಟು ಬೇರೆ ಕಡೆ ವಲಸೆ ಹೋಗಲು ಅವರು ಒಪ್ಪಲಿಲ್ಲ. ಆಗ ಪ್ರಧಾನಿ ಆಗಿದ್ದ ಜನರಲ್ ಸ್ಮಟ್ಸ್ ಸೈನ್ಯ ಕಳಿಸಿ ಅವರ ಮೇಲೆ ದಾಳಿ ಮಾಡಿಸಿದ. ಆ ಹತ್ಯಾಕಾಂಡ ದಲ್ಲಿ 163 ಮಂದಿ ಪುರುಷರು, ಮಹಿಳೆಯರು ಮತ್ತು ಮಕ್ಕಳು ಸತ್ತರು.

ದಕ್ಷಿಣ ಆಫ್ರಿಕಾದ ಆಳ್ವಿಕೆಗೆ ಒಳಪಟ್ಟಿದ ನಮೀಬಿಯಾದ ಬೊಂಡೆಲ್ಸ್ ವಾಟ್ಸ್ ಪ್ರದೇಶದ ಜನರು ಸಾಕಿದ ನಾಯಿಗಳ ಮೇಲೆ ಕರ ಹೇರಲಾಯಿತು. ತೀರ ಬಡವರಾದ ಅವರು ನಾಯಿಕರ ಕೊಡುವ ಸ್ಥಿತಿಯಲ್ಲಿರಲಿಲ್ಲ. ಹೀಗಾಗಿ ನಿರಾಕರಿಸಿದರು. ಆಗ ಸ್ಮಟ್ಸ್ ಕೋಪೋದ್ರಿಕ್ತನಾದ. ವಿಮಾನ ಗಳ ಮೂಲಕ ಅವರ ಮೇಲೆ ಬಾಂಬು ದಾಳಿ ಮಾಡಿಸಿದ. ಆಗ ನೂರಾರು

ಮಂದಿ ಅಮಾಯಕರು ಅಸು ನೀಗಿದರು. ಈ ಹೃದಯ ವಿದ್ರಾವಕ ಘಟನೆಗಳು ಯುವ ನೆಲ್ಸನ್ ಮನಸ್ಸಿನ ಮೇಲೆ ಆಳವಾದ ಪರಿಣಾಮ ಬೀರಿದವು. ಬೋಅರ್ ಯುದ್ಧದ ಮೂಲಕ ಯಾದವೀ ಕಲಹದ ದುರಂತವನ್ನು ಅರಿತುಕೊಂಡರು. ಡಚ್ ಮತ್ತು ಆಂಗ್ಲ ಬಿಳಿಯರು ಎಷ್ಟೇ ಕಾದಾಡಿದರೂ ಕರಿಯರ ವಿಚಾರ ಬಂದಾಗ ಎಲ್ಲ ಮರೆತು ಒಂದಾಗುತ್ತಾರೆ ಎಂಬುದನ್ನು ಅವರು ಮರೆಯಲಿಲ್ಲ.

1930ರಲ್ಲಿ ತಂದೆ ಹೆನ್ರಿ ನಿಧನರಾದರು. ನಂತರ ನೆಲ್ಸನ್ ಅವರ ಯೋಗಕ್ಷೇಮವನ್ನು ಸಾರ್ವಭೌಮ ನಾಯಕ ಡೆವಿಡ್ ನೋಡಿಕೊಂಡರು. ಆ ಸಾರ್ವಭೌಮ ನಾಯಕನ ಪ್ರದೇಶವಾದ ಮಕೆಕೆಜ್ವೆನಿಗೆ ಬಂದಾಗ ನೆಲ್ಸನ್‌ಗೆ 12 ವರ್ಷ, "ಹದಿನಾರನೇ ವಯಸ್ಸಿಗೆ ನಮ್ಮ ಪದ್ಧತಿಯ ಪ್ರಕಾರ ನಾನು ಮಬಷೆ ನದಿ ದಂಡೆಯಲ್ಲಿರುವ ಸುನತಿ ಮಠಕ್ಕೆ ಹೋದೆ. ನನ್ನ ಅನೇಕ ಪೂರ್ವಜರಿಗೆ ಆ ಸ್ಥಾನದಲ್ಲಿ ಸುನತಿ ಆಗಿತ್ತು. ನನ್ನ ಬುಡುಕಟ್ಟಿನ ದರ್ಜೆಯ ಪ್ರಕಾರ ಸದ್ಯ ನಾನು ಇಂಬಿಜೊ ಬುಡಕಟ್ಟಿನ ಲೋಕಸಭೆಯಲ್ಲಿ ಭಾಗವಹಿಸಲು ಸಿದ್ಧನಾದ ವ್ಯಕ್ತಿಯಾಗಿದ್ದೆ" ಎಂದು ಮಂಡೇಲಾ ತಿಳಿಸಿದ್ದಾರೆ. ಈ ಸಮಯದಲ್ಲಿ, ಅವರು ಸಮೀಪದ ಕ್ಲಾರ್ಕೆಬರಿ ತರಬೇತಿ ಮಹಾವಿದ್ಯಾಲಯ ಸೇರಿದ್ದರು.

ರಜೆಯ ದಿನಗಳಲ್ಲಿ ನಾಯಕ ಸಾರ್ವಭೌಮ ಡೆವಿಡ್ ತನ್ನ ಬುಡಕಟ್ಟು ನ್ಯಾಯಾಲಯದಲ್ಲಿ ತೀರ್ಪು ನೀಡುವುದನ್ನು ಆಸಕ್ತಿಯಿಂದ ಗಮನಿಸುತ್ತಿದ್ದರು. ಡೆವಿಡ್ ಬೇರೆ ಅನೇಕ ಬುಡಕಟ್ಟುಗಳ ನಾಯಕರ ಹಾಗೆ ಬಿಳಿಯರ ಗುಮಾಸ್ತರಂತೆ ಇರದೆ ಸ್ವಾಭಿಮಾನಿ ಆಗಿದ್ದರು. ಜನರ ಗೌರವವನ್ನೂ ಸಂಪಾದಿಸಿದ್ದರು. ಇದನ್ನೆಲ್ಲ ನೋಡಿದ ನೆಲ್ಸನ್ ನ್ಯಾಯವಾದಿ ಆಗುವ ಕನಸು ಕಂಡರು.

ಹೆಲ್ಡ್‌ಟೌನ್ ಮೆಥೊಡಿಸ್ಟ್ ಪ್ರೌಢಶಾಲೆಯಿಂದ ಮೆಟ್ರಿಕ್ ಪಾಸಾದ ನಂತರ ಈಸ್ಟರ್ನ್ ಕೇಪ್‌ನಲ್ಲಿ ಇರುವ ಅಲಿಸೆ ಗ್ರಾಮದ ಫೋರ್ಟ್ ಹ್ಯಾರೆ ಕಾಲೇಜಿಗೆ ಬಿ.ಎ. ಓದಲು ಸೇರಿದರು. ದಕ್ಷಿಣ ಆಫ್ರಿಕಾ ಅಷ್ಟೇ ಅಲ್ಲ ಪೂರ್ವ ಮತ್ತು ಮಧ್ಯ ಆಫ್ರಿಕಾದ ಅನೇಕ ಕಪ್ಪು ನಾಯಕರು ಆ ಕಾಲೇಜಿನಲ್ಲೇ ಓದಿ

ದವರಾಗಿದ್ದರಿಂದ ಅದಕ್ಕೊಂದು ವಿಶೇಷ ಮಹತ್ವವಿತ್ತು. ಕಾಲೇಜಿನಲ್ಲಿ ಒಂದು ವರ್ಷ ಹಿರಿಯರಾಗಿದ್ದ, ಸದ್ಯ ಎ. ಎನ್. ಸಿ. ಅಧ್ಯಕ್ಷರಾಗಿರುವ ಆಲಿವರ್ ಟಾಂಬೊ ಅವರ ಪರಿಚಯವಾಯಿತು. ಮುಂದೆ ಸ್ವಲ್ಪ ಸಮಯದ ನಂತರ ವಿದ್ಯಾರ್ಥಿ ಚಳವಳಿಯಲ್ಲಿ ಭಾಗವಹಿಸಿದ್ದಕ್ಕಾಗಿ ಅವರಿಬ್ಬರನ್ನು ಕಾಲೇಜಿನಿಂದ ಸಸ್ಪೆಂಡ್ ಮಾಡಲಾಯಿತು. ಡೆವಿಡ್ ಡಲಿಂಡಿಯೆ ಬೊರವರ ಬಳಿಗೆ ವಾಪಸ್ ಹೋದಾಗ ನೆಲ್ಸನ್ 22 ವರ್ಷದ ಯುವಕರಾಗಿದ್ದರು.

ಅವರ ಮದುವೆ ಮಾಡಬೇಕೆಂದು ಬಯಸಿದ ಡೆವಿಡ್ ಕನ್ಯೆಯನ್ನು ಆಯ್ಕೆ ಮಾಡಿದರು. ಲೊಬೋಲೊ (ಕನ್ಯಾದಕ್ಷಿಣೆ) ಕೂಡ ಕೊಟ್ಟಾಯಿತು. ಮದುವೆ ಏರ್ಪಾಟುಗಳು ನಡೆದವು. ಮದುವೆ ನಂತರ ಅವರನ್ನು ಥೆಂಬುಗಳ ನಾಯಕರನ್ನಾಗಿ ಮಾಡಲು ನಿರ್ಧರಿಸಲಾಯಿತು. "ಆತ (ಡೆವಿಡ್) ನನ್ನನ್ನು ಬಹಳವಾಗಿ ಪ್ರೀತಿಸಿದರು. ಆದರೆ ಅವರು ಪ್ರಜಾಪ್ರಭುತ್ವವಾದಿ ಆಗಿರಲಿಲ್ಲ. ಮದುವೆ ಹೆಣ್ಣಿನ ವಿಚಾರದಲ್ಲಿ ನನ್ನ ಸಲಹೆ ಕೇಳುವುದು ಪ್ರಯೋಜನಕಾರಿ ಎಂದು ಆತ ಯೋಚಿಸಿರಲಿಲ್ಲ. ದಪ್ಪನೆಯ ಮತ್ತು ಗೌರವಸ್ಥಳಾದ ಹುಡುಗಿಯನ್ನು ಆಯ್ಕೆ ಮಾಡಿದರು" ಎಂದು ನೆಲ್ಸನ್ ಮಂಡೇಲಾ ಹೇಳಿದ್ದಾರೆ.

ಥೆಂಬುಗಳ ನಾಯಕನಾಗುವುದು ಇನ್ನೂ ಹೆಚ್ಚಿನ ಬೇಸರ ಹುಟ್ಟಿಸುವ ವಿಚಾರವಾಗಿತ್ತು. ತುಳಿತಕ್ಕೊಳಗಾದ ಜನರನ್ನು ಎಂದೂ ಆಳಬಾರದು ಎಂದು ನಿರ್ಧರಿಸಿದ ಅವರು ಸೋದರಳಿಯ ಮಿತಿರಾರಾ ಜತೆ ಜೊಹಾನ್ಸ್‌ಬರ್ಗ್‌ಗೆ ಓಡಿ ಹೋದರು. ಅಂದಿನಿಂದ ಅವರು ಹೋರಾಟದ ಸಾಗರವನ್ನೂ ಈಜ ತೊಡಗಿದರು. ಕರಿಯರ ಕೋಸ್ಸಾ ಭಾಷೆಯಲ್ಲಿ ಅವರ ಹೆಸರು ರೋಲಿ ಹ್‌ಲಾಹ್ಲಾ. ಅಂತೆಯೆ ನೆಲ್ಸನ್ ರೋಲಿಹ್‌ಲಾಹ್ಲಾ ಮಂಡೇಲಾ ಎಂದು ಕರೆಯುತ್ತಾರೆ. ರೋಲಿಹ್‌ಲಾಹ್ಲಾ ಎಂದರೆ ಕಷ್ಟಗಳನ್ನು ಕೆದಕುವವ.

1941ರಲ್ಲಿ ಬೃಹತ್ ಔದ್ಯೋಗಿಕ ಕೇಂದ್ರವಾದ ಜೊಹಾನ್ಸ್‌ಬರ್ಗ್‌ಗೆ ಬರುವ ಹೊತ್ತಿಗೆ ಅವರು ಭರವಸೆ ಹುಟ್ಟಿಸುವ ಕ್ರೀಡಾಪಟು ಆಗಿದ್ದರು. ಬಾಕ್ಸಿಂಗ್‌ನಲ್ಲಿ ಅವರಿಗೆ ವಿಶೇಷ ಆಸಕ್ತಿ ಇತ್ತು. ರಾಜ ಮನೆತನದ ಗಾಂಭೀರ್ಯ ಮತ್ತು ಕ್ರೀಡಾಪಟುವಿನ ತೇಜಸ್ಸನ್ನು ಹೊಂದಿದ್ದ ಮಂಡೇಲಾ

ಸುರಕ್ಷಿತ ಬದುಕಿನಿಂದ ಚಂಡಮಾರುತಗಳಿಂದ ಕೂಡಿದ ಬದುಕಿಗೆ ಕಾಲಿಟ್ಟರು. ಜೊಹ ಂ್‌ಬರ್ಗ್‌ನ ಜನಸಾಗರದಲ್ಲಿ ಒಂದಾಗಿ ಹೋದರು.

ಭೂಮಿಯನ್ನು ಕಳಕೊಂಡ ಕರಿಯರು ಹೊಟ್ಟೆಪಾಡಿಗಾಗಿ ಗಣಿ, ಕಾರ್ಖಾನೆಗಳಲ್ಲಿ ಕಡಿಮೆ ಕೂಲಿಗೆ ದುಡಿಯುವುದು ಸಹಜವಾಗಿ ಹೋಗಿತ್ತು. ಆ ವೇಳೆಗೆ ಬಹಳಷ್ಟು ಕರಿಯರು ಕಪ್ಪುಕಾರ್ಮಿಕ ವರ್ಗವಾಗಿ ರೂಪಗೊಂಡಿದ್ದರು. ನಗರಕ್ಕೆ ಬಂದ ಮಂಡೇಲಾ ಇದೇ ತೆರನಾದ ಕೆಲಸ ಮಾಡಲು ಸಿದ್ಧವಾದರು. ಜೊಹಾನ್ಸ್‌ಬರ್ಗ್‌ನ ಕ್ರೌನ್ ಮೈನ್ಸ್‌ನಲ್ಲಿ ಗೇಟು ಕಾಯುವ ಕೆಲಸ ಮಾಡಿದರು ಕೆಲದಿನಗಳ ನಂತರ ಥೆಂಬುಗಳ ನಾಯಕ ಸಾರ್ವಭೌಮನ ಪ್ರತಿನಿಧಿ ಬಂದಾಗ ನೆಲ್ಸನ್ ಅಲ್ಲಿಂದ ಕಾಲು ಕೀಳಬೇಕಾಯಿತು.

ಜೊಹಾನ್ಸ್‌ಬರ್ಗ್‌ನ ಹೊರವಲಯದಲ್ಲಿರುವ ಅಲೆಕ್ಸಾಂಡ್ರಾ ಉಪನಗರದಲ್ಲಿ ಕೋಣೆಯೊಂದು ಸಿಕ್ಕಿತು ನಂತರ ವಾಲ್ಟೇರ್ ಸಿಸುಲು ಅವರ ಭೇಟಿಯಾಯಿತು. ಕರಿಯರ ಭೂ ವ್ಯವಹಾರಕ್ಕೆ ಸಂಬಂಧಿಸಿದಂತೆ ಸಿಸುಲು ಚಿಕ್ಕ ಎಸ್ಟೇಟ್ ಏಜನ್ಸಿ ನಡೆಸುತ್ತಿದ್ದರು. ನೆಲ್ಸನ್ ಆ ಏಜೆನ್ಸಿಯಲ್ಲಿ ಏಜೆಂಟ್ ಆಗಿ ಒಂದು ವರ್ಷದ ವರೆಗೆ ಕೆಲಸ ಮಾಡಿದರು. ಆಗ ತಿಂಗಳಿಗೆ ಎರಡು ಪೌಂಡ್ ಮತ್ತು ಸ್ವಲ್ಪ ಕಮೀಷನ್ ಬರುತ್ತಿತ್ತು. ಅವರ ಬದುಕಿನ ಅತ್ಯಂತ ಕಠಿಣ ಸಮಯ ಅದಾಗಿತ್ತು. ಇದೇ ಸಮಯದಲ್ಲಿ ಅಂಚೆ ಮೂಲಕ ಬಿ.ಎ. ಪದವಿ ಪಡೆದರು. ಅದಕ್ಕಾಗಿ ಸಿಸುಲು ಆರ್ಥಿಕ ಸಹಾಯ ಮಾಡಿದರು. ಸಿಸುಲು ಸಹಾಯದಿಂದ 1942ರಲ್ಲಿ ಜೊಹಾನ್ಸ್‌ಬರ್ಗ್‌ನಲ್ಲಿನ ವಿಟ್‌ಕಿನ್, ಸಿಡೆಲ್‌ಸ್ಕಿ ಮತ್ತು ಈಡೆಲ್‌ಮನ್ ವ್ಯವಹಾರ ಪ್ರತಿನಿಧಿಗಳ ಸಂಸ್ಥೆ ಸೇರಿದರು. ಇದರಿಂದಾಗಿ ವಿಟ್‌ವಾಟರ್ಸ್‌ರ್ಯಾಂಡ್ ವಿಶ್ವವಿದ್ಯಾನಿಲಯದ ಕಾನೂನು ವಿದ್ಯಾರ್ಥಿ ಆಗಲೂ ಸಾಧ್ಯವಾಯಿತು. "ಈ ಸಂಸ್ಥೆಗಳಲ್ಲಿ ನಾನು ಪಡೆದ ಅನುಭವಗಳಲ್ಲಿ ಎರಡು ದಾಖಲಾತಿಗೆ ಯೋಗ್ಯವಾಗಿವೆ" ಎಂದು ನೆಲ್ಸನ್ ತಿಳಿಸಿದ್ದಾರೆ.

ಹೊಸ ಬಟ್ಟೆಲು–ಹಳೆಮನಸ್ಸು

"ಮೊದಲ ದಿನ ಕಚೇರಿಗೆ ಹೋದಾಗ ಬಿಳಿಯ ಹಿರಿಯ ಟೈಪಿಸ್ಟ್

ಹೇಳಿದಳು. ನೋಡಿ ನೆಲ್ಸನ್ ಇಲ್ಲಿ ವರ್ಣದ ಅಡತಡೆ ಇಲ್ಲ. ಚಹದ ಹುಡುಗ ಚಹಾ ತಂದಾಗ ತಟ್ಟೆಯಿಂದ ನಿಮ್ಮದನ್ನು ತೆಗೆದುಕೊಳ್ಳಿ. ನಿಮಗೆ ಮತ್ತು ಗೌರ್ ರಾದಿಕೆ (ಇನ್ನೊಬ್ಬ ಕರಿಯ ನೌಕರ)ಗಾಗಿ ನಾವು ಹೊಸ ಬಟ್ಟಲುಗಳನ್ನು ತಂದಿದ್ದೇವೆ ನೀವು ಅವುಗಳನ್ನು ಉಪಯೋಗಿಸಿಕೊಳ್ಳಿ. ನಿಮ್ಮ ಬಟ್ಟಲುಗಳ ವಿಚಾರದಲ್ಲಿ ಗೌರ್‌ಗೆ ಹೇಳಿ. ಆತನ ಬಗ್ಗೆ ಎಚ್ಚರದಿಂದಿರಿ ನೆಲ್ಸನ್ ಆತ ಕೆಟ್ಟ ಪ್ರಭಾವ ಬೀರುವಂಥವನಾಗಿದ್ದಾನೆ. ನಾನು ಗೌರ್‌ಗೆ ಸಕಾಲದಲ್ಲಿ ಹೇಳಿದೆ 'ನಾನು ನಿಮಗೆ ತೋರಿಸುವೆ ನಾನು ಮಾಡಿದ ಹಾಗೆ ಮಾಡಿ' ಎಂದು ಆತ ಪ್ರತಿಕ್ರಿಯೆ ವ್ಯಕ್ತಪಡಿಸಿದರು. ಚಹಾ ಬಂದಾಗ ಗೌರ್ ಹೊಸ ಬಟ್ಟಲುಗಳನ್ನು ಬಹಿಷ್ಕರಿಸಿದರು. ಹಳೆಯದರಲ್ಲಿನ ಒಂದು ಬಟ್ಟಲನ್ನು ಎತ್ತಿಕೊಂಡರು. ಅವರ ಜೊತೆಗಾಗಲಿ ಹಿರಿಯ ಟೈಪಿಸ್ಟ್ ಜೊತೆಗಾಗಲಿ ಜಗಳ ಮಾಡುವ ಇಚ್ಛೆ ನನಗಿರಲಿಲ್ಲ. ಆದ್ದರಿಂದ ತಿಂಗಳು ಗಟ್ಟಲೆ ನಾನು ಚಹಾ ಕುಡಿಯಲಿಲ್ಲ.

ಕೆಲ ತಿಂಗಳುಗಳ ನಂತರ ಹೊಸ ಟೈಪಿಸ್ಟ್ ಬಂದಳು. ಆಕೆ ಕೂಡ ಬಿಳಿಯಳು. ಮಾಡಲು ಏನೂ ಕೆಲಸವಿಲ್ಲದಾಗ ನನಗೆ ಕೆಲಸ ಕೇಳುವ ಅಭ್ಯಾಸ ಆಕೆಗಿತ್ತು. ಒಂದು ದಿನ ನಾನು ಆಕೆಗೆ ಹೇಳಿ ಬರೆಯಿಸುವ ವೇಳೆ ಒಬ್ಬ ಬಿಳಿಯ ಗರಾಕಿ ಒಳಗೆ ಬಂದ. ಆಕೆ ಗೋಚರಿಸುವಂತೆ ಪೇಚಾಡಿಕೊಂಡಳು. ನಾನು ಆಕೆಗೆ ಕೆಲಸ ಕೊಡುವ ವ್ಯಕ್ತಿ ಅಲ್ಲ ಎಂಬುದನ್ನು ಪ್ರದರ್ಶಿಸುವುದಕ್ಕಾಗಿ ತನ್ನ ಪರ್ಸ್‌ನಿಂದ ಆರು ಪೆನ್ನಿ ತೆಗೆದು 'ನೆಲ್ಸನ್ ದಯವಿಟ್ಟು ಅಂಗಡಿಗೆ ಹೋಗಿ ಶಾಂಪೂ ತೆಗೆದುಕೊಂಡು ಬನ್ನಿ' ಎಂದಳು" ಎಂದು ನೆಲ್ಸನ್ ಮಂಡೇಲಾ ಅವರು ತಮ್ಮ ಟಿಪ್ಪಣಿಯಲ್ಲಿ ಬರೆದಿದ್ದಾರೆ. ಅಲ್ಲಿ ಇಂಥ ಅಪಮಾನಗಳು ಎಂಥ ಕರಿಯರಿಗೂ ತಪ್ಪಿದ್ದಲ್ಲ.

ಮಂಡೇಲಾ ಅವರು ಕಾನೂನಿನ ವಿದ್ಯಾರ್ಥಿ ಆಗಿದ್ದಾಗಲೇ ಎವೆಲಿನ್ ಎಂಬ ಮೃದು ಸಭ್ಯಾವದ ನರ್ಸ್ ಅನ್ನು ಮದುವೆ ಆದರು. ಅವರು ಆಲ್ಯಾಂಡೊದಲ್ಲಿ ಮನೆ ಮಾಡಿದ್ದರು. ನೆಲ್ಸನ್ ಶಿಕ್ಷಣಕ್ಕೆ ಎವೆಲಿನ್ ಧನ ಸಹಾಯ ಮಾಡುತ್ತಿದ್ದಳು. ಜೊಹಾನ್ಸ್‌ಬರ್ಗ್‌ನಿಂದ ಹತ್ತು ಮೈಲಿ ದೂರ ವಿರುವ ಆ ಉಪನಗರಕ್ಕೆ ಈಗ ಸೊವೆಟೊ ಎಂದು ಕರೆಯುತ್ತಾರೆ. ಸಿಸುಲು

ಅವರ ಪತ್ನಿ ಅಲ್ಬರ್ಟಿನಾ ಕೂಡ ನರ್ಸ್ ಆಗಿದ್ದರು ಇದೇ ವೇಳೆಗೆ ಸೇಂಟ್ ಪೀಟರ್ಸ್ ಶಾಲೆಯಲ್ಲಿ ವಿಜ್ಞಾನದ ಶಿಕ್ಷಕರಾಗಲು ಆಲಿವರ್ ಟಾಂಬೊ ಜೊಹಾನ್ಸ್‌ಬರ್ಗ್‌ಗೆ ಬಂದರು.

ಕಪ್ಪು ಪ್ರಜ್ಞೆ

ಜನ್ಮಭೂಮಿಯ ನಿಸರ್ಗ ಸೌಂದರ್ಯ, ರಾಜ ಮನೆತನದ ಸಂಪ್ರದಾಯಗಳಿಂದ ಕೂಡಿದ ಬಾಲ್ಯ, ಪೂರ್ವಜರ ಸಾಹಸ, ತಾಯಿಯ ಗಾಂಭೀರ್ಯ, ತಂದೆಯ ಶಿಸ್ತು, ನಾಯಕ ಸಾರ್ವಭೌಮನ ಆತ್ಮಾಭಿಮಾನ ಹಾಗೂ ದೈನಂದಿನ ಅಪಮಾನ ಮತ್ತು ದಬ್ಬಾಳಿಕೆಗೆ ಒಳಗಾದ ಕರಿಯರ ಚಿಂತಾಜನಕವಾದ ಆರ್ಥಿಕ ಮತ್ತು ಸಾಮಾಜಿಕ ಬದುಕಿನಿಂದಾಗಿ ನೆಲ್ಸನ್ ಮಂಡೇಲಾ ಕಪ್ಪು ಪ್ರಜ್ಞೆಯ ಪ್ರತಿಪಾದಕರಾಗಿ ಬೆಳೆದು ನಿಂತಿದ್ದರು. ಎಲ್ಲ ಜನಾಂಗಗಳು ತಮ್ಮ ತಮ್ಮ ಬುಡಕಟ್ಟು ಪ್ರಜ್ಞೆಯಿಂದ ಹೊರ ಬಂದು ಒಟ್ಟಾರೆ ಕಪ್ಪು ಪ್ರಜ್ಞೆಯೊಂದಿಗೆ ಬಿಳಿಯರ ವಿರುದ್ಧ ಹೋರಾಡುವುದು ಅನಿವಾರ್ಯ ಎಂಬ ನಿರ್ಧಾರಕ್ಕೆ ಬಂದರು. ತಾನೊಬ್ಬ ಥೆಂಬು ರಾಜಮನೆತದ ವ್ಯಕ್ತಿ ಎಂದು ಭಾವಿಸುವುದಕ್ಕಿಂತಲೂ ಆಫ್ರಿಕನ್ ರಾಷ್ಟ್ರೀಯವಾದಿ ಎಂದು ಗುರುತಿಸಿಕೊಳ್ಳುವುದು ಅವರಿಗೆ ಪ್ರಿಯವಾಯಿತು. ಹೀಗಾಗಿ ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ ಅವರನ್ನು ಸಹಜವಾಗಿ ಆಕರ್ಷಿಸಿತು.

ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್

ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ 1912ನೇ ಜನವರಿ 8ರಂದು ಸ್ಥಾಪನೆ ಆಯಿತು. ಪ್ರಾರಂಭದಲ್ಲಿ ಸೌತ್ ಆಫ್ರಿಕನ್ ನೇಟಿವ್ ನ್ಯಾಷನಲ್ ಕಾಂಗ್ರೆಸ್ ಎಂದು ಹೆಸರಿಡಲಾಗಿತ್ತು. 1912ನೇ ಜನವರಿ 8 ರಿಂದ 12ರ ವರೆಗೆ ಬ್ಲೋಮ್‌ಫೊಂಟೀನ್‌ನಲ್ಲಿ ಸಮ್ಮೇಳನ ನಡೆಯಿತು. ಕೊಲಂಬಿಯಾ, ಆಕ್ಸ್‌ಫರ್ಡ್ ಮತ್ತು ಮಿಡ್ಲ್ ಟೆಂಪಲ್‌ನಲ್ಲಿ ಶಿಕ್ಷಣ ಪಡೆದ ಜುಲು ವಕೀಲ ಪ್ರಿಕ್ಸ್‌ಲೆಕಾ ಇಜಾಕಾ ಸೆಮೆ ಈ ಪಕ್ಷದ ಸ್ಥಾಪನೆಗೆ ತುಂಬ ಪ್ರಯತ್ನ ಪಟ್ಟರು. ದಕ್ಷಿಣ ಆಫ್ರಿಕಾದ ಎಲ್ಲ ಬುಡಕಟ್ಟುಗಳ ಕಪ್ಪು ಜನರನ್ನು ಒಂದು ಗೂಡಿಸುವುದೇ ಈ ಪಕ್ಷ ಸ್ಥಾಪನೆಯ ಮುಖ್ಯ ಉದ್ದೇಶವಾಗಿತ್ತು.

ಬುಡಕಟ್ಟುಗಳ ನಾಯಕರು, ಅವರ ಅನುಯಾಯಿಗಳು, ರಾಜಕೀಯ ಸಂಘಟನೆಗಳ ನಾಯಕರು, ಬಂಟುಸ್ತಾನ್‌ಗಳ ಮಂತ್ರಿಗಳು, ಶಿಕ್ಷಕರು, ಪತ್ರಕರ್ತರು ಮತ್ತು ವಕೀಲರು ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಅಮೇರಿಕದಲ್ಲಿ ತರಬೇತಿ ಪಡೆದ ಶಿಕ್ಷಣ ತಜ್ಞ ರೆವೆರೆಂಡ್ ಜಾನ್ ಡುಬೆ (ಜುಲು ಬುಡಕಟ್ಟು) ಅವರನ್ನು ಕಾಂಗ್ರೆಸ್‌ನ ಅಧ್ಯಕ್ಷರನ್ನಾಗಿ ನೇಮಿಸಲಾಯಿತು. ಸೆಮೆ ಖಜಾಂಚಿಯಾಗಿ ಆಯ್ಕೆ ಆದರು. ಪತ್ರಕರ್ತ ಮತ್ತು ಕಾದಂಬರಿಕಾರ ಸೊಲ್ ಪಾಟೆ, ಪ್ರಧಾನ ಕಾರ್ಯದರ್ಶಿ ಆದರು. ರುಬುಸಾನಾ ಗೌರವಾಧ್ಯಕ್ಷರಾದರು.

ಮಫೆಕಿಂಗ್, ಬಸುತೊಲ್ಯಾಂಡ್, ಪ್ರಿಟೋರಿಯಾ, ಜೊಹಾನ್ಸ್‌ಬರ್ಗ್ ನತಾಲ್, ಬ್ಲೊಯೆಂಫೊಂಟೀನ್ ಮತ್ತು ಕೇಪ್‌ಟೌನ್‌ಗಳಿಂದ ಉಪಾಧ್ಯಕ್ಷರನ್ನು ನೇಮಿಸಲಾಯಿತು.

ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ ಸ್ಥಾಪನೆಯಿಂದಾಗಿ ವರ್ಣಭೇದ ನೀತಿಯ ವಿರುದ್ಧದ ಸಂಘಟಿತ ಹೋರಾಟಕ್ಕೆ ಹೊಸ ರೂಪ ಬಂತು. ಕರಿಯರು ಈ ಹಿಂದೆ ಅನುಭವಿಸಿದ್ದ ಸೋಲು ಮತ್ತು ಅನಿವಾರ್ಯತೆಗಳ ಮಧ್ಯದಿಂದ ಈ ರಾಜಕೀಯ ಸಂಘಟನೆ ಉದ್ಭವಿಸಿತು

1910ರಲ್ಲಿ ಯೂನಿಯನ್ ಆಫ್ ಸೌತ್ ಆಫ್ರಿಕಾ ಅಸ್ತಿತ್ವಕ್ಕೆ ಬಂದು ಸಂಪೂರ್ಣ ಬಿಳಿಯರ ಸಂಸತ್ತು ರಚನೆ ಆದಾಗ ಸಲಿಗೆಯ ಹೊಸ ರೂಪಗಳಿಗೆ ಚಾಲನೆ ಸಿಕ್ಕಿತು. ಕರಿಯರಿಗೆ ಹೊಸ ರಾಜಕೀಯ ಪ್ರಜ್ಞೆ ಮೂಡತೊಡಗಿತು. ಅದರ ಮೂರ್ತಿ ಸ್ವರೂಪವೇ ಎ.ಎನ್.ಸಿ ಆಗಿದೆ.

ಕ್ಸೋಸಾ ಭಾಷೆಯ ಕವಿ ಎನೋಜ್ ಸೊಂಟೊಂಗಾ ಬರೆದ ಪ್ರಾರ್ಥನಾ ಗೀತವನ್ನು ಸಭೆಯ ಪ್ರಾರಂಭದಲ್ಲಿ ಹಾಡಲಾಯಿತು. ನಕೋಸಿ ಸಿಕೆಲೆಲ್ ಇ ಆಫ್ರಿಕಾ (ದೇವರೇ ಆಫ್ರಿಕಾದ ಮೇಲೆ ಕರುಣೆ ತೋರು). ಎಂಬುದು ಆ ಗೀತದ ಮೊದಲ ಸಾಲು. ಆ ಪ್ರಾರ್ಥನಾ ಗೀತೆ ನಂತರ ಎ.ಎನ್.ಸಿ.ಯ ರಾಷ್ಟ್ರಗೀತೆ ಆಯಿತು. 1925ರಲ್ಲಿ ಕಪ್ಪು, ಹಸಿರು ಮತ್ತು ಚಿನ್ನದ ಬಣ್ಣಗಳ ಧ್ವಜ ಪಡೆಯಿತು. ಈ ಬಣ್ಣಗಳು ಅನುಕ್ರಮವಾಗಿ ಜನ, ಭೂಮಿ ಮತ್ತು ಸಂಪನ್ಮೂಲಗಳ ಪ್ರತೀಕ ಆಗಿವೆ.

1913ರಲ್ಲಿ ದಕ್ಷಿಣ ಆಫ್ರಿಕಾ ಸರ್ಕಾರ ನೇಟಿವ್ ಲ್ಯಾಂಡ್ ಕಾಯ್ದೆ

ಮೂಲಕ ಕರಿಯರ ಜಮೀನನ್ನು ಸ್ವಾಧೀನಪಡಿಸಿಕೊಂಡಿತು. ಆಗ ಕರಿಯರಿಗೆ ಉಳಿದದ್ದು ಕೇವಲ ಶೇ. 12.7ರಷ್ಟು ಭೂಮಿ. ಈ ಕಾಯ್ದೆ ಮಸೂದೆ ರೂಪದಲ್ಲಿ ಇದ್ದಾಗ ಕರಿಯರಿಗೆ ಭೂಮಿಯಲ್ಲಿ ಯೋಗ್ಯ ಪಾಲು ದೊರೆಯುವುದೆಂಬ ಭ್ರಮೆ ಇತ್ತು. ಈ ಕುರಿತು ಎ.ಎನ್.ಸಿ.ಯ ನಾಯಕರಲ್ಲಿ ಕೂಡ ಭಿನ್ನಾಭಿಪ್ರಾಯ ಮೂಡಿತು. ಡುಬೆ ಕೂಡ ಈ ಮಸೂದೆಯನ್ನು ಬೆಂಬಲಿಸಿದರು. ಆದರೆ ಪ್ಲಾಟ್ಜೆ ವಿರೋಧಿಸಿದರು. ಡುಬೆ ಅಧ್ಯಕ್ಷ ಸ್ಥಾನ ಕಳೆದುಕೊಂಡರು. ಎಸ್. ಮಕ್‌ಗಥೊ ಅಧ್ಯಕ್ಷರಾಗಿ ಆಯ್ಕೆ ಆದರು.

ಎ. ಎನ್. ಸಿ. ಯ ಅಹಿಂಸಾ ಮಾರ್ಗದಿಂದಾಗಿ ಬಿಳಿಯರ ಸರ್ಕಾರ ಹೆಚ್ಚು ಕ್ರೂರಿ ಆಗುತ್ತ ಸಾಗಿತು. ಜನತೆಯ ಹೋರಾಟಗಳನ್ನು ಹಿಂಸೆಯಿಂದ ಸದೆಬಡಿಯಿತು. ಹೀಗಾಗಿ 1930ರ ದಶಕದಲ್ಲಿ ಎ. ಎನ್. ಸಿ ನಿಷ್ಕ್ರಿಯವಾಯಿತು.

ಜೊಹಾನ್ಸ್‌ಬರ್ಗ್‌ನ ಡಾ॥ ಎ. ಬಿ. ಕ್ಷುಮಾ ಡಿಸೆಂಬರ್ 1940ರಲ್ಲಿ ಎ.ಎನ್.ಸಿ ಅಧ್ಯಕ್ಷರಾದರು. ಸಾಮಾಜಿಕ ಮಾನವಶಾಸ್ತ್ರದ ಉಪನ್ಯಾಸಕ ಮತ್ಥೀವ್ಸ್ ಈ ಸಂದರ್ಭದಲ್ಲಿ ಎ. ಬಿ. ಕ್ಷುಮಾ ಅವರಿಗೆ ಹೆಚ್ಚು ಸಹಕಾರಿ ಆಗಿದ್ದರು.

ಅಧಿಕ ಲಾಭ ಬರುವ ಮತ್ತು ಕಡಿಮೆ ದರದಲ್ಲಿ ಕೂಲಿ ಸಿಗುವ ದಕ್ಷಿಣ ಆಫ್ರಿಕಾ ಬಹುರಾಷ್ಟ್ರೀಯ ಕಂಪೆನಿಗಳ ಸುಲಿಗೆಯ ಕೇಂದ್ರವಾಗಿ ಬೆಳೆಯ ತೊಡಗಿತು. ಅವುಗಳಿಗೆ ಪ್ರತಿಯಾಗಿ ಕಾರ್ಮಿಕ ಸಂಘಟನೆಗಳೂ ಬೆಳೆಯ ತೊಡಗಿದವು. 1942ರಲ್ಲಿ ಮುಷ್ಕರಗಳ ಮೇಲೆ ನಿಷೇಧ ಹೇರಲಾಯಿತು. ಆದರೆ ಮುಷ್ಕರಗಳನ್ನು ನಿಲ್ಲಿಸಲಿಕ್ಕಾಗಲಿಲ್ಲ.

1942ರ ವೇಳೆಗೆ ಎ. ಎನ್. ಸಿ ಬಹಳ ನಿಷ್ಕ್ರಿಯವಾಗಿತ್ತು. ಆಫ್ರಿಕನ್ ಡೆಮಾಕ್ರಟಿಕ್ ಪಾರ್ಟಿಯ ಸ್ಥಾಪನೆಗಾಗಿ ಅನೇಕರು ಎ.ಎನ್.ಸಿ ಬಿಟ್ಟರು. ವಾಲ್ಟೇರ್ ಸಿಸುಲು, ಆಲಿವರ್ ಟಾಂಬೊ ಮತ್ತು ನೆಲ್ಸನ್ ಮಂಡೇಲಾ ಅವರಿಗೆ ಇದು ಸರಿಬೀಳಲಿಲ್ಲ. ಎ.ಎನ್.ಸಿ ಬಲಪಡಿಸಲು ನಿರ್ಧರಿಸಿದರು. ಸಿಸುಲು ಈ ವೇಳೆಗಾಗಲೆ ಎ.ಎನ್.ಸಿ ಸದಸ್ಯರಾಗಿದ್ದರು.

ಮಂಡೇಲಾ ಮತ್ತು ಗೆಳೆಯರು ಕೂಡಿ ಎ.ಎನ್.ಸಿ. ಯೂತ್‌ಲೀಗ್

ಪ್ರಾರಂಭಿಸಿದರು. ಆ ಮೂಲಕ ಎ.ಎನ್.ಸಿ.ಯನ್ನು ಚುರುಕುಗೊಳಿಸ ತೊಡಗಿದರು. ಇವರ ಪ್ರಯತ್ನ ಡಾ॥ ಕ್ಷುಮಾ ಅವರಿಗೆ ಹೆಚ್ಚಿನ ಸಂತಸ ತಂದಿತು.

1944ನೇ ಏಪ್ರಿಲ್‌ನಲ್ಲಿ ಅಂಟೋನ್ ಮುಜಿವಖೆ ಲೆಂಬೆಡೆ ಯೂತ್ ಲೀಗ್ ಅಧ್ಯಕ್ಷರಾಗಿ ಆಯ್ಕೆ ಆದರು. ಆಲಿವರ್ ಟಾಂಬೊ ಕಾರ್ಯದರ್ಶಿ ಆದರು. ಎ.ಪಿ. ಮದಾ ಅವರು ಸಿದ್ಧಪಡಿಸಿದ ಮೂಲ ನೀತಿಗೆ ಅಂತಿಮ ರೂಪ ಕೊಟ್ಟರು. ಶಕ್ತಿಶಾಲಿಯಾದ ವಿಮೋಚನಾ ಹೋರಾಟಗಳಿಗಾಗಿ ಯೂತ್ ಲೀಗ್ ಬೆಳೆಸಲು ಆಶಿಸಿದರು.

ಲೆಂಬೆಡೆ ಜುಲು ಕೃಷಿ ಕಾರ್ಮಿಕರ ಮಗ. ಅವರ ತಂದೆ-ತಾಯಿ ಕಡುಬಡವರಾಗಿದ್ದರು. ಅವರಿಗೆ ಉಡಲು ಬಟ್ಟೆ ಕೂಡ ಇರಲಿಲ್ಲ. ಗೋಣಿ ಚೀಲದಿಂದ ಉಡುಪು ತಯಾರಿಸಿ ಧರಿಸುತ್ತಿದ್ದರು. ಹೇಗಾದರೂ ಮಾಡಿ ಮಗನಿಗೆ ಶಿಕ್ಷಣ ಕೊಡಬೇಕೆಂಬುದು ಅವರ ಮಹದಾಶೆ ಆಗಿತ್ತು. ಲೆಂಬೆಡೆ ಮೊದಲು ಶಿಕ್ಷಕರಾಗಿ ನಂತರ ವಕೀಲರಾದರು. ಎ. ಪಿ. ಮದಾ ಕೂಡ ಮೊದಲು ಶಿಕ್ಷಕರಾಗಿದ್ದರು. ನಂತರ ವಕೀಲರಾದರು. ಈ ಗೆಳೆಯ ರಿಂದಾಗಿ ಆಫ್ರಿಕಾದ ವಿಮೋಚನಾ ಹೋರಾಟ ಹೊಸ ತಿರುವು ಪಡೆಯಿತು.

ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ ಅನ್ನು ಆಧುನಿಕಗೊಳಿಸುವಲ್ಲಿ ಮಂಡೇಲಾರ ಪಾತ್ರ ಹಿರಿದಾಗಿದೆ. ಸಂಘಟನೆಯಲ್ಲಿ ಅವರು ಅನೇಕ ಸುಧಾ ರಣೆಗಳನ್ನು ತಂದರು. ರಾಷ್ಟ್ರೀಯ ಚಳವಳಿಗೆ ಕ್ರಾಂತಿಯ ತಂತ್ರಗಳನ್ನು ಅಳವಡಿಸಿದರು. ವರ್ಣಭೇದ ನೀತಿಯ ಸರ್ಕಾರದ ವಿರುದ್ಧ ಒಂದುಗೂಡಿ ಹೋರಾಡಬೇಕಾದರೆ ಎಲ್ಲ ಕರಿಯರ ಬುಡಕಟ್ಟುಗಳ ಮಧ್ಯೆ ಸಮಾನತೆ ಸಾಧಿಸಬೇಕು. ವಿವಿಧ ಜನಾಂಗಗಳ ಸಂಸ್ಕೃತಿ ಮತ್ತು ಭಾಷೆಗಳ ಮಧ್ಯೆ ಸಂಪರ್ಕ ಉಂಟಾಗಬೇಕು. ವಿವಿಧ ರಾಷ್ಟ್ರೀಯತೆಗಳ ಬದಲು ಸಮಗ್ರ ರಾಷ್ಟ್ರೀಯ ಪ್ರಜ್ಞೆ ಮೂಡಿ ಬರಬೇಕು ಎಂಬ ತಮ್ಮ ನಿಲುವನ್ನು ಅವರು ಸಾಧಿಸಿದರು. ಅಷ್ಟೇ ಅಲ್ಲ ಕಾರ್ಮಿಕರು, ರೈತರು, ಮಹಿಳೆಯರು ಮತ್ತು ಯುವಕರನ್ನು ಹೋರಾಟದ ಮುಂಚೂಣಿಯಲ್ಲಿ ತಂದರು. ಕರಿಯರು, ಭಾರತೀಯ ಮೂಲ ನಿವಾಸಿಗಳು ಮತ್ತು ಮಿಶ್ರವರ್ಣೀಯರ ಮಧ್ಯೆ ಒಗ್ಗಟ್ಟನ್ನು ಉಂಟುಮಾಡಿದರು. ಕಮ್ಯೂನಿಸ್ಟರು ಮತ್ತು ಕಮ್ಯೂನಿಸ್ಟ

ರಲ್ಲದ ಹೋರಾಟಗಾರರನ್ನು ಒಂದುಗೂಡಿಸಿದರು. ಕರಿಯರು ಜನಾಂಗ ವಾದಿಗಳಾಗದಂತೆ ನೋಡಿಕೊಂಡು ವರ್ಣಭೇದ ನೀತಿಯನ್ನು ಒಕ್ಕೊರಲಿನಿಂದ ವಿರೋಧಿಸುವಲ್ಲಿ ಸಫಲರಾದರು. ಹೀಗೆ ಏಕತೆ ಮತ್ತು ಹೋರಾಟಕ್ಕೆ ಹೊಸ ಚೈತನ್ಯ ನೀಡುವಂಥ ರಾಜಕೀಯ ಪ್ರಜ್ಞೆ ಮೂಡಿಸಿದರು. ಅವರ ಈ ಎಲ್ಲ ಆಲೋಚನೆಗಳು 1955 ನೇ ಜೂನ್ 26 ರಂದು ಅಂಗೀಕರಿಸಿದ ಸ್ವಾತಂತ್ರ್ಯ ಘೋಷಣೆಯ ತಿರುಳಾಗಿವೆ. ಮಂಡೇಲಾರ ವಿಚಾರಗಳು ಜನಸಮುದಾಯದ ಬಯಕೆಗಳಲ್ಲಿ ಬೇರು ಬಿಟ್ಟಿದ್ದರಿಂದಲೇ ಇದೆಲ್ಲ ಸಾಧ್ಯವಾಯಿತು.

ಕರಿಯರು ನೇಟಿವ್ ಲ್ಯಾಂಡ್ ಕಾಯ್ದೆಯಿಂದಾಗಿ ಕಳಕೊಂಡ ಭೂಮಿ ಯನ್ನು ಎಲ್ಲ ಜನಾಂಗಗಳ ಜನಸಂಖ್ಯೆಯ ಆಧಾರದ ಮೇಲೆ ಪುನರ್ವಿಂಗಡನೆ ಆಗಬೇಕು. ಕರಿಯರನ್ನು ಹತ್ತಿಕ್ಕುವ ಕಾಯ್ದೆಗಳು ಹೋಗಬೇಕು. ಕರಿ ಯರಿಗೆ ಮತ ಚಲಾಯಿಸುವ ಹಕ್ಕು ಬರಬೇಕು. ಮಕ್ಕಳಿಗೆ ಯೋಗ್ಯ ಶಿಕ್ಷಣ ದೊರೆಯುವಂತಾಗಬೇಕು. ಒಟ್ಟಾರೆ ವರ್ಣಭೇದ ನೀತಿ ಅಳಿಯಬೇಕು ಎನ್ನುವುದೇ ಅವರ ಗುರಿಯಾಗಿತ್ತು. ಐರೋಪ್ಯ ಮತ್ತು ಇತರ ದೇಶಗಳ ಸಂಸ್ಕೃತಿಗಳ ಶ್ರೇಷ್ಠ ಅಂಶಗಳು ಆಫ್ರಿಕಾ ಸಂಸ್ಕೃತಿಯನ್ನು ಸೇರಬೇಕು. ಮಾನವನ ಏಳ್ಗೆ ಮತ್ತು ಘನತೆ ಹೆಚ್ಚಿಸುವುದಕ್ಕಾಗಿ ಆಫ್ರಿಕಾ ತನ್ನ ಕಾಣಿಕೆ ಸಲ್ಲಿಸುವಂಥ 'ವಾತಾವರಣದ ನಿರ್ಮಾಣವಾಗಬೇಕು ಎಂಬುದೇ ಯೂತ್ ಲೀಗ್‌ನ ಗೆಳೆಯರೆಲ್ಲರ ಆಶಯವಾಗಿತ್ತು.

ಅಧ್ಯಕ್ಷ ಡಾ॥ ಕ್ಷುಮಾ ಅವರ ಮೇಲ್ವಿಚಾರಣೆಯಲ್ಲಿ ಡಿಸೆಂಬರ್ 1943ರಲ್ಲಿ ಎ.ಎನ್.ಸಿ. ಹೊಸ ಸಂವಿಧಾನ ಹೊಂದಿತು. ಹೊಸ ಸಂವಿಧಾನದ ಪ್ರಕಾರ ಬೇರೆ ಜನಾಂಗದವರು ಕೂಡ ಎ.ಎನ್.ಸಿ. ಸದಸ್ಯರಾಗಬಹುದು.

ಪಾಸ್ ಕಾಯ್ದೆ ವಿರುದ್ಧ ಹೋರಾಡುವುದಕ್ಕಾಗಿ ಎ.ಎನ್.ಸಿ. ಅಧ್ಯಕ್ಷ ಡಾ॥ ಕ್ಷುಮಾ ಅವರು ಕಮ್ಯೂನಿಸ್ಟ್ ಪಾರ್ಟಿಯ ಅಧ್ಯಕ್ಷ ಡಾ॥ ಯೂಸೂಫ್ ದಾದೂ ಮತ್ತು ಇಂಡಿಯನ್ ಕಾಂಗ್ರೆಸ್‌ನ ಅಧ್ಯಕ್ಷ ಡಾ॥ ಮೋಂಟಿ ನಾಯ್ಕರ್ ಜತೆ ಸಂಯುಕ್ತ ರಂಗ ಸ್ಥಾಪಿಸಿದರು. ಅದು 'ಡಾಕ್ಟರ್ಸ್ ಪ್ಯಾಕ್ಟ್' ಎಂದು ಪ್ರಸಿದ್ಧವಾಗಿದೆ.

ವಿವಿಧ ಸಂಘಟನೆಗಳ ಸಹಕಾರದೊಂದಿಗೆ ಎ.ಎನ್.ಸಿ. ಮೇ 1945

ರಂದು ಬಿಳಿಯ ಸರ್ಕಾರದ ದೌರ್ಜನ್ಯಗಳನ್ನು ವಿರೋಧಿಸಿ ಬೃಹತ್ ಮೆರವಣಿಗೆ ಹೊರಡಿಸಿತು. ಆ ಮೆರವಣಿಗೆಯಲ್ಲಿ 20 ಸಾವಿರಕ್ಕೂ ಹೆಚ್ಚು ಕರಿಯರಿದ್ದರು. ಜೊಹಾನ್ಸ್‌ಬರ್ಗ್‌ನಲ್ಲಿ ಇಂಥ ಮೆರವಣಿಗೆ ಹಿಂದೆಂದೂ ನಡೆದಿರಲಿಲ್ಲ. ಕಾರ್ಮಿಕ ವರ್ಗದಲ್ಲಿನ ಏಕತೆಯೆ ಇದರ ಮೂಲಶಕ್ತಿಯಾಗಿತ್ತು.

1946ರ ಘೆಟೊ ಮಸೂದೆ ಭಾರತೀಯರನ್ನು ಕೂಡ ಕೆಲಪ್ರದೇಶಗಳಿಗೆ ಮಾತ್ರ ಸೀಮಿತಗೊಳಿಸುವ ಉದ್ದೇಶ ಹೊಂದಿತ್ತು. ಡರ್ಬಾನ್‌ನಲ್ಲಿನ ಭಾರತೀಯರು ಇದಕ್ಕೆ ತೀವ್ರ ವಿರೋಧ ವ್ಯಕ್ತಪಡಿಸಿದರು. ಜೊಹಾನ್ಸ್‌ಬರ್ಗ್‌ನಲ್ಲಿ ಇದರ ವಿರುದ್ಧ ಸಂಘಟನಾತ್ಮಕ ಕೆಲಸಗಳು ನಡೆದವು. ಕಾನೂನು ಶಿಕ್ಷಣದಲ್ಲಿ ನೆಲ್ಸನ್ ಮಂಡೇಲಾ ಅವರ ಸಹಪಾಠಿಗಳಾಗಿದ್ದ ಇಸ್ಮಾಯಿಲ್ ಮೀರ್ ಮತ್ತು ಜೆ. ಎನ್. ಸಿಂಗ್ ಅವರು ಘೆಟೊ ಮಸೂದೆ ವಿರುದ್ಧ ಭಾರತೀಯರು ನಡೆಸಿದ ಹೋರಾಟದಲ್ಲಿ ಮಹತ್ವದ ಪಾತ್ರವಹಿಸಿದರು. ಟ್ರಾನ್ಸ್‌ವಾಲ್ ಮತ್ತು ನತಾಲ್‌ನಲ್ಲಿನ ಇಂಡಿಯನ್ ಕಾಂಗ್ರೆಸ್ ಘಟಕಗಳು ಪ್ರಾರಂಭಿಸಿದ ಸತ್ಯಾಗ್ರಹದ ಮುಂಚೂಣಿಯಲ್ಲಿದ್ದರು.

ನೆಲ್ಸನ್ ಮಂಡೇಲಾ ಆವರು ಕೆಲಕಾಲ ಇಸ್ಮಾಯಿಲ್ ಮೀರ್ ಆವರ ಫ್ಲ್ಯಾಟ್‌ನಲ್ಲಿ ವಾಸವಾಗಿದ್ದರು. ಭಾರತೀಯರ ಬಗ್ಗೆ ಮತ್ತು ದಕ್ಷಿಣ ಆಫ್ರಿಕಾದಲ್ಲಿನ ಅವರ ಹೋರಾಟಗಳ ಬಗ್ಗೆ ಮೀರ್ ಆವರಿಂದ ತಿಳಿದುಕೊಳ್ಳಲು ನೆಲ್ಸನ್ ಉತ್ಸುಕರಾಗಿದ್ದರು.

ಭಾರತೀಯರು

ನತಾಲ್ ಪ್ರದೇಶದ ಬಿಳಿಯ ಶ್ರೀಮಂತ ಕಬ್ಬು ಬೆಳೆಗಾರರು ಕರಿಯ ಜುಲು ಕೂಲಿಗಳಿಂದ ಬೇಸತ್ತು ಅಂದಿನ ಬ್ರಿಟಿಷ್ ಸರ್ಕಾರದೊಂದಿಗೆ ವ್ಯವಹರಿಸಿ ಭಾರತದಿಂದ 1860ರಲ್ಲಿ ಕೂಲಿಗಳನ್ನು ತರಿಸಲು ನಿರ್ಧರಿಸಿದರು. ಭಾರತೀಯ ಕೂಲಿಗಳ ಆಹಾರ ಪೂರೈಕೆ ಬಿಳಿಯ ವ್ಯಾಪಾರಿಗಳಿಂದ ಆಗಲಿಲ್ಲ. ಆದ್ದರಿಂದ ಭಾರತೀಯ ವ್ಯಾಪಾರಿಗಳನ್ನೂ ನತಾಲ್‌ಗೆ ಆಹ್ವಾನಿಸಲಾಯಿತು. ಹೀಗಾಗಿ ಭಾರತದ ಎರಡೂ ವರ್ಗಗಳ ಜನ ದಕ್ಷಿಣ ಆಫ್ರಿಕಾ ಸೇರಿದರು.

ಮಹಾತ್ಮಾಗಾಂಧಿ ಅವರು ಮೇ 1893ರಲ್ಲಿ ತರುಣ ವಕೀಲರಾಗಿ ದಕ್ಷಿಣ ಆಫ್ರಿಕಾಗೆ ಬಂದರು. ಅಲ್ಲಿನ ಜನಾಂಗೀಯ ತಾರತಮ್ಯದ ವಿರುದ್ಧ ಹೋರಾಟ ಪ್ರಾರಂಭಿಸಿದರು. 1894ನೇ ಮೇ 22ರಂದು ನತಾಲ್ ಇಂಡಿಯನ್ ಕಾಂಗ್ರೆಸ್ ಸ್ಥಾಪಿಸಿದರು. ದಕ್ಷಿಣ ಆಫ್ರಿಕಾದಲ್ಲಿ ಬಿಳಿಯರಲ್ಲದವರ ಮೊದಲ ರಾಜಕೀಯ ಸಂಘಟನೆ ಇದಾಗಿದೆ. ಮುಂದೆ 18 ವರ್ಷಗಳ ನಂತರ ಅಸ್ತಿತ್ವಕ್ಕೆ ಬಂದ ಕರಿಯರ ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ ಮೇಲೆ ಇದರ ಪ್ರಭಾವ ಸಾಕಷ್ಟಾಗಿದೆ.

ಗಾಂಧೀಜಿ ಅವರು 1903ರಲ್ಲಿ ನತಾಲ್ ಪ್ರಾಂತದ ಇನಾಂಡಾ ಜಿಲ್ಲೆಯ ಡರ್ಬಾನ್‌ನಿಂದ 15 ಮೈಲಿ ದೂರದಲ್ಲಿರುವ ನ್ಯೂ ಫಾರ್ಮ್ ಎಂಬ ಕರಿಯರ ಉಪನಗರದಲ್ಲಿ ನೂರು ಎಕರೆ ಪ್ರದೇಶದಲ್ಲಿ ಫೀನಿಕ್ಸ್ ಆಶ್ರಮ ಸ್ಥಾಪಿಸಿದರು. ಅದು ಅವರು ಸ್ಥಾಪಿಸಿದ ಮೊದಲ ಆಶ್ರಮ ಇದಾಗಿದೆ. ಆ ವರ್ಷ ಗಾಂಧೀಜಿ ಅವರು ಪ್ರಕಟಿಸಲು ಪ್ರಾರಂಭಿಸಿದ 'ಇಂಡಿಯನ್ ಒಪಿನಿಯನ್' ಪತ್ರಿಕೆಯನ್ನು 1964ರವರೆಗೂ ನಡೆಸಿಕೊಂಡು ಬರಲಾಯಿತು.

ನತಾಲ್ ಇಂಡಿಯನ್ ಕಾಂಗ್ರೆಸ್ ಮುಂದೆ ಸೌತ್ ಆಫ್ರಿಕನ್ ಇಂಡಿಯನ್

ನ್ಯಾಷನಲ್ ಕಾಂಗ್ರೆಸ್ ಆಗಿ ಬೆಳೆದು ಇಂದಿಗೂ ವರ್ಣಭೇದ ನೀತಿ ವಿರುದ್ಧದ ಹೋರಾಟದಲ್ಲಿ ಪ್ರಮುಖ ಪಾತ್ರ ವಹಿಸಿದೆ.

ಗಾಂಧೀಜಿ ಅವರು ಬಿಳಿಯ ಸರ್ಕಾರದ ಅನ್ಯಾಯದ ವಿರುದ್ಧ 1907 ರಲ್ಲಿ ಮೊದಲ ಬಾರಿಗೆ ಸತ್ಯಾಗ್ರಹದ ಪ್ರಯೋಗ ಮಾಡಿದ್ದು ಈ ನಾಡಿನಲ್ಲೇ.

ಮಂಡೇಲಾ ಅವರಿಗೆ ಭಾರತೀಯರ ಬಗ್ಗೆ ಗೌರವವಿತ್ತು. ಆದರೆ ಭಾರತೀಯರಾದ ಯುಸೂಫ್ ದಾದೂ ಕಮ್ಯುನಿಸ್ಟ್ ನಾಯಕರಾಗಿದ್ದರು. ಇಸ್ಮಾಯಿಲ್ ಮೀರ್ ಹಾಗೂ ಜೆ. ಎನ್. ಸಿಂಗ್ ಕಮ್ಯೂನಿಜಂನಲ್ಲಿ ನಂಬಿಕೆ ಇಟ್ಟಿದ್ದರು. ಆದರೆ ಕಮ್ಯೂನಿಸ್ಟರು ಕ್ರಿಸ್ತನ ವಿರೋಧಿಗಳು ಎಂಬ ತಪ್ಪು ಕಲ್ಪನೆಯಿಂದಾಗಿ ಮಂಡೇಲಾ ಅವರಿಗೆ ಕಮ್ಯೂನಿಸ್ಟರ ಬಗ್ಗೆ ಅಷ್ಟೊಂದು ಆಸಕ್ತಿ ಇರಲಿಲ್ಲ. ಅದೇ ರೀತಿ ಬಿಳಿಯರ ಬಗ್ಗೆ ಕೂಡ ಯಾವುದೇ ರೀತಿಯ ನಂಬಿಕೆ ಇರಲಿಲ್ಲ. ಆಫ್ರಿಕಾನರ್ ಬಿಳಿಯ ವಕೀಲ ಬ್ರಾಮ್ ಫಿಷರ್ ಕಮ್ಯೂನಿಸ್ಟ್ ಆಗಿದ್ದರು. ಎರಡು ಐತಿಹಾಸಿಕ ವಿಚಾರಣೆಗಳಲ್ಲಿ ಮಂಡೇಲಾ ಮತ್ತು ಅವರ ಗೆಳೆಯರ ಪರ ವಾದಿಸಿದರು. ಕಮ್ಯೂನಿಸ್ಟರು, ದೇಶ. ಭಾಷೆ ಮತ್ತು ಲಿಂಗ ಭೇದವನ್ನು ಮರೆತು ಮನುಷ್ಯರ ಬಗ್ಗೆ ಚಿಂತಿಸುತ್ತಾರೆ ಹಾಗೂ ವರ್ಣ-ವರ್ಗಗಳ ತಿಕ್ಕಾಟವಿಲ್ಲದ ಸಮಾಜವನ್ನು ಬಯಸುತ್ತಾರೆ ಎಂಬುದನ್ನು ಮಂಡೇಲಾ ಅವರು ಬೇಗನೆ ಅರ್ಥೈಸಿಕೊಂಡರು.

ಆದರೆ ಸದ್ಯದ ಪರಿಸ್ಥಿತಿಯಲ್ಲಿ ಕಮ್ಯೂನಿಸ್ಟರ ಜತೆ ಸೇರಿ ಹೋರಾಟ ಮಾಡಲು ಯೂತ್‌ಲೀಗ್‌ನ ಯಾವ ಯುವ ನಾಯಕನೂ ಸಿದ್ಧನಿರಲಿಲ್ಲ. ಕಮ್ಯೂನಿಜಂನಲ್ಲಿ ನಂಬಿಕೆ ಇರುವ ಎ.ಎನ್.ಸಿ ಸದಸ್ಯರು ಪಕ್ಷಕ್ಕೆ ರಾಜೀನಾಮೆ ಕೊಡಬೇಕೆಂದು ಮಂಡೇಲಾ, ಸಿಸುಲು, ಟಾಂಬೊ ಮತ್ತು ಲೆಂಬೆಡೆ ವಾದಿಸಿದರು. ಎ. ಎನ್. ಸಿ.ಯ ವಾರ್ಷಿಕ ಸಮ್ಮೇಳನದಲ್ಲಿ ಈ ಕುರಿತು ನಿರ್ಣಯವನ್ನೂ ಇಟ್ಟರು. ಆದರೆ ಎ. ಎನ್. ಸಿ.ಯ ಸೌಮ್ಯ ನಾಯಕರು ಯೂತ್ ಲೀಗ್‌ನ ಈ ನಿರ್ಣಯವನ್ನು ವಿರೋಧಿಸಿದರು. ಆಗ ಜೆ.ಬಿ. ಮಾರ್ಕ್ಸ್, ಮೊಸೆಸ್ ಕೊಟಾನೆ ಮತ್ತು ಗೌರ ರಡೆಬೆಯಂಥ ಖ್ಯಾತ ಕರಿಯ ಕಮ್ಯೂನಿಸ್ಟ್ ನಾಯಕರು ಎ. ಎನ್. ಸಿ. ಯಲ್ಲಿ ಇದ್ದರು. 1947ರಲ್ಲಿ ಲೆಂಬೆಡೆ ನಿಧನ

ರಾದರು. ಮದಾ ಅವರು ಯೂತ್‌ಲೀಗ್‌ನ ಅಧ್ಯಕ್ಷರಾದರು. ಟಾಂಬೊ ಉಪಾಧ್ಯಕ್ಷರಾದರು. ಮಂಡೇಲಾ ಕಾರ್ಯದರ್ಶಿ ಆಗಿ ಆಯ್ಕೆ ಆದರು.

ಜನವರಿ 1949ರಲ್ಲಿ ಡರ್ಬನ್ ಪ್ರದೇಶದಲ್ಲಿ ಜುಲು ಯುವಕ ಮತ್ತು ಭಾರತೀಯನೊಬ್ಬನ ಮಧ್ಯೆ ಹೊಡೆದಾಟವಾಯಿತು. 'ಸುಲಿಗೆ ಕೋರ' ಭಾರತೀಯ ವ್ಯಾಪಾರಿಗಳನ್ನು ಮೊದಲಿನಿಂದಲೂ ವಿರೋಧಿಸುತ್ತಿದ್ದ ಜುಲು ಜನರು ಭಾರತೀಯರ ವಿರುದ್ಧ ತಿರುಗಿ ಬಿದ್ದರು. ಬೆಂಕಿ, ಲೂಟಿ, ಸಾವು-ನೋವು ಸಂಭವಿಸಿದವು. ಆ ಸಂದರ್ಭದಲ್ಲಿ 147 ಮಂದಿ ಸತ್ತರು. ಸತ್ತವರಲ್ಲಿ 53 ಮಂದಿ ಭಾರತೀಯ ಮತ್ತು ಒಬ್ಬ ಬಿಳಿಯ ಇದ್ದರು. ಬಹಳಷ್ಟು ಮಂದಿ ಪೊಲೀಸರ ಹೊಡೆತಕ್ಕೆ ಬಲಿಯಾಗಿದ್ದರು. ಈ ಜನಾಂಗೀಯ ಗಲಭೆಯನ್ನು ನಿಯಂತ್ರಿಸುವಲ್ಲಿ ಭಾರತೀಯರಾದ ಡಾ॥ ಮೋಂಟಿ ನಾಯ್ಕರ್, ಇಸ್ಮಾಯಿಲ್ ಮೀರ್ ಮತ್ತು ಜೆ. ಎನ್. ಸಿಂಗ್ ಅವರು ಯಶಸ್ವಿ ಆದರು. ಈ ಕಾರ್ಯದಲ್ಲಿ ಎ. ಎನ್. ಸಿ. ನಾಯಕರು ಅವರಿಗೆ ನೆರವಾದರು.

ಆ ಸಮಯದಲ್ಲಿಯೂ ಎ. ಎನ್. ಸಿ. ಅಧ್ಯಕ್ಷರಾಗಿದ್ದ ಡಾ॥ ಕ್ಷುಮಾ, ಕಮ್ಯೂನಿಸ್ಟ್ ಪಕ್ಷದ ಡಾ॥ ಯುಸೂಫ್ ದಾದೂ ಮತ್ತು ಇಂಡಿಯನ್ ಕಾಂಗ್ರೆಸ್‌ನ ಡಾ॥ ಮೋಂಟಿ ನಾಯ್ಕರ್ ಅವರು ಬಿಳಿಯರ ದೌರ್ಜನ್ಯದ ವಿರುದ್ಧ ಜಂಟಿಯಾಗಿ ಹೋರಾಡಲು ನಿರ್ಧರಿಸಿದರು. ಆ ನಿರ್ಧಾರ 'ಡಾಕ್ಟರ್ಸ್ ಪ್ಯಾಕ್ಟ್' ಎಂದು ಪ್ರಸಿದ್ಧವಾಗಿದೆ.

ಆಫ್ರಿಕನ್ ಮತ್ತು ಭಾರತೀಯ ನಾಯಕರು ಒಂದಾಗುತ್ತಲಿದ್ದ ಆ ಸಂದರ್ಭ ಮರೆಯಲಾಗದ ಅನುಭವ ಎಂದು ಮಂಡೇಲಾ ಸ್ಮರಿಸುತ್ತಾರೆ. ಆದರೆ ಆ ಸಂದರ್ಭದಲ್ಲಿ ಅವರು 'ಕಪ್ಪು ಪ್ರಜ್ಞೆ'ಯ ಪ್ರತಿಪಾದಕರಾಗಿದ್ದರಿಂದ 'ಡಾಕ್ಟರ್ಸ್ ಪ್ಯಾಕ್ಟ್' ಅನ್ನು ವಿರೋಧಿಸಿದರು. ಈ ತೆರನಾದ ಸಹಕಾರದಿಂದ ತಮ್ಮ ಹೋರಾಟ ಪ್ರಾಮುಖ್ಯ ಕಳೆದುಕೊಳ್ಳುವುದು ಎಂದು ಯೂತ್‌ಲೀಗ್‌ನ ಗೆಳೆಯರು ಭಾವಿಸಿದ್ದರು. ಹೀಗಾಗಿ ಕಮ್ಯೂನಿಸ್ಟರು ಮತ್ತು ಉದಾರವಾದಿ ಬಿಳಿಯರನ್ನು ಸಂಶಯ ದೃಷ್ಟಿಯಿಂದ ನೋಡುತ್ತಿದ್ದರು.

ಎ. ಎನ್. ಸಿ. ಯಲ್ಲಿ ಯೂತ್‌ಲೀಗ್‌ನ ಪ್ರಭಾವ ಬೆಳೆಯತೊಡಗಿತು. ಯುವಕರ ಬೆಂಬಲದಿಂದ ಡಾ॥ ಜೇಮ್ಸ್ ಮೊರೋಕಾ ಎ. ಎನ್. ಸಿ. ಅಧ್ಯಕ್ಷ

ರಾದರು. ವಾಲ್ಟೇರ್ ಸಿಸುಲು ಮಹಾ ಕಾರ್ಯದರ್ಶಿಯಾಗಿ ಆಯ್ಕೆ ಆದರು. ಮಂಡೇಲಾ ಮತ್ತು ಇತರರು ರಾಷ್ಟ್ರೀಯ ಕಾರ್ಯಕಾರಿ ಸಮಿತಿ ಸದಸ್ಯರಾದರು.

1950ರ ಮೇ ದಿನದಂದು ಯೂತ್‌ಲೀಗ್ 'ರಾಷ್ಟ್ರೀಯ ಕಾರ್ಯ ಸ್ಥಗಿತ' ಮುಷ್ಕರಕ್ಕೆ ಕರೆ ನೀಡಲು ನಿರ್ಧರಿಸಿತ್ತು. ಆದರೆ ಕಮ್ಯೂನಿಸ್ಟ್ ನಾಯಕರಾದ ಮೋಸೆಸ್ ಕೊಟಾನೆ, ಜೆ. ಬಿ. ಮಾರ್ಕ್ಸ್ ಮತ್ತು ದಾದೂ ಅವರ ಮೇಲೆ ಸರ್ಕಾರ ನಿಷೇದಾಜ್ಞೆ ಹೇರಿದ್ದನ್ನು ವಿರೋಧಿಸುವುದಕ್ಕಾಗಿ ಕಮ್ಯೂನಿಸ್ಟ ಪಕ್ಷ, ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಮತ್ತು ಟ್ರಾನ್ಸ್‌ವಾಲ್ ಎ. ಎನ್. ಸಿ. ಸೇರಿ ಕೆಲಸ ಸ್ಥಗಿತಗೊಳಿಸಲು ಜೊಹಾನ್ಸ್‌ಬರ್ಗ್ ಪ್ರದೇಶದ ಕಾರ್ಮಿಕರಿಗೆ ಕರೆ ನೀಡಿದವು.

ಕುಪಿತಗೊಂಡ ಮಂಡೇಲಾ ಮತ್ತು ಇತರ ಯುವಕರು ಸಂಘಟಕರ ಜೊತೆ ಘರ್ಷಣೆಗೆ ಇಳಿದರು. ಸಭೆ ನಡೆಯದಂತೆ ನೋಡಿಕೊಂಡರು. ಕಮ್ಯೂನಿಸ್ಟ್ ಪಕ್ಷವನ್ನೂ ಟೀಕಿಸಿದರು. ಮುಷ್ಕರದ ಕರೆಯನ್ನು ವಿರೋಧಿಸಿದರು.

ಸರ್ಕಾರ ಪ್ರದರ್ಶನದ ಮೇಲೆ ನಿಷೇಧ ಹೇರಿತು. ಮೇ ದಿನಾಚರಣೆ ವೇಳೆ ಜೊಹಾನ್ಸ್‌ಬರ್ಗ್ ಪ್ರದೇಶದಲ್ಲಿ ಎರಡು ಸಾವಿರ ಪೊಲೀಸರು ಸಭೆ, ಸಮಾರಂಭಗಳ ಮೇಲೆ ಹಲ್ಲೆ ಮಾಡಿದರು. ಪೊಲೀಸ್ ಗೋಲೀಬಾರ್‌ನಿಂದಾಗಿ ಘರ್ಷಣೆಗಳು ಸಂಭವಿಸಿದವು. ಇಷ್ಟೆಲ್ಲ ವೈರುಧ್ಯಗಳ ಮಧ್ಯೆ ಮುಷ್ಕರ ಗಮನಾರ್ಹವಾಗಿ ಯಶಸ್ವಿಯಾಯಿತು. ಅರ್ಧಕ್ಕಿಂತ ಹೆಚ್ಚು ಪಾಲು ಕಾರ್ಮಿಕರು ಮನೆಯಲ್ಲಿ ಉಳಿದರು.

ಘರ್ಷಣೆಗಳನ್ನು ತಪ್ಪಿಸಿ ಜನರನ್ನು ಸಮಾಧಾನಗೊಳಿಸುವುದಕ್ಕಾಗಿ ಮಂಡೇಲಾ ಮತ್ತು ಸಿಸುಲು ಅಲ್ಯಾಂಪೋಗೆ ಧಾವಿಸಿದರು. ಈ ಘರ್ಷಣೆಗಳಲ್ಲಿ 18 ಮಂದಿ ಕರಿಯರು ಸತ್ತು ಮೂವರು ಮಕ್ಕಳು ಸೇರಿದಂತೆ 30ಕ್ಕೂ ಹೆಚ್ಚು ಮಂದಿ ಗಾಯಗೊಂಡರು.

ಈ ಘಟನೆಯಿಂದಾಗಿ ಯೂತ್‌ಲೀಗ್‌ನ ಕಪ್ಪು ಪ್ರಜ್ಞೆಯ ಯುವಕರಿಗೆ ಹೊಸ ದೃಷ್ಟಿಕೋನ ಬಂದಿತು.

"That day was a turning point in my life both in understanding through first hand experience the ruthlessness of the police, and in being deeply impressed by the support African workers had given to the May Day call" ಎಂದು ಮಂಡೇಲಾ ಹೇಳಿದ್ದಾರೆ.

ಕರಿಯ ಕಾರ್ಮಿಕರ ಪ್ರಜ್ಞೆ 'ಕಪ್ಪು ಪ್ರಜ್ಞೆ'ಗಿಂತ ಮೇಲ್ಮಟ್ಟದ್ದಾಗಿತ್ತು. ಕರಿಯ ಕಾರ್ಮಿಕರು ಕಪ್ಪು ಪ್ರಜ್ಞೆಯ ನಾಯಕರಿಗಿಂತ ಹೆಚ್ಚು ಸೂಕ್ಷ್ಮವಾಗಿ ಸಮಾಜವನ್ನು ಅರಿತುಕೊಂಡಿದ್ದಾರೆ ಎಂಬುದು ಮಂಡೇಲಾ ಮೊದಲಾದವರಿಗೆ ಮನದಟ್ಟಾಯಿತು.

ಯುವ ಭಾರತೀಯರಾದ ವಿದ್ಯಾರ್ಥಿ ಅಹ್ಮದ್ ಕಥ್ರದಾ ಮತ್ತು ಕಾರ್ಮಿಕ ಪೌಲ್ ಜೋಸೆಫ್ ಅವರು ಆ ಮುಷ್ಕರದ ಮುನ್ನಾ ದಿನಗಳಲ್ಲಿ ಬೆಳಿಗ್ಗೆ ಮತ್ತು ಸಂಜೆ ವೇಳೆಗೆ ಕಾರ್ಮಿಕರ ಬಳಿಗೆ ಹೋಗಿ ಹೋರಾಟದ ಮಹತ್ವ ಕುರಿತು ವಿವರಿಸುತ್ತಿದ್ದರು, ಕರಪತ್ರಗಳನ್ನು ಹಂಚುತ್ತಿದ್ದರು. ಅವರ ಈ ರೀತಿ ಮಂಡೇಲಾ ಮತ್ತು ಸಿಸುಲು ಅವರಿಗೆ ತುಂಬ ಹಿಡಿಸಿತು. ಅಂದಿನಿಂದ ಅವರೆಲ್ಲ ಆತ್ಮೀಯ ಗೆಳೆಯರಾದರು.

1950ರ ಮೇ ಮುಷ್ಕರದ ಅನುಭವ ಮಂಡೇಲಾ ಅವರಲ್ಲಿ ಸೈದ್ಧಾಂತಿಕ ಸ್ಪಷ್ಟತೆಯನ್ನು ಸೃಷ್ಟಿಸಿತು. ಅಂದಿನಿಂದ ಹಾಯಾಗಿ ಉಸಿರಾಡಲೂ ಬಿಡುವಿಲ್ಲದಂತೆ ಕಾರ್ಯಮಗ್ನರಾದರು. ತುಳಿತಕ್ಕೊಳಗಾದ ಜನರು ಹೋರಾಟದ ಮುಂಚೂಣಿಯಲ್ಲಿರುವಂಥ ವಾತಾವರಣ ಸೃಷ್ಟಿಸಿದರು. ದಕ್ಷಿಣ ಆಫ್ರಿಕಾದಲ್ಲಿನ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಮತ್ತು ಕಮ್ಯೂನಿಸ್ಟ್ ಪಾರ್ಟಿಯಲ್ಲಿ ಇದ್ದ ಭಾರತೀಯರಿಂದ ಮಂಡೇಲಾ ಬಹಳಷ್ಟು ಕಲಿತರು. ಬಲಿಷ್ಠ ಸರ್ಕಾರ ಎದುರಿಸಲು ಗಾಂಧೀಜಿ ಅವರ 'ಸತ್ಯಾಗ್ರಹ' ಬಹು ದೊಡ್ಡ ಅಸ್ತ್ರ ಎಂಬುದನ್ನು ಅರಿತರು.

ಎ.ಎನ್.ಸಿ. ಯೂತ್‌ಲೀಗ್, ಇಂಡಿಯನ್ ಕಾಂಗ್ರೆಸ್, ಕಮ್ಯೂನಿಸ್ಟ್ ಪಾರ್ಟಿ ಸೇರಿ ಸಮನ್ವಯ ಸಮಿತಿ ರಚಿಸಿ 1950ನೇ ಜೂನ್ 26 ರಂದು ರಾಷ್ಟ್ರೀಯ ಪ್ರತಿಭಟನಾ ಪ್ರದರ್ಶನ ಏರ್ಪಡಿಸಲು ಯೋಜಿಸಿದವು. ಕೆಲಸ

ಸ್ಥಗಿತಗೊಳಿಸುವುದಕ್ಕೆ ಸಂಬಂಧಿಸಿದಂತೆ ಇದು ಎ.ಎನ್.ಸಿ.ಯ ರಾಷ್ಟ್ರಮಟ್ಟದ ಮೊದಲ ಕರೆ ಆಗಿತ್ತು. ಈ ಕರೆಗೆ ಓಗೊಟ್ಟ ಜನ ಪ್ರತಿಭಟನೆಯನ್ನು ಯಶಸ್ವಿಗೊಳಿಸಿದರು. 1950 ರ ಕೊನೆಯಲ್ಲಿ ಮಂಡೇಲಾ ಯೂತ್‌ಲೀಗ್‌ನ ರಾಷ್ಟ್ರೀಯ ಅಧ್ಯಕ್ಷ ಆದರು. ಇದೇ ವೇಳೆಗೆ ಕಮ್ಯೂನಿಜಂ ದಮನ ಕಾಯ್ದೆ ಜಾರಿಗೆ ಬಂದಿತು. ಕಮ್ಯೂನಿಸ್ಟ್ ಚಟುವಟಿಕೆಯಲ್ಲಿ ಭಾಗವಹಿಸುವವರಿಗೆ 10 ವರ್ಷಗಳವರೆಗೆ ಶಿಕ್ಷೆ ಕಾಯ್ದಿತ್ತು.

ಮಂಡೇಲಾ ಮತ್ತು ಗೆಳೆಯರಿಗೆ ವರ್ಗದ ಕಲ್ಪನೆ ಮೂಡಿ ಎಲ್ಲರ ಜತೆ ಸೇರಿ ಕರಿಯರು ಹೋರಾಡುವುದು ಅವಶ್ಯ ಎಂಬ ನಿರ್ಧಾರಕ್ಕೆ ಬಂದ ಸಂದರ್ಭದಲ್ಲಿ ಕಮ್ಯೂನಿಸ್ಟರಲ್ಲಿಯೂ ಬದಲಾವಣೆ ಕಂಡುಬಂದಿತು. ವ್ಯವಸ್ಥೆಯಲ್ಲಿ ಬೇರು ಬಿಟ್ಟಿರುವ ಜನಾಂಗೀಯ ದಬ್ಬಾಳಿಕೆಯಿಂದಾಗಿ ಅನೇಕ ಸಮಸ್ಯೆಗಳನ್ನು ಎದುರಿಸುತ್ತಿರುವ ಕರಿಯರ ಹೋರಾಟಗಳಿಗೆ ಮೀನ–ಮೇಷ ಎಣಿಸದೆ ಬೆಂಬಲ ಕೊಡುವುದು ಸೂಕ್ತ ಎಂಬ ಭಾವನೆ ಅವರಲ್ಲಿ ಮೂಡಿತು. ವರ್ಣಭೇದ ವಿರುದ್ಧದ ಹೋರಾಟ ಅಂತ್ಯದಲ್ಲಿ ಬಂಡವಾಳಶಾಹಿ ವಿರುದ್ಧದ ಹೋರಾಟವೇ ಆಗಿರುತ್ತದೆ ಎಂಬ ನಿಲುವಿಗೆ ಅವರು ಬಂದರು.

ಹೊಸ ತಿರುವು

ಗಾಂಧೀಜಿಯವರು 'ಸತ್ಯಾಗ್ರಹ' ರೂಪದಲ್ಲಿ ಬಿತ್ತಿದ ಆತ್ಮಸ್ಥೈರ್ಯದ ಬೀಜ ಮಂಡೇಲಾ ಮನದಲ್ಲಿ ಮೊಳಕೆಯೊಡೆಯಿತು. ಶಸ್ತ್ರಸಜ್ಜಿತವಾದ ಹಿಂಸಾತ್ಮಕ ಸರ್ಕಾರವನ್ನು ಎದುರಿಸಲು ಅಹಿಂಸಾತ್ಮಕ ಸತ್ಯಾಗ್ರಹವೊಂದೇ ಯೋಗ್ಯ ಮಾರ್ಗ ಎಂದು ಅನಿಸಿತು. ಈ ಕುರಿತು ಸಿಸುಲು, ಮಂಡೇಲಾ ಮತ್ತು ಯೂತ್‌ಲೀಗ್‌ನ ಗೆಳೆಯರು ದೀರ್ಘವಾಗಿ ಚರ್ಚಿಸಿದರು. ಸತ್ಯಾಗ್ರಹದ ಮಾರ್ಗ ಜನತೆಗೆ ಹಿಡಿಸುವುದೇ ಎಂಬ ಗುಮಾನಿ ಬಂದಿತು. ಏಕೆಂದರೆ ಆ ಮಾರ್ಗದಿಂದ ಇಲ್ಲಿಯವರೆಗೆ ಏನನ್ನೂ ಸಾಧಿಸಲಿಲ್ಲ ಎಂಬ ಸತ್ಯ ಅವರ ಮುಂದಿತ್ತು. ಆದರೆ ಸತ್ಯಾಗ್ರಹದ ಮಾರ್ಗದಿಂದ ಜನರ ಹೋರಾಟಗಳಿಗೆ ಶಿಸ್ತು ಮೂಡುವುದು ಪ್ರತಿಹಿಂಸೆಗಿಂತ ಹಿಂಸೆಯನ್ನು ಎದುರಿಸುವುದು ಹೆಚ್ಚಿನ ಧೈರ್ಯದ ಸಂಕೇತವಾಗುವುದು ಎಂಬ ಭಾವನೆ ಮೂಡಿತು.

ಡಿಸೆಂಬರ್ 1951ರಲ್ಲಿ ಬ್ಲೊಯೆಮ್‌ಫ್ರೊಂಟೀನ್‌ನಲ್ಲಿ ಎ.ಎನ್.ಸಿ.ಯ ವಾರ್ಷಿಕ ಸಮ್ಮೇಳನ ನಡೆಯಿತು. 1952ನೇ ಏಪ್ರಿಲ್ 6 ರಂದು ಬೃಹತ್ ಪ್ರತಿಭಟನಾ ಕಾರ್ಯಕ್ರಮ ಹಮ್ಮಿಕೊಳ್ಳಲು ನಿರ್ಧರಿಸಲಾಯಿತು. ಆ ದಿನ ದಕ್ಷಿಣ ಆಫ್ರಿಕಾದ ಬಿಳಿಯರು ತಮ್ಮ ಆಳ್ವಿಕೆಯ ತ್ರಿಶತಮಾನೋತ್ಸವ ಆಚರಿಸು ವವರಿದ್ದರು. ಎ.ಎನ್.ಸಿ ಅಧ್ಯಕ್ಷ ಡಾ॥ ಮೊರೋಕಾ ಕಾಂಗ್ರೆಸ್ ಸೆಲ್ಯೂಟ್ ಮತ್ತು ಘೋಷಣೆ ಕೊಟ್ಟರು. 'ಮಾಯಿಬುಯೆ' (ಮರಳಿ ಬರಲಿ) ಎಂದಾಗ 'ಆಫ್ರಿಕಾ' ಎಂದು ಜನ ಕೂಗಿದರು. 'ನಕೋಸಿ ಸಿಕೆಲೆಲ್ ಇ ಆಫ್ರಿಕಾ' ಹಾಡಿದರು.

ನೆಲ್ಸನ್ ಮಂಡೇಲಾ ಅವರು 1952ರಲ್ಲಿ ಕಾನೂನುಭಂಗ ಚಳವಳಿಯ ನ್ಯಾಷನಲ್ ವಾಲಂಟೀರ್ ಇನ್ ಚೀಫ್ ಆಗಿ ನೇಮಕಗೊಂಡರು. ಕೇಪ್‌ಟೌನ್ ನತಾಲ್ ಮತ್ತು ಟ್ರಾನ್ಸ್‌ವಾಲ್‌ಗಳಿಗೆ ಭೇಟಿ ನೀಡಿದರು. ಉಪನಗರಗಳಲ್ಲಿನ ಮನೆ ಮನೆಗೆ ಹೋಗಿ ಅಹಿಂಸಾ ಮಾರ್ಗದ ಸತ್ಯಾಗ್ರಹದಿಂದ ಅಮಾನುಷ ಸರ್ಕಾರವನ್ನು ಎದುರಿಸುವ ಬಗ್ಗೆ ತಿಳಿಹೇಳಿದರು.

1952ನೇ ಏಪ್ರಿಲ್ 6 ರಂದು ಬಿಳಿಯರು ತ್ರಿಶತಮಾನೋತ್ಸವ ಆಚರಿ ಸುವ ವೇಳೆ ಈಸ್ಟರ್ನ್ ಕೇಪ್‌ನಲ್ಲಿ ಹತ್ತಾರು ಸಹಸ್ರ ಜನ ಸೇರಿ ಸ್ವಾತಂತ್ರ್ಯದ ಪ್ರಾರ್ಥನೆ ಮಾಡಿದರು. ಜೊಹಾನ್ಸ್‌ಬರ್ಗ್‌ನಲ್ಲಿ ಡಾ॥ ಮೊರೋಕಾ ಬೃಹತ್ ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಕಾನೂನು ಭಂಗ ಚಳವಳಿಗೆ ಕರೆ ನೀಡಿದರು. ಮಂಡೇಲಾ ಅವರು ಉಡುಪುಗಳನ್ನು ತಯಾರಿ ಸುವ ಕಾರ್ಮಿಕರ ಸಂಘದಲ್ಲಿ ಕರಿಯರು, ಭಾರತೀಯರು ಮತ್ತು ಮಿಶ್ರ ವರ್ಣೀಯರನ್ನು ಉದ್ದೇಶಿಸಿ ಮಾತನಾಡಿದರು. ಸರ್ಕಾರ ಎಷ್ಟೇ ಪ್ರಚೋದನೆ ಮಾಡಿದರೂ ವಿಚಲಿತರಾಗದೆ ಶಿಸ್ತು ಕಾಪಾಡಿಕೊಳ್ಳಬೇಕು, ಘನತೆಯಿಂದ ವರ್ತಿಸಬೇಕು ಎಂದರು. ಸ್ವಯಂಸೇವಕರಲ್ಲಿ ಅವರ ಬಗ್ಗೆ ವಿಶೇಷ ಗೌರವ ಮೂಡಿತ್ತು. ಆ ವೇಳೆಗಾಗಲೇ ಅವರು ಕೋಪ ನುಂಗಿಕೊಳ್ಳುವುದನ್ನು ಕಲಿತಿದ್ದರು.

ಬಿಳಿಯರ ಕಣ್ಣಲ್ಲಿ ಕರಿಯರು ಕಾಣುವುದೇ ಇಲ್ಲ. ಆದರೆ ಸದಾ ಕಾರ್ಯ ನಿರತರಾಗಿರುತ್ತಿದ್ದ ಮಂಡೇಲಾ ಕೇಪ್‌ಟೌನ್‌ಗೆ ಹೋದಾಗ ಅವರನ್ನು ಗಮನಿ

ಸಿದ ಒಬ್ಬ ಬಿಳಿಯ ಹೀಗೆ ಹೇಳಿದ್ದಾನೆ. "I noticed people turning and staring at the opposite pavement and I saw this magnificent figure of a man, immaculately dressed. Not just blacks but whites, including white women, were turning to admire him"

1952ರ ಜೂನ್ 26 ರಂದು ರಾಷ್ಟ್ರೀಯ ಮುಷ್ಕರದ ಎರಡನೇ ವಾರ್ಷಿಕೋತ್ಸವ ಆಚರಿಸಲಾಯಿತು. ಆ ವೇಳೆಯಲ್ಲಿ ಅನೇಕ ಕಡೆ ಕಾನೂನು ಭಂಗ ಚಳವಳಿಯನ್ನೂ ಹಮ್ಮಿಕೊಳ್ಳಲಾಗಿತ್ತು. ಆ ದಿನ ರಾತ್ರಿ ಮಂಡೇಲಾ ಜೊಹಾನ್ಸ್‌ಬರ್ಗ್‌ನಲ್ಲಿ ನಡೆದ ಸಭೆಯನ್ನುದ್ದೇಶಿಸಿ ಮಾತನಾಡಿದರು. ಪೊಲೀಸರು ಅವರನ್ನು ಬಂಧಿಸಿದರು. ಅದು ಅವರ ಮೊದಲ ಬಂಧನವಾಗಿತ್ತು. ಈ ವೇಳೆಗಾಗಲೇ ಸಹಸ್ರಾರು ಸ್ವಯಂಸೇವಕರ ಬಂಧನವಾಗಿತ್ತು. ಬಿಡುಗಡೆಯ ನಂತರ ಅವರು ಕಾನೂನು ಭಂಗ ಚಳವಳಿಯ ತೀವ್ರ ಪ್ರಚಾರ ನಡೆಸಿದರು. ಅವರಿಗೆ ಅಧಿಕಾರದ ಆಸೆ ಎಂದೂ ಇದ್ದಿದ್ದಿಲ್ಲ "But he was aborn mass leader who could not help magnetizing people" ಎಂದು ಆಲಿವರ್ ಟಾಂಬೊ ಹೇಳಿದ್ದಾರೆ.

1952ನೇ ಜುಲೈ 30 ರಂದು ಪೊಲೀಸರು ದೇಶಾದ್ಯಂತ ಹೋರಾಟಗಾರರ ಮನೆ ಮತ್ತು ಕಚೇರಿಗಳಮೇಲೆ ದಾಳಿ ಮಾಡಿ ಮೊರೊಕಾ, ಮಂಡೇಲಾ ಸಿಸುಲು, ದಾದೂ ಮತ್ತು ಕಚಾಲಿಯಾ ಅವರನ್ನು 'ಕಮ್ಯೂನಿಸ್ಟ್ ವಿಚಾರಗಳನ್ನು ಹಬ್ಬಿಸುತ್ತಿದ್ದಾರೆ' ಎಂಬ ಆರೋಪದ ಮೇಲೆ ಬಂಧಿಸಲಾಯಿತು.

1952ನೇ ಅಕ್ಟೋಬರ್ 18 ರಂದು ನ್ಯೂಬ್ರೈಟನ್ ರೈಲ್ವೆನಿಲ್ದಾಣದಲ್ಲಿ ಬಿಳಿಯ ಪೊಲೀಸ್ ಇಬ್ಬರು ಕರಿಯರನ್ನು ಗುಂಡಿಕ್ಕಿ ಕೊಂದ. ಅವರು ಬಣ್ಣದ ಡಬ್ಬಿಯೊಂದನ್ನು ಕಳವು ಮಾಡಿದ್ದರು ಎಂದು ಆಪಾದಿಸಲಾಗಿತ್ತು. ಆಗ ಸೇರಿದ ಜನಜಂಗುಳಿಯ ಮೇಲೆ ಆತ 20ಕ್ಕೂ ಹೆಚ್ಚು ಗುಂಡು ಹಾರಿಸಿದ. ಜನ ಪೊಲೀಸ್ ಠಾಣೆಗೆ ಮುತ್ತಿಗೆ ಹಾಕಿದರು. ಆ ಸಂದರ್ಭದಲ್ಲಿ 7 ಮಂದಿ ಕರಿಯರು ಮತ್ತು 4 ಮಂದಿ ಬಿಳಿಯರು ಸತ್ತರು. 27 ಮಂದಿ ಗಾಯಗೊಂಡರು. ಕರಿಯರಿಗೆ ಸಂಬಂಧಿಸಿದಂತೆ ಬಿಳಿಯರ ಆಡಳಿತದ ಒಂದು ಮಾದರಿ ಇದು.

ನವೆಂಬರ್ ಅಂತ್ಯದಲ್ಲಿ ಮೊರೋಕಾ, ಮಂಡೇಲಾ, ಸಿಸುಲು ಮುಂತಾದ ನಾಯಕರ ವಿಚಾರಣೆ ನಡೆಯಿತು. ಕಾನೂನುಭಂಗ ಮಾಡಬಾರದು ಎಂಬ ಷರತ್ತಿನ ಮೇಲೆ ಬಿಡುಗಡೆ ಮಾಡಲಾಯಿತು.

ಕಾನೂನುಭಂಗ ಚಳವಳಿಯಲ್ಲಿ ಭಾಗವಹಿಸಿದ್ದವರ ಶಿಸ್ತಿನ ನಡವಳಿಕೆ ಎಲ್ಲರಿಗೂ ಮೆಚ್ಚುಗೆ ಆಯಿತು. ಅಪಾರ್ಥೈಡ್ ವ್ಯವಸ್ಥೆಯ ತನಿಖೆಗಾಗಿ ವಿಶ್ವಸಂಸ್ಥೆ ಆಯೋಗ ನೇಮಿಸಿತು. ಜೊಹಾನ್ಸ್‌ಬರ್ಗ್ ಬಿಷಪ್ ಅಂಬ್ರೋಸ್ ರೀವ್ಸ್ ಮತ್ತು ಅನೇಕ ಬಿಳಿಯ ಉದಾರವಾದಿಗಳು ಸೇರಿ 'ಸರ್ವ ನಾಗರಿಕರಿಗೆ ಸಮಾನ ಹಕ್ಕುಗಳು' ಎಂದು ಕರೆ ನೀಡಿದರು. ಕೆಲ ಬಿಳಿಯರು ಚಳವಳಿಯಲ್ಲಿ ಭಾಗವಹಿಸಿದರು. ಜೊಹಾನ್ಸ್‌ಬರ್ಗ್ ಮತ್ತು ಕೇಪ್‌ಟೌನ್‌ನಲ್ಲಿ ಬಂಧನಕ್ಕೊಳ್ಳಗಾದರು. ಸರ್ಕಾರ 52 ಮಂದಿ ನಾಯಕರ ಚಲನವಲನದ ಮೇಲೆ ನಿಷೇಧ ಹೇರಿತು. ಅಪಾರ್ಥೈಡ್ ವ್ಯವಸ್ಥೆಯನ್ನು ಇನ್ನೂ ಬಿಗಿಗೊಳಿಸಿತು. ಹೋರಾಟವನ್ನು ಸಂಘಟಿಸುವಲ್ಲಿ ಅನೇಕ ನ್ಯೂನತೆಗಳಿದ್ದವು. ಆದರೆ ಸಹಸ್ರಾರು ಕರಿಯರಲ್ಲಿ ರಾಜಕೀಯ ಪ್ರಜ್ಞೆ ಮೂಡಿತು. 7 ಸಾವಿರ ಸದಸ್ಯತ್ವ ಹೊಂದಿದ್ದ ಎ.ಎನ್.ಸಿ.ಗೆ ಒಂದು ಲಕ್ಷ ಮಂದಿ ಸದಸ್ಯರಾದರು.

ಮಂಡೇಲಾ ಅವರು ಟ್ರಾನ್ಸ್‌ವಾಲ್ ಎ.ಎನ್.ಸಿ. ಅಧ್ಯಕ್ಷರಾದರು. ಕಾನೂನುಭಂಗ ಚಳವಳಿಯಿಂದ ಪ್ರಭಾವಿತರಾದ ತೀವ್ರ ಸುಧಾರಣಾವಾದಿ ಬಿಳಿಯರು ಬಹುಜನಾಂಗೀಯ ಲಿಬರಲ್ ಪಾರ್ಟಿ ಸ್ಥಾಪಿಸಲು ಈ ಚಳವಳಿ ಪ್ರೋತ್ಸಾಹ ನೀಡಿತು.

1952ನೇ ಡಿಸೆಂಬರ್‌ನಲ್ಲಿ ಚೀಫ್ ಅಲ್ಬರ್ಟ್ ಲುತುಲಿ ಎ.ಎನ್.ಸಿ. ಅಧ್ಯಕ್ಷರಾಗಿ ಆಯ್ಕೆ ಆದರು. ಮಂಡೇಲಾ ಉಪಾಧ್ಯಕ್ಷರಾದರು.

ಮಂಡೇಲಾ ಮೊದಲಾದ ನೂರಾರು ಎ.ಎನ್.ಸಿ., ಇಂಡಿಯನ್ ಕಾಂಗ್ರೆಸ್, ಕಾರ್ಮಿಕ ಸಂಘ ಮತ್ತು ಇತರ ಸಂಘಟನೆಗಳ ನಾಯಕರ ಮೇಲೆ ನಿಷೇಧ ಹೇರಲಾಯಿತು. ದಕ್ಷಿಣ ಆಫ್ರಿಕಾ ಸರ್ಕಾರದ ನಿಷೇಧ ವ್ಯವಸ್ಥೆ ವಿಶಿಷ್ಟ ರೀತಿಯ ದಬ್ಬಾಳಿಕೆ ಆಗಿದೆ. ಕಮ್ಯೂನಿಜಂ ದಮನ ಕಾಯ್ದೆ ಪ್ರಕಾರ ಯಾವುದೇ ಪುರಾವೆ ಮತ್ತು ಆರೋಪಗಳಿಲ್ಲದೆ ಒಬ್ಬ ವ್ಯಕ್ತಿಯ ಚಲನವಲನವನ್ನು ನಿಯಂತ್ರಿಸುವ ಅಧಿಕಾರವಿದೆ.

ಮಂಡೇಲಾ ಅವರು ಆರು ತಿಂಗಳ ಕಾಲ ಜೊಹಾನ್ಸ್‌ಬರ್ಗ್ ಬಿಟ್ಟು ಹೋಗದಂತೆ ಮತ್ತು ಯಾವುದೇ ಸಭೆ ಸಮಾರಂಭಗಳಲ್ಲಿ ಭಾಗವಹಿಸದಂತೆ ನಿಷೇಧಿಸಲಾಯಿತು. ಹೀಗಾಗಿ ಅವರು ಭೂಗತ ಚಟುವಟಿಕೆಗಳಲ್ಲಿ ತೊಡಗಿದರು.

ಈ ಎಲ್ಲ ಹೋರಾಟಗಳ ಮಧ್ಯೆ ಮಂಡೇಲಾ ಮತ್ತು ಆಲಿವರ್ ಟಾಂಬೊ ಕಾನೂನು ಪದವಿ ಪಡೆದಿದ್ದರು. ಇಬ್ಬರೂ ಸೇರಿ ಜೊಹಾನ್ಸ್‌ಬರ್ಗ್‌ನಲ್ಲಿ ವಕೀಲಿ ವೃತ್ತಿ ಪ್ರಾರಂಭಿಸಿದರು. ಕರಿಯರು ವಕೀಲರಾಗುವುದು ಕರಿಯರಿಗೆ ಎಲ್ಲಿಲ್ಲದ ಸಂತೋಷ ತರಿಸುವ ವಿಚಾರವಾಗಿತ್ತು.

ಬದುಕಿನ ಬಗ್ಗೆ ತೀವ್ರ ಆಸಕ್ತಿಯುಳ್ಳ ಮಂಡೇಲಾ ಮುಂದಿನ ವರ್ಷಗಳಲ್ಲಿ ತೀವ್ರ ಭಾವೋದ್ರೇಕದ ವ್ಯಕ್ತಿ ಆಗಿದ್ದರು. ಆದರೆ ಅನ್ಯಾಯದ ವಿರುದ್ಧ ಸಿಡಿದೇಳುವ ಪ್ರಸಂಗದಲ್ಲಿ ಕೂಡ ಅವಕಾಶ ಸಿಕ್ಕರೆ ಅವರ ಹಾಸ್ಯ ಪ್ರವೃತ್ತಿ ಹೊರಹೊಮ್ಮುತ್ತಿತ್ತು.

ಕರಿಯ ಮನೆಗೆಲಸದಾಕೆ ತನ್ನ ಬಟ್ಟೆ ಕಳವು ಮಾಡಿದ್ದಾಳೆ ಎಂದು ಬಿಳಿಯ ಒಡತಿಯೊಬ್ಬಳು ನ್ಯಾಯಾಲಕ್ಕೆ ದೂರು ಸಲ್ಲಿಸಿದಳು. ಮಂಡೇಲಾ ಆ ಕಪ್ಪು ಮಹಿಳೆಯ ಪರವಾಗಿ ವಾದಿಸುತ್ತಿದ್ದರು. ಸಾಕ್ಷಿಗಾಗಿ ನ್ಯಾಯಾಲಯದಲ್ಲಿ ಆಕೆಯ ಬಟ್ಟೆಗಳನ್ನು ತರಲಾಗಿತ್ತು. ಮಂಡೇಲಾ ಅವುಗಳಲ್ಲಿನ ಒಂದು ಜತೆ ಕಾಚಾಗಳನ್ನು ಎತ್ತಿ ಹಿಡಿದು "Are these yours" ಎಂದು ಆ ಬಿಳಿ ಮಹಿಳೆಗೆ ಕೇಳಿದರು. ಆ ಮಹಿಳೆ ಗಲಿಬಿಲಿಗೊಂಡಳು. ಪೇಚಾಟದ ಪ್ರಸಂಗ ಉಂಟಾಯಿತು. ತನ್ನವು ಎಂದು ಹೇಳುವ ಬದಲು "No" ಎಂದು ಉತ್ತರಿಸಿದಳು. ಪ್ರಕರಣವನ್ನು ವಜಾ ಮಾಡಲಾಯಿತು.

ಜೂನ್ 195ರಲ್ಲಿ ನಿಷೇಧಾಜ್ಞೆ ಅವಧಿ ಮುಗಿಯಿತು. ಗುಂಪು ಪ್ರದೇಶಗಳ ಕಾಯ್ದೆ ಪ್ರಕಾರ ಸೋಫಿಯಾ ಟೌನಿನ 58ಸಾವಿರ ಕರಿಯ ನಿವಾಸಿಗಳನ್ನು ಒತ್ತಾಯದಿಂದ ಬೇರೆಡೆ ಕಳಿಸುವ ಸರ್ಕಾರದ ಕ್ರಮವನ್ನು ವಿರೋಧಿಸಿ ಮಂಡೇಲಾ, ಸಿಸುಲು ಮುಂತಾದವರು ಭಾಷಣ ಮಾಡಿದರು. ಈ ಶಾಂತಿಯುತವಾದ ಸಭೆಯ ಮೇಲೆ ಪೊಲೀಸರು ಹಲ್ಲೆ ಮಾಡಿದರು. ಸರ್ಕಾರ ಸೋಫಿಯಾ ಟೌನ್ ನಿರ್ನಾಮ ಮಾಡಿ ಅದೇ ಸ್ಥಳದಲ್ಲಿ ಬಿಳಿಯರಿಗಾಗಿ ಟ್ರಿಯೊಂಫ್ ನಗರ ಕಟ್ಟಿತು.

ಸೆಪ್ಟೆಂಬರ್ 1953 ರಂದು ಸರ್ಕಾರ ಮತ್ತೆ ಮಂಡೇಲಾ ಮೇಲೆ ನಿಷೇಧಾಜ್ಞೆ ಹೇರಿತು. ಈ ಹೊಸ ನಿಷೇಧಾಜ್ಞೆ ಪ್ರಕಾರ ಎರಡು ವರ್ಷಗಳ ವರೆಗೆ ಅವರ ಚಲನವಲನ ಜೊಹಾನ್ಸ್‌ಬರ್ಗ್‌ಗೆ ಸೀಮಿತವಾಗಿತ್ತು. ಅವರು ಯಾವುದೇ ಸಭೆ ಸಮಾರಂಭಗಳಲ್ಲಿ ಭಾಗವಹಿಸುವಂತಿರಲಿಲ್ಲ. ಅಷ್ಟೇ ಅಲ್ಲದೆ ಎ.ಎನ್.ಸಿ. ಮತ್ತು ಅದಕ್ಕೆ ಸಂಬಂಧಿಸಿದ ಎಲ್ಲ ಸಂಸ್ಥೆಗಳಿಂದ ಹೊರ ಬರಬೇಕಾಯಿತು. ಆ ವೇಳೆಯಲ್ಲಿ ಅವರು ರೂಪಿಸಿದ ಹೋರಾಟ ತಂತ್ರ 'ಎಂ ಪ್ಲ್ಯಾನ್' ಎಂದು ಪ್ರಸಿದ್ಧವಾಗಿದೆ. 'ಎಂ' ಅಂದರೆ ಮಂಡೇಲಾ. ತಳ ಮಟ್ಟದ ಸಂಘಟನೆಗೆ ಇದು ಸಹಕಾರಿ ಆಯಿತು. ಗಲ್ಲಿಗಳಲ್ಲಿ, ಮನೆ–ಮನೆ ಗಳಲ್ಲಿ, ಕಾರ್ಖಾನೆಗಳಲ್ಲಿ, ರೈಲು ಮತ್ತು ಬಸ್‌ಗಳಲ್ಲಿ ಕಾರ್ಯಕರ್ತರು ಜನರನ್ನು ಭೇಟಿ ಮಾಡುತ್ತ ಹೊಸ ವಿಚಾರಗಳನ್ನು ಹರಡಲು ಯತ್ನಿಸಿ ದರು.

ಸ್ವಾತಂತ್ರ್ಯ ಘೋಷಣೆ

ಸಂದರ್ಶಕ ಪ್ರಾಧ್ಯಾಪಕರಾಗಿ ಒಂದು ವರ್ಷ ನ್ಯೂಯಾರ್ಕ್‌ನಲ್ಲಿ ಇದ್ದು ಮರಳಿ ಬಂದ ಪ್ರಾ. ಜೆಡ್. ಕೆ. ಮ್ಯಾಥ್ಯೂಸ್ ಅವರು 1953ರಲ್ಲಿ ಕೇಪ್ ಎ. ಎನ್. ಸಿ. ಸಮ್ಮೇಳನ ಉದ್ದೇಶಿಸಿ ಮಾತನಾಡುವ ವೇಳೆ ರಾಷ್ಟ್ರೀಯ ಸಮಾವೇಶ ಕರೆಯಲು ಎ.ಎನ್.ಸಿ.ಗೆ ಸಲಹೆ ಮಾಡಿದರು. ಆ ಸಮಾವೇಶದಲ್ಲಿ ಎಲ್ಲ ಬಣ್ಣ ಮತ್ತು ಜನಾಂಗಗಳ ಜನರನ್ನು ಕರೆದು ಭವಿಷ್ಯದ ಪ್ರಜಾಸತ್ತಾತ್ಮಕ ದಕ್ಷಿಣ ಆಫ್ರಿಕಾಗೆ ಬೇಕಾದ 'ಸ್ವಾತಂತ್ರ್ಯ ಘೋಷಣೆ' ರಚಿಸಲು ಸಲಹೆ ಮಾಡಿದರು. ಎ.ಎನ್.ಸಿ. ಅಧ್ಯಕ್ಷ ಲುತುಲಿ ಅವರಿಗೆ ಇದು ಸಮಂಜಸ ಅನಿಸಿತು.

ಈ ವೇಳೆಗಾಗಲೇ ಕಮ್ಯೂನಿಸ್ಟ್ ಪಕ್ಷವನ್ನು ಸ್ವಯಂ ನಿರ್ಧಾರದಿಂದ ವಿಸರ್ಜಿಸಲಾಗಿತ್ತು. ಅವರ ನಾಯಕರು ಮತ್ತು ಸದಸ್ಯರು ಎ. ಎನ್.ಸಿ.ಯಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಹೋರಾಟ ನಡೆಸಿದ್ದರು. ಕರಿಯರ ಎ.ಎನ್.ಸಿ. ಬಿಳಿಯರ ಕಾಂಗ್ರೆಸ್ ಆಫ್ ಡೆಮಾಕ್ರಟ್ಸ್, ಭಾರತೀಯರ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್, ಮಿಶ್ರವರ್ಣೀಯರ ಸೌತ್‌ಆಫ್ರಿಕನ್ ಕಲರ್ಡ್

ೀಪಲ್ಸ್ ಆರ್ಗನೈಸೇಷನ್ ಹಾಗೂ ಸೌತ್ ಆಫ್ರಿಕನ್ ಕಾಂಗ್ರೆಸ್ ಆಫ್‌ಟ್ರೇಡ್ ಯೂನಿಯನ್ಸ್ ಜಂಟಿಯಾಗಿ ರಚಿಸಿದ 'ಕಾಂಗ್ರೆಸ್ ಆಫ್ ದ ಪೀಪಲ್' ೇದಿಕೆ ಆಶ್ರಯದಲ್ಲಿ ವಿವಿಧ ಸಂಘ–ಸಂಸ್ಥೆ ಮತ್ತು ಬುಡಕಟ್ಟುಗಳಿಗೆ ಸೇರಿದ ಮೂರು ಸಾವಿರ ಮಂದಿ ಸ್ವಾತಂತ್ರ್ಯಪ್ರಿಯ ಪ್ರತಿನಿಧಿಗಳು ಜೊಹಾನ್ಸ್ ರ್ಗ್ ಬಳಿಯ ಕ್ಲಿಪ್‌ಟೌನ್‌ನಲ್ಲಿ 1955ನೇ ಜೂನ್ 26 ರಂದು 'ಸ್ವಾತಂತ್ರ್ಯ ಘೋಷಣೆ' ಅಂಗೀಕರಿಸಿದರು.

"ದಕ್ಷಿಣ ಆಫ್ರಿಕಾದ ಜನತೆ ಕರಿಯರು ಮತ್ತು ಬಿಳಿಯರು–ಸಮಾನರು, ದೇಶವಾಸಿಗಳು ಹಾಗೂ ಸಹೋದರರು ಎಂಬ ಸ್ವಾತಂತ್ರ್ಯ ಘೋಷಣೆಯನ್ನು ಅಂಗೀಕರಿಸುವೆವು. ಇಲ್ಲಿ ಬಯಸಿದ ಪ್ರಜಾಸತ್ತಾತ್ಮಕ ಬದಲಾವಣೆಗಳು ಈಡೇರುವವರೆಗೆ ಎದೆಗುಂದದೆ ಬಲಗುಂದದೆ ಒಂದಾಗಿ ಹೋರಾಡುವ ಪ್ರತಿಜ್ಞೆ ಮಾಡುವೆವು" ಎಂದು ಸ್ವಾತಂತ್ರ್ಯ ಘೋಷಣೆ ಸಾರುತ್ತದೆ.

ಅಮಾನುಷ ವರ್ಣಭೇದ ನೀತಿಯ ವಿರುದ್ಧ ಹೋರಾಡುತ್ತಿರುವ ದಕ್ಷಿಣ ಆಫ್ರಿಕಾದ ಜನರಿಗೆ ಸ್ವಾತಂತ್ರ್ಯ ಘೋಷಣೆ ಸ್ಫೂರ್ತಿಯ ಸೆಲೆ ಆಗಿದೆ.

'ಸ್ವಾತಂತ್ರ್ಯ ಘೋಷಣೆ' ಅಂಗೀಕರಿಸಿದ 3 ತಿಂಗಳ ನಂತರ ಕಮ್ಯೂನಿಜಂ ದಮನಕಾಯ್ದೆ ಮೇರೆಗೆ ಸಹಸ್ರಾರು ಪೊಲೀಸರು ಜನರ ಮನೆ ಮತ್ತು ಕಚೇರಿಗಳನ್ನು ನುಗ್ಗಿ ಕಮ್ಯೂನಿಸ್ಟ್ ಚಟುವಟಿಕೆಗೆ ಸಂಬಂಧಿಸಿದ ಪುರಾವೆಗಳನ್ನು ಹುಡುಕಲು ಪ್ರಯತ್ನಿಸಿದರು.

ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರುವ ಬಿಳಿಯರು ಕೂಡ 'ಸ್ವಾತಂತ್ರ್ಯ ಘೋಷಣೆ' ಬಗ್ಗೆ ಗೌರವ ತಾಳಿದ್ದಾರೆ. ನಿರ್ವಿಕಾರ ವಿಚಾರಗಳಿಂದ ಕೂಡಿದ 'ಸ್ವಾತಂತ್ರ್ಯ ಘೋಷಣೆ' ವರ್ಣ ದ್ವೇಷ ನೀತಿಯ ವಿರುದ್ಧ ಮುನ್ನಡೆಯು ತ್ತಿರುವ ಎಲ್ಲ ಬುಡಕಟ್ಟುಗಳ ಮತ್ತು ರಾಜಕೀಯ ಪಕ್ಷಗಳ ಹೋರಾಟಕ್ಕೆ ದಾರಿದೀಪವಾಗಿದೆ. ಅಂತೆಯೆ ಅಧಿಕಾರದ ಸೂತ್ರ ಹಿಡಿದಿರುವ ಬಿಳಿಯ ಅಲ್ಪಸಂಖ್ಯಾತರು ಆ ಘೋಷಣಾಪತ್ರವನ್ನು 'ಉದ್ರೇಕಕಾರಿ ದಾಖಲೆ' ಎಂದು ಆಪಾದಿಸಿದ್ದಾರೆ. ಬಣ್ಣ, ಬುಡಕಟ್ಟು ಮುಂತಾದ ವ್ಯತ್ಯಾಸಗಳನ್ನು

ಪರಿಗಣಿಸದೆ ಸಮತೆ, ಗೌರವ ಮತ್ತು ಮಾನವ ಘನತೆ ಎಂಬುದು ದಕ್ಷಿಣ ಆಫ್ರಿಕಾದ ಎಲ್ಲ ನಿವಾಸಿಗಳಿಗೆ ದೊರೆಯಬೇಕೆಂಬ ಆಶಯ ಹೊಂದಿರುವ 'ಸ್ವಾತಂತ್ರ್ಯ ಘೋಷಣೆ'ಯನ್ನು ದಮನಕಾರಿ ಶಕ್ತಿಗಳು 'ಉದ್ರೇಕಕಾರಿ' ಎಂದು ಕರೆಯುವಲ್ಲಿ ಆಶ್ಚರ್ಯವೇನಿಲ್ಲ. ದಕ್ಷಿಣ ಆಫ್ರಿಕಾದ ಪ್ರಜ್ಞಾವಂತ ಜನ ತಮ್ಮೆಲ್ಲ ಭೇದಭಾವಗಳನ್ನು ಮರೆತು ಸಂವಿಧಾನಾತ್ಮಕವಾದ ಅಪಾರ್ಥೈಡ್ ಕ್ರೌರ್ಯದ ವಿರುದ್ಧ ತಲೆಯೆತ್ತಿ 'ಸ್ವಾತಂತ್ರ್ಯ ಘೋಷಣೆ' ಕೂಗುತ್ತಿದ್ದಾರೆ.

ದಕ್ಷಿಣ ಆಫ್ರಿಕಾದ ಬಹುಸಂಖ್ಯಾತ ಕಪ್ಪು ಜನರ 'ಸ್ವಾತಂತ್ರ್ಯ ಘೋಷಣೆ'ಗೆ ಜಾಗತಿಕ ಮಹತ್ವವಿದೆ. ತೃತೀಯ ಜಗತ್ತಿನ ಜನರು ತಮ್ಮ ಸ್ವಾತಂತ್ರ್ಯವನ್ನು ಅರ್ಥೈಸಿಕೊಳ್ಳಲು ಒರೆಗಲ್ಲಾಗಿದೆ. ದಕ್ಷಿಣ ಆಫ್ರಿಕಾದ ಜನ ತುರ್ತಾಗಿ ಸಾಧಿಸಬೇಕಾಗಿರುವುದು ಸಮಾಜವಾದವನ್ನಲ್ಲ, ರಾಷ್ಟ್ರೀಯ ಪ್ರಜಾಪ್ರಭುತ್ವವನ್ನು. ಈ ಹಂತಕ್ಕೆ ತನ್ನದೇ ಆದ ಕ್ರಾಂತಿಕಾರಿ ಮಹತ್ವವಿದೆ.

ಸಮಾಜವಾದಿ ವ್ಯವಸ್ಥೆಯಲ್ಲಿ ರಾಜ್ಯಶಕ್ತಿ ದುಡಿಯುವ ವರ್ಗದ ಕೈಯಲ್ಲಿ ಇದ್ದು ಉತ್ಪಾದನಾ ಸಾಧನಗಳ ಸಾಮಾಜೀಕರಣವಾಗಿರುತ್ತದೆ. ಉತ್ಪಾದನೆ ಜನತೆಗಾಗಿ ಇರುತ್ತದೆ ಹೊರತಾಗಿ ಲಾಭಕ್ಕಾಗಿ ಅಲ್ಲ. ಈ ರೀತಿಯಾದ ಮೂಲಭೂತವಾದ ರಾಜಕೀಯ ಮತ್ತು ಆರ್ಥಿಕ ಬದಲಾವಣೆಗಳನ್ನು 'ಸ್ವಾತಂತ್ರ್ಯ ಘೋಷಣೆ' ಒಳಗೊಂಡಿಲ್ಲ. ಒಂದು ವೇಳೆ ಹಾಗೆ ಒಳಗೊಂಡಿದ್ದರೆ ವಾಸ್ತವವನ್ನು ಕಡೆಗಣಿಸುವ ರಂಜಕ ಘೋಷಣೆಯಾಗುತ್ತಿತ್ತು. 'ಸ್ವಾತಂತ್ರ್ಯ ಘೋಷಣೆ'ಯಲ್ಲಿ "ಜನರು ಆಳುತ್ತಾರೆ" ಎಂದರೆ 'ಕಾರ್ಮಿಕರು, ರೈತರು, ವಿವಿಧ ಉದ್ಯೋಗಿಗಳು ಮತ್ತು ಪುಟ್ಟ ಬಂಡವಾಳಶಾಹಿಗಳು–ಹೀಗೆ ಎಲ್ಲ ವರ್ಗಗಳ ಬಿಳಿಯರು ಮತ್ತು ಕರಿಯರು ಆಳುತ್ತಾರೆ' ಎಂದು ಅರ್ಥ. ಆದರೆ 'ಸ್ವಾತಂತ್ರ್ಯ ಘೋಷಣೆ' ಏಕಸ್ವಾಮ್ಯ ಬಂಡವಾಳವಾದಿಗಳಿಗೆ ಮಾರಕವಾಗಿದೆ. ಅದು ಭೂಮಿ, ಚಿನ್ನದ ಗಣಿ ಮತ್ತು ಬ್ಯಾಂಕುಗಳ ರಾಷ್ಟ್ರೀಕರಣವನ್ನು ಬಯಸುತ್ತದೆ. ಇದು ಸಾಮ್ರಾಜ್ಯಶಾಹಿಗಳ ಆಸೆಬುರುಕತನಕ್ಕೆ ದೊಡ್ಡ ಕೊಡಲಿ ಪೆಟ್ಟು. ಇಂಥ ಆರ್ಥಿಕ ಮೂಲಗಳನ್ನು ಅವರು ಶತಮಾನಗಳಿಂದ ತಮ್ಮ ಕಪಿ ಮುಷ್ಟಿಯಲ್ಲಿಟ್ಟುಕೊಂಡು ಜನಸಾಮಾ

ನ್ಯರ ಸುಲಿಗೆ ಮಾಡುತ್ತಿದ್ದಾರೆ. ಜನರನ್ನು ಸುಲಿಗೆ, ಹಿಂಸೆ, ಬಡತನ ಮತ್ತು ಒಟ್ಟಾರೆ ವರ್ಣದ್ವೇಷ ವ್ಯವಸ್ಥೆಯಿಂದ ವಿಮೋಚನೆಗೊಳಿಸಿ ಅವರ ಬದುಕಿಗೆ ಉಪಯುಕ್ತವಾಗುವಂತೆ ಆರ್ಥಿಕ ವ್ಯವಸ್ಥೆಯನ್ನು ರೂಪಿಸುವುದೇ 'ಸ್ವಾತಂತ್ರ್ಯ ಘೋಷಣೆ'ಯ ಮುಖ್ಯ ಗುರಿಯಾಗಿದೆ. ಈ ಗುರಿಯನ್ನು ಸಾಧಿಸುವುದೆಂದರೆ ಸಮಾಜವಾದಿ ವ್ಯವಸ್ಥೆಗೆ ದಾರಿ ಸುಗಮ ಮಾಡಿ ಕೊಟ್ಟಂತೆ. ಈ ದಾರಿ ನಿರ್ಮಾಣಕ್ಕಾಗಿ, ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರುವ ಎಲ್ಲ ಜನರ ಸಹಕಾರದ ಅವಶ್ಯಕತೆ ಇದೆ.

ವಿವಿಧ ಬುಡಕಟ್ಟುಗಳಿಗೆ ಸೇರಿದ ದಕ್ಷಿಣ ಆಫ್ರಿಕಾದ ಕಪ್ಪು ಜನರನ್ನು ಕೂಡಿಸಿ ವರ್ಣದ್ವೇಷನೀತಿ, ವಸಾಹತುಷಾಹಿ ಮತ್ತು ಸಾಮ್ರಾಜ್ಯವಾದದ ವಿರುದ್ಧ ಹೋರಾಡುವಲ್ಲಿ ಸ್ವಾತಂತ್ರ್ಯ ಘೋಷಣೆಯ ಪಾತ್ರ ಪ್ರಮುಖ ವಾಗಿದೆ. ಅದು ರಾಷ್ಟ್ರೀಯ ಪ್ರಜಾಪ್ರಭುತ್ವವಾದಿ ಚಳವಳಿಯ ಮಹಾ ಅಸ್ತ್ರವಾಗಿದೆ. ಅಂತೆಯೆ ಅಲ್ಲಿನ ಸರ್ಕಾರ ಹೋರಾಟಗಾರರಲ್ಲಿನ ಏಕತೆ ಯನ್ನು ಮುರಿಯಲು ಸದಾ ಸನ್ನದ್ಧವಾಗಿರುತ್ತದೆ. ಒಂದು ಬುಡಕಟ್ಟಿನ ನಾಯಕನ ಮೇಲೆ ಇನ್ನೊಂದು ಬುಡಕಟ್ಟಿನ ನಾಯಕನನ್ನು ಎತ್ತಿಕಟ್ಟುತ್ತದೆ. ಸುಧಾರಣಾವಾದಿಗಳನ್ನು ಹೋರಾಟಗಾರರ ವಿರುದ್ಧ ಬಳಸಿಕೊಳ್ಳುತ್ತದೆ. ತೀವ್ರಗಾಮಿಗಳು ತಮಗರಿಯದಂತೆಯೆ ಸಾಮ್ರಾಜ್ಯಷಾಹಿಗಳ ಕೈಗೊಂಬೆ ಗಳಾಗುವಂತೆ ಮಾಡುತ್ತದೆ. ಎಲ್ಲರೂ ತಮ್ಮ ತಮ್ಮ ವಾದಕ್ಕೇ ಜೋತು ಬೀಳುವಂತಹ ವಾತಾವರಣ ಸೃಷ್ಟಿಸುತ್ತದೆ. ಆದರೆ 'ಸ್ವಾತಂತ್ರ್ಯ ಘೋಷಣೆ' ಹೋರಾಟಕ್ಕಾಗಿ ಸಾಮಾನ್ಯ ಅಭಿಪ್ರಾಯ ಸೃಷ್ಟಿಸುವ ಶಕ್ತಿ ಹೊಂದಿದೆ. ದಿಕ್ಕು ತಪ್ಪಿಸುವ ವ್ಯವಸ್ಥೆಯಲ್ಲಿ ದಿಕ್ಸೂಚಿಯಾಗಿದೆ. ಕ್ರಾಂತಿಕಾರಿ ಸಿದ್ಧಾಂತವಿಲ್ಲದೆ ಕ್ರಾಂತಿಕಾರಿಗಳ ಚಳವಳಿ ಸಾಧ್ಯವಿಲ್ಲ. ಸ್ವಾತಂತ್ರ್ಯ ಘೋಷಣೆ ದಕ್ಷಿಣ ಆಫ್ರಿಕಾದಲ್ಲಿನ ಕ್ರಾಂತಿಕಾರಿ ಚಟುವಟಿಕೆಗಳಿಗೆ ಸೈದ್ಧಾಂತಿಕ ನೆಲೆಗಟ್ಟಾಗಿದೆ.

ಇದೊಂದು ಕ್ರಾಂತಿಕಾರಿ ದಾಖಲೆ, ಏಕೆಂದರೆ ಸರ್ಕಾರದ ರಾಜಕೀಯ ಮತ್ತು ಆರ್ಥಿಕ ರಚನೆಯನ್ನು ಹಾಳುಗೆಡವದೇ 'ಸ್ವಾತಂತ್ರ್ಯ ಘೋಷಣೆ' ಹೇಳುವಂಥ ಬದಲಾವಣೆಗಳನ್ನು ಸಾಧಿಸಲಿಕ್ಕಾಗದು ಎಂದು ನೆಲ್ಸನ್

ಮಂಡೇಲಾ ಹೇಳುತ್ತಾರೆ. ಆದರೆ ಸ್ವಾತಂತ್ರ್ಯ ಘೋಷಣೆಯಲ್ಲಿ ತಿಳಿಸಿದ ಪ್ರಜಾಸತ್ತಾತ್ಮಕ ಬದಲಾವಣೆಗಳು ಸಮಾಜವಾದಿ ವ್ಯವಸ್ಥೆಯ ನಕಲು ಅಲ್ಲ. ಅದನ್ನು ಸಾಧಿಸಲು ಇನ್ನೂ ಹೆಚ್ಚಿನ ಸಾಮಾಜಿಕ ಬದಲಾವಣೆಯಾಗಬೇಕಾಗುತ್ತದೆ ಎಂದು ವಿವರಿಸಿದ್ದಾರೆ.

ಸ್ವಾತಂತ್ರ್ಯ ಘೋಷಣೆಯನ್ನು ತಮ್ಮ ಕಾರ್ಯಕ್ರಮಗಳಿಗೆ ಮೂಲವಾಗಿಟ್ಟುಕೊಂಡು ಅನೇಕ ಸಂಘಟನೆಗಳನ್ನು ಸರ್ಕಾರ ನಿರ್ದಯದಿಂದ ಹತ್ತಿಕ್ಕಿದೆ. ದಕ್ಷಿಣ ಆಫ್ರಿಕಾದ ಜನರಲ್ಲಿ ಕಮ್ಯೂನಿಸ್ಟ್ ವಿರೋಧಿ ಭಾವನೆಗಳನ್ನು ತುಂಬಲು ಸರ್ಕಾರ ಅವಿಶ್ರಾಂತವಾಗಿ ಪ್ರಯತ್ನಿಸುತ್ತಿದೆ.

1955ರ ಕೊನೆಯಲ್ಲಿ ಮಂಡೇಲಾ ಮೇಲೆ ಹೇರಿದ್ದ ನಿಷೇಧಾಜ್ಞೆ ಅವಧಿ ಮುಗಿಯಿತು. ಕೂಡಲೆ ನಿಷೇಧಾಜ್ಞೆಯನ್ನು ಮತ್ತೆ 5 ವರ್ಷಗಳವರೆಗೆ ವಿಸ್ತರಿಸಲಾಯಿತು. ಈ ಸಂದರ್ಭದಲ್ಲಿ ಪತ್ನಿ ಎವೆಲಿನ್ ನತಾಲ್‌ನಲ್ಲಿ ಸೂಲಗಿತ್ತಿಯಾಗುವ ತರಬೇತಿ ಪಡೆಯುತ್ತಿದ್ದರು. ಥೆಂಬೆರೆಲೆ. ಮಕ್‌ಗಥೊ ಎಂಬ ಗಂಡುಮಕ್ಕಳು ಮತ್ತು ಮಕಾಜಿವೆ ಎಂಬ ಹೆಣ್ಣು ಮಗು ಇದ್ದವು. ಮಂಡೇಲಾ ಅವರ ರಾಜಕೀಯ ಜೀವನದ ಒತ್ತಡಗಳು ಮತ್ತು 'ಗಂಡಾಂತರಕಾರಿ' ನಿಲುವುಗಳು ದಾಂಪತ್ಯ ಸಂಬಂಧವನ್ನು ಶಿಥಿಲಗೊಳಿಸಿದವು. ಕೊನೆಗೆ ವಿವಾಹ ವಿಚ್ಛೇದನವಾಯಿತು.

1956ನೇ ಡಿಸೆಂಬರ್ 5 ರಂದು ನಸುಕಿನ ವೇಳೆ ಮಂಡೇಲಾ ಅವರನ್ನು ಆರ್ಲ್ಯಾಂಡೊನಲ್ಲಿನ ಅವರ ಮನೆಯಲ್ಲಿ ಬಂಧಿಸಲಾಯಿತು. 'ಸ್ವಾತಂತ್ರ್ಯ ಘೋಷಣೆ' ಅಂಗೀಕರಿಸಿದ ಹಿನ್ನೆಲೆಯಲ್ಲಿ ಉನ್ನತ ರಾಜದ್ರೋಹದ ಆಪಾದನೆಯೆ ಈ ಬಂಧನಕ್ಕೆ ಕಾರಣವಾಯಿತು. ರಾಜದ್ರೋಹದ ಆಪಾದನೆ ಮೇಲೆ ಒಟ್ಟು 156 ಮಂದಿಯನ್ನು ಬಂಧಿಸಲಾಯಿತು.

ಲುತುಲಿ, ಡಾ॥ ನಾಯ್ಕರ್. ಇಸ್ಮಾಯಿಲ್ ಮೀರ್, ಸ್ವಾತಂತ್ರ್ಯ ಗೀತೆಗಳನ್ನು ರಚಿಸಿದ ಕ್ಯಾನನ್ ಜೇಮ್ಸ್ ಕಲಾಲಾ, 'ನ್ಯೂ ಏಜ್' ಸಂಪಾದಕಿ ರುತ್ ಫಸ್ಟ್. ಅವರ ಪತಿ ನ್ಯಾಯವಾದಿ ಜೋ ಸ್ಲೋವೊ, ಮಹಿಳಾ ಲೀಗ್ ಅಧ್ಯಕ್ಷೆ ಲಿಲಿಯನ್ ನಗೋಯಿ, ಸಮಾಜ ಕಾರ್ಯಕರ್ತೆ ಹೆಲೆನ್ ಜೋಸೆಫ್ ಮುಂತಾದ ನಾಯಕರಲ್ಲದೆ ಚಾಲಕರು, ಕಾರ್ಖಾನೆ ಕಾರ್ಮಿಕರು, ಶಿಕ್ಷಕರು,

ಗುಮಾಸ್ತರು ಮತ್ತು ಗೃಹಿಣಿಯರನ್ನು ಕೂಡ ಬಂಧಿಸಲಾಗಿತ್ತು. ಬಂಧಿತರಲ್ಲಿ 105 ಮಂದಿ ಕರಿಯರು, 23 ಮಂದಿ ಬಿಳಿಯರು, 21 ಮಂದಿ ಭಾರತೀಯರು ಮತ್ತು 7 ಮಂದಿ ಮಿಶ್ರವರ್ಣೀಯರು ಇದ್ದರು. ವರ್ಣಭೇದ ನೀತಿಯ ವಿರುದ್ಧ ಧ್ವನಿ ಎತ್ತಿದ ಅವರನ್ನು ಬಿಳಿಯರು ಮತ್ತು ಬಿಳಿಯರಲ್ಲದವರು ಎಂದು ವಿಂಗಡಿಸಿದ ಸರ್ಕಾರ ಬೇರೆ ಬೇರೆ ಜೈಲುಗಳಿಗೆ ಕಳಿಸಿತು.

1956ನೇ ಡಿಸೆಂಬರ್ 19ರಂದು ವಿಚಾರಣೆ ಪ್ರಾರಂಭವಾದಾಗ ಜನರಲ್ಲಿ ವಿಜಯೋತ್ಸಾಹದ ವಾತಾವರಣವಿತ್ತು. ಜನ ಸ್ವಾತಂತ್ರ್ಯ ಗೀತ ಹಾಡುತ್ತಿದ್ದರು. 156 ಮಂದಿ ಆರೋಪಿಗಳು ಸಮ್ಮೇಳನದ ಪ್ರತಿನಿಧಿಗಳ ಹಾಗೆ ಕುಳಿತಿದ್ದರು. ವಿಚಾರಣೆ ಪ್ರಾರಂಭವಾದಾಗ ಮೈಕ್ರೊಫೋನ್ ಕೆಟ್ಟಿದ್ದರಿಂದ ಮ್ಯಾಜಿಸ್ಟ್ರೇಟರ ಮಾತುಗಳು ಕೇಳಿಸಲಿಲ್ಲ. ನಗೆಗಡಲಿನ ಮಧ್ಯೆ ವಿಚಾರಣೆಯನ್ನು ಮುಂದಕ್ಕೆ ಹಾಕಲಾಯಿತು.

1957ನೇ ಜೂನ್ 26ರಂದು ಲುತುಲಿ ಮತ್ತು ಇತರ ಎ. ಎನ್. ಸಿ ನಾಯಕರು ಮನೆಯಲ್ಲೇ ಉಳಿಯುವುದರ ಮೂಲಕ ಕೆಲಸಕ್ಕೆ ಗೈರು ಹಾಜರಿ ಆಗಲು ಕರೆ ನೀಡಿದರು. ಹೀಗೆ ಮಾಡುವುದರಿಂದ ಕಾರ್ಯವೂ ಸಾಧಿಸಿದಂತಾಗುತ್ತದೆ ಮತ್ತು ಪೊಲೀಸರಿಂದ ಉಂಟಾಗುವ ಹಿಂಸೆ ತಪ್ಪುತ್ತದೆ ಎಂದು ಮಂಡೇಲಾ ವಿವರಿಸಿದ್ದಾರೆ. ವಿಚಾರಣೆಯಿಂದಾಗಿ ಚಟುವಟಿಕೆಗಳು ಅಸ್ತವ್ಯಸ್ತಗೊಂಡಿದ್ದರಿಂದ ಸಂಘಟನೆಯ ಸಾಮರ್ಥ್ಯ ಪರೀಕ್ಷಿಸಲು ಈ ಕರೆ ನೀಡಲಾಗಿತ್ತು.

ವಿನ್ನಿ ಜತೆ ಮದುವೆ

ರಾಜದ್ರೋಹದ ಆರೋಪದ ಕಾರಣ ಬಂಧನಕ್ಕೊಳಗಾಗುವ ಸ್ವಲ್ಪ ದಿನ ಮುಂಚೆ ವಿನ್ನಿ ನೊಮ್‌ಜಾಮೊ ಮಡಿಕಿಜೆಲಾ ಮತ್ತು ನೆಲ್ಸನ್ ಮಂಡೇಲಾ ಅವರ ಭೇಟಿ ಆಯಿತು. ಇನ್ನೂ 20 ವರ್ಷ ತುಂಬಿರದ ಕಪ್ಪು ಸುಂದರಿ ವಿನ್ನಿ ವೈದ್ಯಕೀಯ ಸಮಾಜ ಸೇವಕಿಯಾಗಿ ಆಸ್ಪತ್ರೆಯೊಂದರಲ್ಲಿ ನೇಮಕಗೊಂಡಿದ್ದರು. ಅಲ್ಲಿಯವರೆಗೆ ಯಾವುದೇ ಕರಿಯ ಮಹಿಳೆ ಈ ಹುದ್ದೆ ಪಡೆದಿರಲಿಲ್ಲ. ಆಕೆಯ ತಂದೆ ಕೊಲಂಬಸ್ ಮಡಿಕಿಜೆಲಾ ಟ್ರಾನ್ಸ್‌ಕೆಯಿ

ಬಂಟುಸ್ತಾನದಲ್ಲಿ ಕೃಷಿ ಸಚಿವರಾಗಿದ್ದರು' ಬಂಟುಸ್ತಾನಗಳ ಕರಿಯರ ಒಳಾಡಳಿತದಲ್ಲಿ ಬರುವ ಇಂಥ ಹುದ್ದೆಗಳು ಬಿಳಿಯರ ಕಣ್ಣಲ್ಲಿ ಅಂಥ ಮಹತ್ವದ ಸ್ಥಾನ ಪಡೆಯದಿದ್ದರೂ ಕರಿಯರ ಮಧ್ಯೆ ಅವುಗಳಿಗೆ ಒಂದಿಷ್ಟು ಬೆಲೆ ಇರುತ್ತದೆ. ವಿನ್ನಿ ಕೂಡ ನೆಲ್ಸನ್ ಮಂಡೇಲಾ ಹಾಗೆ ಬಾಲ್ಯದಲ್ಲಿ ತಮ್ಮ ದನಗಳನ್ನು ಕಾಯುವ ಕೆಲಸ ಮಾಡಿದ್ದಳು. ಆಕೆಯ ತಂದೆ ಸ್ಥಳೀಯ ಕರಿಯರ ಶಾಲೆಯೊಂದರ ಮುಖ್ಯೋಪಾಧ್ಯಾಯ ಕೂಡ ಆಗಿದ್ದರಿಂದ ಕಲಿಯುವುದರಲ್ಲಿ ಆಸಕ್ತಿ ಬೆಳೆಯಿತು. ವಿನ್ನಿ ಒಂಬತ್ತು ವರ್ಷದವಳಿದ್ದಾಗ ತಾಯಿ ಮೃತಪಟ್ಟಳು. ನಂತರ ಬೋರ್ಡಿಂಗ್ ಶಾಲೆಗೆ ಹೋಗುವವರೆಗೆ ತಮ್ಮ – ತಂಗಿಯರ ಯೋಗಕ್ಷೇಮ ನೋಡಿಕೊಂಡಳು.

ಕಷ್ಟಪಟ್ಟು ಓದಿ ಮೊದಲ ಕರಿಯ ವೈದ್ಯಕೀಯ ಸಮಾಜ ಸೇವಕಿಯಾದ ಕಾರಣ ಅನೇಕ ಪತ್ರಿಕೆಗಳು ಆಕೆಯ ಭಾವಚಿತ್ರವನ್ನು ಪ್ರಕಟಿಸಿದ್ದವು. ಸೇವೆಗೆ ಸೇರಿದ ಹೊಸದರಲ್ಲೇ ಜೊಹಾನ್ಸ್‌ಬರ್ಗ್‌ನಲ್ಲಿ ಮಂಡೇಲಾ ಜತೆ ಆದ ಆಕಸ್ಮಿಕ ಭೇಟಿ ಪ್ರೀತಿಗೆ ತಿರುಗಿತು. ಪೊಂಡೋಲ್ಯಾಂಡ್‌ನಲ್ಲಿ ಇರುವ ವಿನ್ನಿ ಮನೆಯಲ್ಲಿ ಜೂನ್ 1958 ರಲ್ಲಿ ಮಂಡೇಲಾ ಅವರು ವಿನ್ನಿ ಅವರನ್ನು ಮದುವೆ ಆದರು. ಆಗ ರಾಜದ್ರೋಹದ ವಿಚಾರಣೆ ನಡೆದಿತ್ತು.

ಮದುವೆಗೆ ಮುಂಚೆ ಅವರು ವಿನ್ನಿಗೆ ಫೋನ್ ಮಾಡಿ ಮಧ್ಯಾಹ್ನದ ಊಟಕ್ಕೆ ಕರೆದರು. ಅದು ಅವರ ಮೊದಲ ಖಾಸಗಿ ಭೇಟಿಯಾಗಿತ್ತು. ಅವರು ವಿನ್ನಿಯನ್ನು ಜನಪ್ರಿಯ ಭಾರತೀಯ ರೆಸ್ಟೋರೆಂಟ್‌ಗೆ ಕರೆದೊಯ್ದರು. ಅಲ್ಲಿ ಕೂಡ ಜನ ಅವರನ್ನು ಭೇಟಿಯಾಗಿ ಸಲಹೆ ಕೇಳುತ್ತಿದ್ದುದನ್ನು ವಿನ್ನಿ ಗಮನಿಸಿದರು. ನಂತರ ಊರ ಹೊರಗಿನ ಬಯಲು ಪ್ರದೇಶಕ್ಕೆ ಹೋದರು. ಮಂಡೇಲಾ ಅವರಿಗೆ ಹಳ್ಳಿಗಾಡಿನ ನಿಸರ್ಗರಮ್ಯ ಬದುಕು ಮತ್ತು ಜನಸಮೂಹ ಸದಾ ಆಕರ್ಷಕವಾಗಿತ್ತು. ರಾಜದ್ರೋಹದ ವಿಚಾರಣೆಯ ರಕ್ಷಣಾ ನಿಧಿಗಾಗಿ ಹಣ ಸಂಗ್ರಹಿಸಲು ಮಂಡೇಲಾ ಅವರು ವಿನ್ನಿಯನ್ನು ಕೇಳಿಕೊಂಡರು. ಅವರ ಮೊದಲ ಖಾಸಗಿ ಭೇಟಿಯ ಖಾಸಗಿ ಮಾತು ಇದಾಗಿತ್ತು.

ನೆನಪಿಡು ನೀನು ಮದುವೆ ಆಗುತ್ತಿರುವುದು ವ್ಯಕ್ತಿಯನ್ನಲ್ಲ ಹೋರಾಟವನ್ನು ಎಂದು ವಿನ್ನಿ ತಂದೆ ಹೇಳಿದ್ದರು. ಪದ್ಧತಿ ಪ್ರಕಾರ ವರ ಮತ್ತು

ಕನ್ಯೆಯ ಮನೆಗಳಲ್ಲಿ ಮದುವೆಯ ಸಮಾರಂಭಗಳು ನಡೆಯಬೇಕಿತ್ತು. ಆದರೆ ಕುನು ಗ್ರಾಮದಲ್ಲಿನ ನೆಲ್ಸನ್ ಮನೆಯಲ್ಲಿ ಮದುವೆ ಏರ್ಪಾಟು ಮಾಡುವಷ್ಟು ಸಮಯ ಇರಲಿಲ್ಲ. ಸಾಂಪ್ರದಾಯಿಕವಾಗಿ ಅವರ ಮದುವೆ ಪೂರ್ತಿ ಆಗಲಿಲ್ಲ. ಆ ಸಂದರ್ಭಕ್ಕಾಗಿ ವಿನ್ನಿ ಮದುವೆ ಕೇಕ್‌ನ ಒಂದು ಭಾಗವನ್ನು ಇನ್ನೂ ಇಟ್ಟಿದ್ದಾರೆ.

1958ನೇ ಆಗಸ್ಟ್ 1 ರಿಂದ ರಾಜದ್ರೋಹದ ವಿಚಾರಣೆ ಪ್ರಿಟೋರಿಯಾದಲ್ಲಿ ಸರಿಯಾಗಿ ಪ್ರಾರಂಭವಾಯಿತು. ಲುತುಲಿ, ಟಾಂಬೊ ಮೊದಲಾದ 61 ಮಂದಿಯ ಮೇಲಿನ ಆಪಾದನೆಗಳನ್ನು ಹಿಂತೆಗೆದುಕೊಳ್ಳಲಾಯಿತು. 1959ನೇ ಜನವರಿ 19ರಂದು 61 ಆರೋಪಿಗಳ ಬಿಡುಗಡೆ ಮಾಡಲಾಯಿತು. ಉಳಿದ ಆರೋಪಿಗಳಲ್ಲಿ ಲಿಲಿಯನ ನಗೋಯಿ, ಹೆಲೆನ್ ಜೊಸೆಫ್ ವಾಲ್ಟೇರ ಸಿಸುಲು ಮತ್ತು ನೆಲ್ಸನ್ ಮಂಡೇಲಾ ಇದ್ದರು.

ನಾಯಕರ ಚಲನವಲನೆಯ ಮೇಲೆ ನಿಗಾ ಇಡುವುದು. ಅವರ ಚಲನವಲನೆಯನ್ನು ಪ್ರದೇಶವೊಂದಕ್ಕೆ ಸೀಮಿತಗೊಳಿಸುವುದು ವಿಚಾರಣೆಗೆ ಒಳಪಡಿಸುವುದು ಮುಂತಾದ ಕ್ರಮಗಳಿಂದಾಗಿ ಸರ್ಕಾರ ಹೋರಾಟಗಾರರ ಮೇಲೆ ತೀವ್ರ ಒತ್ತಡ ತಂದಿತು. 1959ರಲ್ಲಿ ಎ.ಎನ್.ಸಿ.ಯಲ್ಲಿ ಗಂಭೀರವಾದ ಭಿನ್ನಾಭಿಪ್ರಾಯಗಳು ಬೆಳೆಯತೊಡಗಿದವು. ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಮತ್ತು ಕಮ್ಯೂನಿಸ್ಟರ ಜತೆ ಸೇರಿ ಹೋರಾಟ ಮಾಡುವುದನ್ನು ವಿರೋಧಿಸುವ ಗುಂಪು ರಾಬರ್ಟ್ ಸೊಬುಕ್ವೆ ನೇತೃತ್ವದಲ್ಲಿ ಹೊರಬಂದು ಪ್ಯಾನ್ ಆಫ್ರಿಕನಿಸ್ಟ್ ಕಾಂಗ್ರೆಸ್ (ಪಿ.ಎ.ಸಿ) ಸ್ಥಾಪಿಸಿತು.

1960ರಲ್ಲಿ ಎಲ್ಲ ರಂಗದಲ್ಲಿ ಬಿಳಿಯ ಸರ್ಕಾರದ ದಬ್ಬಾಳಿಕೆ ವಿಪರೀತವಾಯಿತು. ಎ.ಎನ್.ಸಿ ಜತೆ ಎಲ್ಲ ಜನಾಂಗಗಳ 13 ಸಂಘಟನೆಗಳು ಒಟ್ಟುಗೂಡಿದ್ದರಿಂದ ಹೋರಾಟಕ್ಕೆ ಹೊಸ ಸ್ವರೂಪ ಬಂದಿತು. ಪಾಸ್ ಕಾಯ್ದೆ ವಿರುದ್ಧ ಮಾರ್ಚ್ 31 ರಂದು ಚಳವಳಿ ಹೂಡಲು ನಿರ್ಧರಿಸಲಾಯಿತು. ಪಿ.ಎ.ಸಿ. ಹತ್ತು ದಿನ ಮೊದಲೇ ಅಂದರೆ 1960ನೇ ಮಾ. 21 ರಂದು ಪಾಸ್ ಕಾಯ್ದೆ ವಿರುದ್ಧ ಚಳವಳಿ ಪ್ರಾರಂಭಿಸಿತು. ಮಾದರಿ ನಗರ ಶಾರ್ಪವಿಲ್ಲೆಯಲ್ಲಿ ಶಾಂತಿಯುತವಾಗಿ ಚಳವಳಿ ನಡೆಸುತ್ತಿದ್ದ ಜನರ ಮೇಲೆ 75

ಮಂದಿ ಪೋಲೀಸರು ಹಿಂದಿನಿಂದ ಗುಂಡು ಹಾರಿಸಿದರು. ಆಗ ಹೆಂಗಸರು ಮತ್ತು ಮಕ್ಕಳ ಸಮೇತ 69 ಮಂದಿ ಸತ್ತು 180 ಮಂದಿ ಗಾಯಗೊಂಡರು.

ಶಾರ್ಪವಿಲ್ಲೆಯಲ್ಲಿ ಈ ದುರಂತ ಸಂಭವಿಸಿದ ಕೆಲವೇ ಗಂಟೆಗಳ ನಂತರ ಕೇಪ್‌ಟೌನ್ ಹೊರವಲಯದ ಲಾಂಗಾ ಎಂಬ ಪ್ರದೇಶದಲ್ಲಿ 10 ಸಾವಿರ ಮಂದಿ ಪ್ರದರ್ಶನಕಾರರ ಮೇಲೆ ಗುಂಡು ಹಾರಿಸಲಾಯಿತು. ಆಗ ಇಬ್ಬರು ಸತ್ತು 49 ಮಂದಿ ಗಾಯಗೊಂಡರು. ಮಾರ್ಚ್ 30 ರಂದು ಸರ್ಕಾರ ತುರ್ತುಪರಿಸ್ಥಿತಿ ಘೋಷಿಸಿತು. ಏಪ್ರಿಲ್ 8 ರಂದು ಸರ್ಕಾರ ಎ.ಎನ್.ಸಿ ಮತ್ತು ಪಿ.ಎ.ಸಿ.ಯನ್ನು ಕಾನೂನು ಬಾಹಿರಗೊಳಿಸಿತು.

ರಾಜದ್ರೋಹದ ವಿಚಾರಣೆ ಸಮಯದಲ್ಲಿ 'Are you attracted by a classless society ?' ಎಂದು ಮಂಡೇಲಾ ಅವರನ್ನು ಕೇಳಿದಾಗ 'Yes very much so, My Lord. I think that a lot of evils arise out of the existence of classes, one class exploiting the others [but]....the ANC has no policy in any shape or form of this matter' ಎಂದು ಮಂಡೇಲಾ ಉತ್ತರಿಸಿದರು. ಆಗಸ್ಟ್ 9 ರಂದು ಅವರು ತಮ್ಮ ಸಾಕ್ಷ್ಯವನ್ನು ಪೂರ್ತಿಗೊಳಿಸಿದರು. ಆಗಸ್ಟ್ ಅಂತ್ಯದ ವೇಳೆ ತುರ್ತುಪರಿಸ್ಥಿತಿ ತೆಗೆದಾಗ ಮಂಡೇಲಾ ಮತ್ತು ಗೆಳೆಯರನ್ನು ಬಿಡುಗಡೆ ಮಾಡಲಾಯಿತು.

ನಾಲ್ಕು ವರ್ಷಗಳಿಗೂ ಹೆಚ್ಚು ಕಾಲ ನಡೆದ ರಾಜದ್ರೋಹದ ವಿಚಾರಣೆಗೆ ಸಂಬಂಧಿಸಿದಂತೆ ಸರ್ಕಾರದ ವಾದ ಮಾರ್ಚ್ 1961ರಲ್ಲಿ ಪೂರ್ತಿಗೊಂಡಿತು. ರಾಜದ್ರೋಹದ ಆಪಾದನೆಯಲ್ಲಿ ಕೊನೆಗೆ ಉಳಿದ ಎಲ್ಲ 30 ಮಂದಿಯನ್ನು ಮಾರ್ಚ್ 29 ರಂದು ಬಿಡುಗಡೆ ಮಾಡಲಾಯಿತು. ಸರ್ಕಾರ ಎಷ್ಟೇ ಪ್ರಯತ್ನಪಟ್ಟರೂ 'ಸ್ವಾತಂತ್ರ್ಯ ಘೋಷಣೆ'ಯಲ್ಲಿ ಕಮ್ಯೂನಿಜಂ ಹುಡುಕಲಿಕ್ಕಾಗಲಿಲ್ಲ. ರಾಜದ್ರೋಹದ ಆಪಾದನೆಗೆ ಒಳಗಾದವರೆಲ್ಲ ನಿರಪರಾಧಿಗಳೆಂದು ಸಾಬೀತಾಯಿತು.

1961ನೇ ಮಾರ್ಚ್ 25 ರಂದು ಪೀಟರ್ ಮಾರಿಟ್ಸಬರ್ಗ್‌ನಲ್ಲಿ ನಡೆದ ಆಲ್ ಇನ್ ಆಫ್ರಿಕನ್ ಸಮ್ಮೇಳನದಲ್ಲಿ ಮಂಡೇಲಾ ಭಾಗವಹಿಸಿದ್ದರು. 10

ವರ್ಷಗಳ ನಿಷಿದ್ಧ ಜೀವನದ ನಂತರ ಅವರು ಮೊದಲ ಬಾರಿಗೆ ಏಕಾಏಕಿ ಬಂದಾಗ ಸಭೆಯಲ್ಲಿ ವಿದ್ಯುತ್ ಸಂಚಾರವಾದಂತಾಯಿತು ಎಂದು ಒಬ್ಬ ಪ್ರತಿನಿಧಿ ಹೇಳಿದರು.

1961ನೇ ಮೇ 29 ರಂದು 'ಮೂರು ದಿನ ಮನೆಯಲ್ಲೇ ಉಳಿಯುವ' ಕರೆ ನೀಡಿದರು. ಜನರು ಮಂಡೇಲಾ ಕರೆಗೆ ಓಗೊಟ್ಟರು ಕೆಲಸ ಸ್ಥಗಿತಗೊಳಿಸುವ ಮುಷ್ಕರ ಯಶಸ್ವಿಯಾಯಿತು. ನಂತರ ಭೂಗತರಾದ ಮಂಡೇಲಾ 1961ನೇ ಜೂನ್ 26ರ ವಾರ್ಷಿಕ 'ಸ್ವಾತಂತ್ರ್ಯ ದಿನ'ದಂದು ಹೊಸ ರೀತಿಯ ಹೋರಾಟಕ್ಕೆ ಕರೆ ನೀಡಿದರು. ಇನ್ನು ಮೇಲೆ ಅಹಿಂಸಾ ನೀತಿಯ ಅಧ್ಯಾಯ ಮುಗಿಯಿತು ಎಂದರು.

ಎ.ಎನ್.ಸಿ ಜನ್ಮ ತಾಳಿದಂದಿನಿಂದಲೂ 50 ವರ್ಷಗಳಷ್ಟು ಕಾಲ ಅಹಿಂಸೆಯ ದಾರಿ ಸವೆಸಿತ್ತು. ಮಹಾತ್ಮಾಗಾಂಧಿ ಅವರ 'ಸತ್ಯಾಗ್ರಹ'ದಲ್ಲಿ ನಂಬಿಕೆ ಇಟ್ಟಿತ್ತು. ಮಂಡೇಲಾ, ಸಿಸುಲು ಮೊದಲಾದ ಗೆಳೆಯರು ಕೂಡ ಆ ಪರಂಪರೆಯನ್ನು ಹೆಚ್ಚು ಶಕ್ತಿಶಾಲಿಗೊಳಿಸಿದರು. ಆದರೆ ಯಾವುದೇ ಪ್ರಯೋಜನವಾಗಲಿಲ್ಲ.

ಎ.ಎನ್.ಸಿ. ಅಧ್ಯಕ್ಷ, ನೊಬೆಲ್ ಶಾಂತಿ ಪ್ರಶಸ್ತಿ ವಿಜೇತ ಚೀಫ್ ಅಲ್ಬರ್ಟ್ ಲುತುಲಿ ತುಂಬ ವಿಷಾದದಿಂದ ಹೀಗೆ ಹೇಳಿದರು : "Who will deny that thirty years of my life have been spent knocking in vain, patiently moderately and modestly at a closed and barred door ? What have been the fruits of moderation ? The past thirty years have seen the greatest number of laws restricting our rights and progress, until today we have reached a stage where we have almost no rights at all."

ಅಹಿಂಸಾತ್ಮಕ ಹೋರಾಟಗಳಲ್ಲಿ ನಂಬಿಕೆ ಇಟ್ಟುಕೊಂಡಿದ್ದ ಎ.ಎನ್.ಸಿ. ಕಾನೂನು ಬಾಹಿರಗೊಂಡ ನಂತರ ಸಶಸ್ತ್ರ ಹೋರಾಟದ ಬಗ್ಗೆ ಯೋಚಿಸ ತೊಡಗಿತು. 'ಕರಿಯರ ವಿಮೋಚನೆ ಸಶಸ್ತ್ರ ಹೋರಾಟದ ಮೂಲಕ' ಎಂಬುದು ಮಂಡೇಲಾ ಅವರಿಗೆ ಮನವರಿಕೆ ಆಯಿತು.

ಉಮ್ ಖೊಂಟೊ ವೆ ಸಿಜ್ವೆ

ಅಕ್ಟೋಬರ್ 1961ರಲ್ಲಿ ಜೊಹಾನ್ಸ್‌ಬರ್ಗ್‌ನ ಹೊರವಲಯದಲ್ಲಿರುವ ರಿವೋನಿಯಾ ಎಂಬಲ್ಲಿ 'ಲಿಲ್ಲೀಸ್ ಲೀಫ್' ಹೆಸರಿನ ಚಿಕ್ಕ ಫಾರ್ಮ್ ಅನ್ನು ಬಾಡಿಗೆಗೆ ತೆಗೆದುಕೊಂಡು ಮಂಡೇಲಾ ಅವರು ಪತ್ನಿ ವಿನ್ನಿ ಮತ್ತು ಹೆಣ್ಣು ಮಕ್ಕಳು ಜೆನಿ ಹಾಗೂ ಜಿಂಜಿ ಜತೆ ಅಲ್ಲಿ ಉಳಿದರು.

ಕರಿಯರ ಹೋರಾಟಕ್ಕೆ ಮಂಡೇಲಾರ ಬಹು ದೊಡ್ಡ ಕೊಡುಗೆ ಎಂದರೆ 1961ನೇ ಡಿಸೆಂಬರ್ 16 ರಂದು 'ಲಿಲ್ಲೀಸ್ ಲೀಫ್'ನಲ್ಲಿ ಪ್ರಾರಂಭವಾದ 'ಉಮ್‌ಖೊಂಟೊ ವೆ ಸಿಜ್ವೆ' ಜುಲು ಭಾಷೆಯಲ್ಲಿ ಹಾಗೆಂದರೆ 'ದೇಶದಈಟಿ'. ಅದು ಎ.ಎನ್.ಸಿ.ಯ ಅರೆಮಿಲಿಟರಿ ವಿಭಾಗ. ಮಂಡೇಲಾ ಅದರ ಕಮಾಂಡರ್ ಇನ್ ಚೀಫ್ ಆದರು. ಆ ದಿನ ಸರ್ಕಾರಿ ಕಟ್ಟಡಗಳಲ್ಲಿ ಬಾಂಬು ಗಳು ಸಿಡಿದವು. ಇದಕ್ಕೆ ತಾನೇ ಹೊಣೆ ಎಂದು ಈ ಅಪರಿಚಿತ ಸಂಘಟನೆ ಹೇಳಿತು. ಅಂದೇ ಜನ್ಮತಾಳಿದ 'ಉಮ್ ಖೊಂಟೊ ವೆ ಸಿಜ್ವೆ' ಈ ರೀತಿ ತನ್ನ ಶಕ್ತಿ ಪ್ರದರ್ಶನ ಮಾಡಿತು.

'ಉಮ್ ಖೊಂಟೊ ವೆ ಸಿಜ್ವೆ' ಶಕ್ತಿಶಾಲಿಯಾಗಿ ಬೆಳೆಯಲು ಬೇಕಾದ ಅನುಭವ ಮತ್ತು ಇತರ ಅವಶ್ಯಕತೆಗಳಿಗಾಗಿ ಮಂಡೇಲಾ 1962ರ ಜನವರಿ ಯಲ್ಲಿ ಸರ್ಕಾರದ ಕಣ್ಣು ತಪ್ಪಿಸಿ ವಿದೇಶಿ ಪ್ರವಾಸ ಕೈಗೊಂಡರು. ಅಡಿಸ್ ಅಬಾಬಾದಲ್ಲಿ ನಡೆದ ಪ್ಯಾನ್ ಆಫ್ರಿಕನ್ ಸ್ವಾತಂತ್ರ್ಯ ಸಮ್ಮೇಳನದಲ್ಲಿ ಎ.ಎನ್.ಸಿ. ಪರವಾಗಿ ಭಾಗವಹಿಸಿದರು. ಟುಂಗಾನಿಕಾ. ಇಥಿಯೋಪಿಯಾ, ಸೂಡಾನ್, ಈಜಿಪ್ಟ್, ಲಿಬಿಯಾ, ಟುನಿಷಿಯಾ, ಅಲ್ಜೀರಿಯಾ, ಮೊರೊಕೊ ಮಾಲಿ, ಸೆನೆಗಲ್, ಗಿನಿಯಾ, ನಿಯೆರ್ರಾ, ತೆಯೊನೆ, ಲಿಬೆರಿಯಾ, ಘಾನಾ ಮತ್ತು ನೈಜೀರಿಯಾಗಳಿಗೆ ಭೇಟಿ ನೀಡಿದರು. ಅಲ್ಲಿನ ನಾಯಕರು ಮತ್ತು ಹಿರಿಯ ಅಧಿಕಾರಿಗಳ ಜತೆ ಚರ್ಚಿಸಿದರು. ಇಂಗ್ಲೆಂಡ್‌ನಲ್ಲಿ ಆಗ ಲೇಬರ್ ಪಕ್ಷದ ನಾಯಕರಾಗಿದ್ದ ಹಗ್ ಗೈಟ್ಸ್‌ಕೆಲ್ ಮತ್ತು ಲಿಬರಲ್ ಪಕ್ಷದ ನಾಯಕ ರಾಗಿದ್ದ ಜೊ ಗ್ರಿಮೊಂಡ್ ಅವರು ಮಂಡೇಲಾ ಅವರನ್ನು ಬರಮಾಡಿ ಕೊಂಡರು.

ಪ್ರವಾಸದ ನಂತರ ಅವರು ಮತ್ತೆ ಸರ್ಕಾರದ ಕಣ್ಣು ತಪ್ಪಿಸಿ ಸ್ವದೇಶಕ್ಕೆ

ಮರಳಿ ಬಂದು ಭೂಗತರಾದರು. 1962ನೇ ಆಗಸ್ಟ್ 15 ರಂದು ಪೊಲೀಸರು ಅವರನ್ನು ಡರ್ಬಾನ್ ಬಳಿ ಬಂಧಿಸಿದರು. ಡರ್ಬಾನ್‌ನಲ್ಲಿನ ಅಮೇರಿಕದ ಕಾನ್ಸುಲೇಟ್‌ನಲ್ಲಿ ಕೆಲಸ ಮಾಡುತ್ತಿದ್ದ ಸಿ.ಐ.ಎ. ಏಜೆಂಟ್‌ವೊಬ್ಬ ಮಂಡೇಲಾ ಅವರ ಬಗ್ಗೆ ಪೊಲೀಸರಿಗೆ ಸುಳಿವು ನೀಡಿದ್ದ ಎಂಬುದು 1986ರಲ್ಲಿ ಬೆಳಕಿಗೆ ಬಂದಿತು.

1962ನೇ ನವೆಂಬರ್ 7 ರಂದು ಅವರಿಗೆ 5 ವರ್ಷ ಕಠಿಣ ಶಿಕ್ಷೆ ಆಯಿತು. 1961ನೇ ಮೇ 29 ರಂದು ರಾಷ್ಟ್ರೀಯ ಮುಷ್ಕರಕ್ಕೆ ಕರೆ ನೀಡಿದ್ದಕ್ಕಾಗಿ 3 ವರ್ಷ ಶಿಕ್ಷೆಯಾದರೆ ದಾಖಲೆಗಳಿಲ್ಲದೆ ವಿದೇಶಿ ಪ್ರವಾಸ ಕೈಗೊಂಡಿದ್ದಕ್ಕೆ 2 ವರ್ಷ ಶಿಕ್ಷೆ ಆಯಿತು.

1963ನೇ ಜುಲೈ 12 ರಂದು ರಿವೋನಿಯಾದಲ್ಲಿ ಪೊಲೀಸರು ಸಿಸುಲು ಮತ್ತು ಇತರ ನಾಯಕರನ್ನು ಬಂಧಿಸಿದರು. ದಾಖಲೆ ಪತ್ರಗಳನ್ನೂ ವಶ ಪಡಿಸಿಕೊಂಡರು. ಈ ಹಿನ್ನೆಲೆಯಲ್ಲಿ ಮಂಡೇಲಾ ಅವರನ್ನು ರಿವೋನಿಯಾ ವಿಚಾರಣೆಯ ನಂ. 1 ಆರೋಪಿಯಾಗಿ ಪರಿಗಣಿಸಲಾಯಿತು.

ಒಟ್ಟು ಆರು ಮಂದಿ ಬಿಳಿಯರನ್ನು ಬಂಧಿಸಲಾಗಿತ್ತು. ಅವರಲ್ಲಿ ಇಬ್ಬರು ಪೊಲೀಸ್ ಕಸ್ಟಡಿಯಿಂದ ಪಾರಾಗಿ ಹೋದರು. ಒಬ್ಬ ಸರ್ಕಾರ ಪರ ಸಾಕ್ಷ್ಯ ನುಡಿಯುವುದಾಗಿ ಹೇಳಿ ದೇಶದಿಂದ ಪಾರಾಗಿ ಹೋದ ಸಾಕ್ಷ್ಯಾಧಾರ ಇಲ್ಲದ್ದಕ್ಕಾಗಿ ನಾಲ್ಕನೆಯವನನ್ನು ಬಿಡಲಾಯಿತು. ವಾಸ್ತುಶಿಲ್ಪಿ ಲಯನೆಲ್ ರಸ್ಟಿ ಬರ್ನ್‌ಸ್ಟೈಯಿನ್ ಮತ್ತು ಸಿವಿಲ್ ಎಂಜಿನಿಯರ್ ಡೆನ್ನಿಸ್ ಗೋಲ್ಡ್‌ಬರ್ಗ್ ರಿವೋನಿಯಾ ವಿಚಾರಣೆಯ ಬಿಳಿಯ ಆರೋಪಿಗಳಾಗಿ ಉಳಿದರು. ಭಾರತೀಯ ಅಹ್ಮದ್‌ಕಥ್ರದಾ ಮತ್ತು ಕರಿಯರಾದ ಗೋವನ್ ಮಬೇಕಿ, ರಾಯ್ಮೊಂಡ್ ಮಹ್ಲಬಾ, ಇಲಿಯಾಸ್ ಮೊತ್ಸೊಲೆದಿ, ಆಂಡ್ರ್ಯು ಮಲಂಗೆನಿ ಮತ್ತು ವಾಲ್ಟೇರ್ ಸಿಸುಲು ಅವರು ನೆಲ್ಸನ್ ಮಂಡೇಲಾ ಜತೆ ರಿವೋನಿಯಾ ವಿಚಾರಣೆ ಎದುರಿಸಿದರು.

ಈಗಾಗಲೇ ಪ್ರಿಟೋರಿಯಾ ಕೇಂದ್ರ ಕಾರಾಗೃಹದಲ್ಲಿ ಐದು ವರ್ಷಗಳ ಕಠಿಣ ಶಿಕ್ಷೆ ಎದುರಿಸುತ್ತಿರುವ ನೆಲ್ಸನ್ ಮಂಡೇಲಾ ಅವರನ್ನು ರಾಬೈನ್ ನಡುಗಡ್ಡೆಗೆ ಕಳಿಸಲಾಯಿತು. ವಿಚಾರಣೆ ವೇಳೆ ಮತ್ತೆ ಪ್ರಿಟೋರಿಯಾ ಕಾರಾ

ಗೃಹಕ್ಕೆ ಸ್ಥಳಾಂತರಿಸಿ ಹೊರ ಜಗತ್ತಿನ ಯಾವುದೇ ಸಂಬಂಧವಿರದ ರೀತಿಯಲ್ಲಿ ಇಡಲಾಯಿತು.

1963ನೇ ಅಕ್ಟೋಬರ್ 9 ರಂದು ಪ್ರಿಟೋರಿಯಾದಲ್ಲಿ ರಿವೋನಿಯಾ ವಿಚಾರಣೆ ಪ್ರಾರಂಭವಾಯಿತು. 1962ನೇ ಜನವರಿ 28 ರಿಂದ ಎರಡು ವರ್ಷಗಳವರೆಗೆ ಚಲನವಲನೆಯ ಮೇಲೆ ನಿಷೇಧ ಹೇರಿದ್ದರಿಂದ ವಿನ್ನಿಗೆ ಜೊಹಾನ್ಸ್‌ಬರ್ಗ್ ಬಿಟ್ಟು ಬರಲಾಗಲಿಲ್ಲ.

1964ನೇ ಏಪ್ರಿಲ್ 20 ರಂದು ನಡೆದ ವಿಚಾರಣೆ ಸಮಯದಲ್ಲಿ ಮಂಡೇಲಾ 4 ಗಂಟೆಗೂ ಹೆಚ್ಚು ಕಾಲ ಮಾತನಾಡಿದ್ದು ಇತಿಹಾಸ ಪ್ರಸಿದ್ಧ ವಾಗಿದೆ.

"ಆಫ್ರಿಕಾದ ಜನತೆಯ ಹೋರಾಟಕ್ಕೆ ನನ್ನ ಬದುಕನ್ನೇ ಸಮರ್ಪಿಸಿ ಕೊಂಡಿದ್ದೇನೆ. ಬಿಳಿಯರ ಪ್ರಾಬಲ್ಯದ ವಿರುದ್ಧ ಹೋರಾಡಿದ್ದೇನೆ. ಮತ್ತು ಕರಿಯರ ಪ್ರಾಬಲ್ಯದ ವಿರುದ್ಧ ಹೋರಾಡಿದ್ದೇನೆ. ಸರ್ವರೂ ಸಮಾನ ಅವಕಾಶಗಳೊಂದಿಗೆ ಸಾಮರಸ್ಯದಿಂದ ಒಂದುಗೂಡಿ ಬದುಕುವಂಥ ಪ್ರಜಾಪ್ರಭುತ್ವ ಮತ್ತು ಮುಕ್ತ ಸಮಾಜದ ಆದರ್ಶಗಳನ್ನು ಪೋಷಿಸಿದ್ದೇನೆ. ಈ ಆದರ್ಶಗಳ ಸಾಧನೆಗಾಗಿ ನಾನು ಬದುಕಲು ಬಯಸುತ್ತೇನೆ ಮತ್ತು ಈ ಆದರ್ಶಗಳಿಗಾಗಿ ನಾನು ಸಾಯಲು ಸಿದ್ಧನಿದ್ದೇನೆ" ಎಂದು ಅವರು ಮಾತು ಮುಗಿಸಿದರು.

ಸರ್ಕಾರ ಉರುಳಿಸುವ ಉದ್ದೇಶದಿಂದ 'ಉಮ್ ಖೊಂಟೊ ವೆ ಸಿಜ್ವೆ' ಸ್ಥಾಪಿಸಲಾಗಿದೆ ಎಂದು 11ನೇ ಜೂನ್ 1964 ರಂದು ತೀರ್ಪು ನೀಡಿದ ನ್ಯಾಯಾಧೀಶ ಲಯನೆಲ್ ಬರ್ನ್‌ಸ್ಟೈಯಿನ್ ನಿರಪರಾಧಿ ಎಂದು ಘೋಷಿಸಿ ಉಳಿದ ಎಂಟು ಮಂದಿಗೆ ಜೀವಾವಧಿ ಶಿಕ್ಷೆ ವಿಧಿಸಿದ. ಮಂಡೇಲಾ ಮೊದಲು ಮಾಡಿ, ಎಲ್ಲರೂ ಮರಣ ದಂಡನೆಯಾಗುವುದು ಎಂದು ಭಾವಿಸಿದರು. ಆದರೆ ಬಿಳಿಯ ಕಮ್ಯೂನಿಸ್ಟ್ ವಕೀಲ ಬ್ರಾಮ್ ಫಿಷರ್ ಅವರ ಅದ್ವಿತೀಯ ವಾದ ಸಾಮರ್ಥ್ಯದಿಂದಾಗಿ ಎಂಟೂ ಮಂದಿಯ ಜೀವ ಉಳಿಯಿತು.

ಬಿಳಿಯ ಡೆನ್ನಿಸ್ ಗೋಲ್ಡ್‌ಬರ್ಗ್ ಅವರನ್ನು ಪ್ರಿಟೋರಿಯಾ ಜೈಲಿನಲ್ಲಿ ಇಡಲಾಯಿತು. ಮಂಡೇಲಾ, ಸಿಸುಲು, ಮುಬೇಕಿ, ಮದಲಬಾ, ಮೊತ್ಸೊ,

ಲೆದಿ ಮತ್ತು ಕಥದ್ರಾ ಅವರನ್ನು ಕುಪ್ರಸಿದ್ಧ ರಾಬ್ಬೆನ್ ನಡುಗಡ್ಡೆಗೆ ಕಳಿಸಲಾಯಿತು.

ಕೇಪ್‌ಟೌನ್‌ನಿಂದ ವಾಯುವ್ಯದ ಕಡೆಗೆ 7 ಮೈಲಿ ದೂರದಲ್ಲಿ ರಾಬೆನ್ ನಡುಗಡ್ಡೆ ಇದೆ. ಇಲ್ಲಿನ ಜೈಲು ಜಗತ್ತಿನಲ್ಲೇ ಕುಪ್ರಸಿದ್ಧವಾದದು. ತಣ್ಣನೆಯ ಅಟ್ಲಾಂಟಿಕ್ ಸಾಗರದ ಮಧ್ಯೆ ಇರುವ ಈ ನಡುಗಡ್ಡೆಯಲ್ಲಿ ರಕ್ತ ಹೆಪ್ಪುಗಟ್ಟುವಂಥ ಚಳಿ ಇರುತ್ತದೆ. 17ನೇ ಶತಮಾನದಲ್ಲಿ ಈ ನಡುಗಡ್ಡೆಯನ್ನು ಜೈಲಾಗಿ ಪರಿವರ್ತಿಸಲಾಯಿತು. 1೮ನೇ ಶತಮಾನದಲ್ಲಿ ಹುಚ್ಚರ ಮತ್ತು ಕುಷ್ಠರೋಗಿಗಳ ಕಾಲೋನಿ ಆಯಿತು. ಎರಡನೇ ಮಹಾಯುದ್ಧದ ಸಮಯದಲ್ಲಿ ಸೈನ್ಯ ಠಾಣೆ ಆಯಿತು 1961 ರಿಂದ ಮತ್ತೆ ಜೈಲಾಗಿ ಮಾರ್ಪಟ್ಟಿತು. ಈ ಜೈಲಿನಿಂದ ಪಾರಾಗಲು ಸಾಧ್ಯವೇ ಇಲ್ಲ. ಅಷ್ಟೊಂದು ಬಂದೋಬಸ್ತಿನಿಂದ ಕೂಡಿದೆ. ಅಲ್ಲಿ ದೈಹಿಕ ಮತ್ತು ಮಾನಸಿಕ ಹಿಂಸೆ ನೀಡುವುದು ದೈನಂದಿನ ಕ್ರಮವಾಗಿದೆ. ಕೈದಿಗಳಿಗೆ ದೈಹಿಕ ಹಿಂಸೆ ಕೊಟ್ಟಾಗ ನೆಲದ ಮೇಲೆ ಬಿದ್ದ ರಕ್ತವನ್ನು ಅವರೇ ಒರೆಸಿ ಸ್ವಚ್ಛಗೊಳಿಸುವಂಥ ಪರಿಸ್ಥಿತಿ ಇದೆ. ಪ್ರಸಿದ್ಧಿಯಿಂದಾಗಿ ನೆಲ್ಸನ್ ಮಂಡೇಲಾ ಅವರಿಗೆ ದೈಹಿಕ ಹಿಂಸೆ ಕೊಡುವ ಪರಿಸ್ಥಿತಿ ಇರಲಿಲ್ಲ. ಆದರೆ ಬೆಳಿಗ್ಗೆ 7 ಗಂಟೆಯಿಂದ ಸಾಯಂಕಾಲ 4 ಗಂಟೆಯುವರೆಗೆ ಅವರು ನಡುಗಡ್ಡೆಯ ಸುಣ್ಣದ ಕಲ್ಲಿನ ಗಣಿಯಲ್ಲಿ ಕೆಲಸ ಮಾಡಬೇಕಿತ್ತು. ಅದು ಕಠಿಣ, ಬೇಸರ ಹುಟ್ಟಿಸುವ ಮತ್ತು ಅನುತ್ಪಾದಕ ಕೆಲಸವಾಗಿತ್ತು. ಗಾರ್ಡ್‌ಗಳು ಸದಾಕಾಲ ಕಠಿಣ ಕೆಲಸ ಮಾಡಲು ಒತ್ತಾಯಿಸುತ್ತಿದರು ಎಂದು ಮಂಡೇಲಾ ಸ್ಮರಿಸಿಕೊಂಡಿದ್ದಾರೆ. ಮಂಡೇಲಾ ರಾಬ್ಬೆನ್ ನಡುಗಡ್ಡೆಯಲ್ಲಿ 18 ವರ್ಷ ಕಳೆದರು.

ಅಲ್ಲೋಲ ಕಲ್ಲೋಲ

"ನಿಮ್ಮನ್ನೆಲ್ಲ ತಿರಸ್ಕರಿಸುವವರಿಗೆ
ಸಿಗುವಂತೆ ಸಾಕಷ್ಟು ಸ್ಥಳ :
ಅಗಲವಾಗಲಿ ಎತ್ತರವಾಗಲಿ
ನಿಮ್ಮ ಜೈಲು ಗೋಡೆಗಳಿನ್ನೂ"

196 ರಲ್ಲಿ ಅಕಾಲ ಮೃತ್ಯುವಿಗೀಡಾದ ಕವಿ ಮಾರ್ಕ್ ವೆಯಿಸ್‌ಬರ್ಗ್ (18) ಬರೆದ ಕವನದ ಸಾಲುಗಳಿವು. 25 ವರ್ಷಗಳ ನಂತರ ಆ ಕವನದಲ್ಲಿನ ಧ್ವನಿಪೂರ್ಣವಾದ ಕನಸನ್ನು ನನಸಾಗಿಸುವ ರೀತಿಯಲ್ಲಿ ಇಂದಿನ ಕಪ್ಪು ಯುವಕರು ದಕ್ಷಿಣ ಆಫ್ರಿಕಾದಲ್ಲಿ ಎಡೆಬಿಡದ ಹೋರಾಟ ನಡೆಸಿದ್ದಾರೆ. ಅಲ್ಲಿನ ವರ್ಣಭೇದ ನೀತಿಯು ಬಿಳಿಯರ ಸರ್ಕಾರ ಪಿ.ಡಬ್ಲ್ಯೂ. ಬೋಥಾ ಅಧಿಕಾರದಲ್ಲಿದ್ದಾಗ ಇಡೀ ದೇಶವನ್ನೇ ಜೈಲು ಭೂಮಿ ಮಾಡುವ ಮಟ್ಟಕ್ಕೆ ಹೋಯಿತು.

ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕವಾಗಿ ಸುಲಿಗೆಗೀಡಾದ ಅಲ್ಲಿನ ಕರಿಯರು ಬಿಳಿಯರನ್ನು ಕಾಲದ ಅನಿವಾರ್ಯ ತಿರುವಿನಲ್ಲಿ ತಂದು ನಿಲ್ಲಿಸಿದ್ದಾರೆ. 'ವರ್ಣಭೇದ' ನೀತಿ ಇಲ್ಲದೆ ನಮಗೆ ಉಳಿಗಾಲವಿಲ್ಲ ಎಂದು ಕರಿಯರು ಕೃತಿಯ ಮೂಲಕ ಹೇಳಿದ್ದಾರೆ. ಇಷ್ಟು ದಿನಗಳ ಗುಲಾಮರು ಬಿಳಿಯರು ಭಾವಿಸಿದರೆ 'ಇಲ್ಲಿ ವರ್ಣಭೇದ ನೀತಿಗೆ ಇನ್ನು ಅವಕಾಶವಿಲ್ಲ' ಎಂದು ಇಂದು ಬಿಳಿಯರಿಗೆ 'ಸಿಂಹಸ್ವಪ್ನ'ವಾಗಿದ್ದಾರೆ.

1984ರ ಸೆಪ್ಟೆಂಬರ್ ತಿಂಗಳಿಂದ ಕರಿಯರ ಹೋರಾಟ ಅವ್ಯಾಹತವಾಗಿ ನಡೆದಿದೆ. 1984ರ ಸೆಪ್ಟೆಂಬರ್ 4 ರಂದು 26 ಮಂದಿ ಕರಿಯ ಹೋರಾಟಗಾರರನ್ನು ಗುಂಡಿಕ್ಕಿ ಕೊಲ್ಲಲಾಯಿತು. ಸೆಪ್ಟೆಂಬರ್ 5 ರಂದು ಹಿಂಸೆ ಗಲಭೆಗಳ ಮಧ್ಯೆ ಪ್ರಧಾನಮಂತ್ರಿ ಬೋಥಾ ಹೊಸ ಸಂವಿಧಾನದ

ಪ್ರಕಾರ ಅಧ್ಯಕ್ಷರಾಗಿ ಆಯ್ಕೆ ಆದರು. ಅಂದಿನಿಂದ ಒಂದು ವರ್ಷದ ಅವಧಿಯಲ್ಲಿ 700 ಮಂದಿ ಕರಿಯರು ಪೊಲೀಸರ ಗುಂಡಿಗೆ ಆಹುತಿಯಾದರು. ಇಂದು ಕರಿಯರಿಗೆ ಸಾವು ಬದುಕಿನ ಮಧ್ಯೆ ಅಂತರ ಕಾಣುತ್ತಿಲ್ಲ. ಗುಲಾಮಗಿರಿಯಲ್ಲಿ ಬದುಕು ಇಲ್ಲ ಎಂಬುದು ಅವರಿಗೆ ಮನವರಿಕೆಯಾಗಿದೆ. 'ಶತಮಾನದುದ್ದಕ್ಕೂ ಅವರ ಹಿರಿಯರು ನರಳುತ್ತ ಬದುಕಿದ್ದು ಅಸಹ್ಯವಾದುದು' ಎಂಬ ದೃಢನಿರ್ಧಾರ ಅವರದು. 'ನಮ್ಮ ವರ್ಣಭೇದ ನೀತಿಯನ್ನು ಯಾವ ಶಕ್ತಿಯಿಂದಲೂ ತಡೆಯಲಿಕ್ಕಾಗದು' ಎಂದು ವೋರ್ಸ್ಟರ್ ಅಧ್ಯಕ್ಷರಾಗಿದ್ದಾಗ ಹೇಳುತ್ತಿದ್ದುದು ಇಂದು ಹಾಸ್ಯಾಸ್ಪದವಾಗಿದೆ.

ದೇಶದ ಕಪ್ಪು ಯುವಕರ ನಡವಳಿಕೆ ಅವರ ಹಿರಿಯರಿಗೂ ಅರ್ಥವಾಗುತ್ತಿಲ್ಲ. ಇಡೀ ದಕ್ಷಿಣ ಆಫ್ರಿಕಾವನ್ನೇ ಸುಟ್ಟು ಅದರ ಬೂದಿಯಲ್ಲೇ ಹೊಸದೊಂದನ್ನು ಸೃಷ್ಟಿಸುತ್ತೇವೆ, ಎಂದು ಯುವಕರು ಎಚ್ಚರಿಸುತ್ತಿದ್ದಾರೆ. ಇವರೆಲ್ಲ 1960ರಲ್ಲಿ ನಡೆದ ಶಾರ್ಪವಿಲೆ ದುರಂತದ ನಂತರ ಜನಿಸಿದವರು. ಶಾರ್ಪವಿಲೆ ದುರಂತ ಕರಿಯರ ಹೋರಾಟಕ್ಕೆ ಐತಿಹಾಸಿಕ ತಿರುವುಕೊಟ್ಟಿತು ಎಂಬುದಕ್ಕೆ ಇಂದಿನ ಪರಿಸ್ಥಿತಿ ಸಾಕ್ಷಿಯಾಗಿದೆ.

ಅಲ್ಲಿಯವರೆಗೆ ಅಹಿಂಸಾತ್ಮಕ ಹೋರಾಟದಲ್ಲಿ ನಂಬಿಕೆ ಇಟ್ಟುಕೊಂಡಿದ್ದ ಎ.ಎನ್.ಸಿ. ಸಶಸ್ತ್ರ ಹೋರಾಟಕ್ಕೆ ಕರೆ ನೀಡಿದಾಗ ಕರಿಯ ಹುಡುಗರಲ್ಲಿ ಹೊಸ ಚೈತನ್ಯ ಮೂಡಿತು.

ಕಪ್ಪು ಹುಡುಗರಲ್ಲಿ ಬಂದೂಕುಗಳಿಲ್ಲ ಆದರೆ ಅವರು ಬೀಸುವ ಕಲ್ಲಿನ ರಭಸಕ್ಕೆ ಬಿಳಿಯರ ಬಂದೂಕುಗಳು ನಡುಗುತ್ತಿವೆ. ಪೊಲೀಸರು ಮತ್ತು ಅವರ ಮಧ್ಯೆ ದೇಶಾದ್ಯಂತ ಅಸಂಖ್ಯ ಬೀದಿ ಕದನಗಳು ನಡೆದಿವೆ. ಆಡಳಿತ ಯಂತ್ರಕ್ಕೆ ನುಂಗಲಾರದ ತುತ್ತಾಗಿದ್ದಾರೆ. 'ಕರಿಯರ ವಿಮೋಚನೆ ಸಶಸ್ತ್ರ ಹೋರಾಟದ ಮೂಲಕ' ಎಂದು ನೆಚ್ಚಿನ ನಾಯಕ ನೆಲ್ಸನ್ ಮಂಡೇಲಾ ಹೇಳಿದ್ದು ಅವರ ಹೋರಾಟದ ಜೀವಾಳವಾಗಿದೆ.

ದಕ್ಷಿಣ ಆಫ್ರಿಕಾದ 12 ವರ್ಷದ ಕಪ್ಪು ಹುಡುಗರು ಮತ್ತು ಹುಡುಗಿಯರು ರಹಸ್ಯ ಸಭೆಗಳಿಗೆ ಹೋಗುತ್ತಾರೆ. ಅವರೇನು ಮಾಡುತ್ತಾರೆಂಬುದು ಅವರ ಮನೆಯವರಿಗೂ ಗೊತ್ತಾಗುತ್ತಿಲ್ಲ. 'ಮೊದಲು ನಾವು ಗುಪ್ತ

ಪೊಲೀಸರಿಗೆ ಹೆದರುತ್ತಿದ್ದೆವು. ಈಗ ನಮ್ಮ ಮಕ್ಕಳಿಗೇ ಹೆದರುವ ಕಾಲ ಬಂದಿದೆ' ಎಂದು ಕರಿಯ ಹಿರಿಯರನೇಕರು ಗೊಣಗುತ್ತಿದ್ದಾರೆ.

ಕಪ್ಪು ವಿದ್ಯಾರ್ಥಿಗಳು ರಚನಾತ್ಮಕವಾದ ಹೋರಾಟಕ್ಕೆ ಸಿದ್ಧರಾಗಿದ್ದಾರೆ. ಅವರ ರಹಸ್ಯ ಸಭೆಗಳಲ್ಲಿ ತಾತ್ವಿಕ ಚರ್ಚೆಗಳು ನಡೆಯುತ್ತಿವೆ. ವಿಮೋಚನೆ ಅವರ ಮೊದಲ ತತ್ವವಾಗಿದೆ. ಸಮಾನ ಪೌರತ್ವ, ಸಮಾನ ಶಿಕ್ಷಣ ಮತ್ತು ಎಲ್ಲಾ ಜನಾಂಗೀಯ ಕಾಯ್ದೆಗಳನ್ನು ಕಿತ್ತೊಗೆಯುವುದು ಅವರ ಗುರಿಯಾಗಿದೆ. 'ಈ ದೇಶದಲ್ಲಿ ವರ್ಣಭೇದ ನೀತಿಗೆ ಮತ್ತು ಬಂಡವಾಳಷಾಹಿ ವ್ಯವಸ್ಥೆಗೆ ಭವಿಷ್ಯವಿಲ್ಲ' ಎಂದು ಅವರು ಹೇಳುತ್ತಾರೆ. ಬಿಳಿಯರ ದಬ್ಬಾಳಿಕೆ ಹೆಚ್ಚಿದಂತೆಲ್ಲ ಇವರು ಶಕ್ತಿಶಾಲಿಗಳಾದರು. 'ದೇಶವಲ್ಲಿ ಆಡಳಿತ ನಡೆಯದಂತೆ ನೋಡಿಕೊಳ್ಳಿ' ಎಂದು ಎ.ಎನ್.ಸಿ. ಕರೆಕೊಟ್ಟ ರೀತಿಯಲ್ಲೇ ಈ ಯುವಕರು ಕಾರ್ಯೋನ್ಮುಖ ರಾಗಿದ್ದಾರೆ.

ಅವರ ದುಡುಕುತನದಿಂದಾಗಿ ಕೆಲವೊಂದು ಸಲ ಅನಾಹುತಗಳೂ ಆಗುತ್ತವೆ. ಡುಡುಜಾ ಉಪನಗರದಲ್ಲಿ 1985ನೇ ಜುಲೈ 20 ರಂದು ಕೆಲ ಕಪ್ಪುಯುವಕರ ಶವಗಳ ಮೆರವಣಿಗೆ ನಡೆದ ಸಂದರ್ಭದಲ್ಲಿ ಮಕಿ ಸ್ಕೋಸನಾ (24) ಎಂಬ ಕಪ್ಪು ಯುವತಿಯನ್ನು ಕೊಂದುಹಾಕಿದರು. ಆ ಗುಂಪು 'ಪೊಲೀಸರ ಗುಪ್ತಚಾರಿಣಿಯನ್ನು ಕೊಂದೆವು' ಎಂದು ಚೀರಾಡುತ್ತ ಕುಣಿ ಯುತ್ತಿದ್ದುದನ್ನು ಬೋಥಾ ಸರ್ಕಾರ ದೂರದರ್ಶನದಲ್ಲಿ ತೋರಿಸುವ ವ್ಯವಸ್ಥೆ ಮಾಡಿತು. ಅಂದೇ ತುರ್ತುಪರಿಸ್ಥಿತಿಯನ್ನು ಹೇರಿತು.

ಪರ್ಯಾಯವಿಲ್ಲ

1978ರಲ್ಲಿ ದಕ್ಷಿಣ ಆಫ್ರಿಕಾದ ಪ್ರಧಾನಮಂತ್ರಿಯಾಗಿ ಆಯ್ಕೆ ಆದ ಬೋಥಾ 1984ರ ಹೊಸ ಸಂವಿಧಾನದ ಪ್ರಕಾರ ಅಧ್ಯಕ್ಷರಾದರು. ಡರ್ಬನ್‌ನಲ್ಲಿ 1985ನೇ ಆಗಸ್ಟ್ 15 ರಂದು ತಮ್ಮ ನ್ಯಾಷನಲ್ ಪಕ್ಷದ ಸದಸ್ಯರನ್ನು ಉದ್ದೇಶಿಸಿ ಮಾತನಾಡುತ್ತ ವರ್ಣಭೇದ ನೀತಿಗೆ ಯಾವುದೇ ಪರ್ಯಾಯ ವಿಲ್ಲವೆಂದು ಘೋಷಿಸಿದರು. "ಎಲ್ಲ ಜನಾಂಗದವರಿಗೆ ಮತದಾನದ ಹಕ್ಕು ಸಿಕ್ಕರೆ ಒಬ್ಬರ ಮೇಲೆ ಒಬ್ಬರು ಪ್ರಭುತ್ವ ಸ್ಥಾಪಿಸಲು ಹೋಗಿ ಕೋಲಾಹಲ ಉಂಟಾಗುವುದು" ಎಂದು ವಾದಿಸಿದರು. ಭಾರತೀಯರು ಮತ್ತು ಮಿಶ್ರ

ವರ್ಣೀಯರಿಗಾಗಿ ರಚಿಸಿದಂಥ ಪ್ರತ್ಯೇಕ ಸಂಸತ್ ಅನ್ನು ಕೂಡ ಕರಿಯರಿಗಾಗಿ ರಚಿಸುವುದಿಲ್ಲ ಎಂದರು. ಅಂತೆಯೆ 'ಕ್ರಾಂತಿಗೆ ಪರ್ಯಾಯವಾಗುವಂಥದ್ದು ಯಾವುದೂ ಇಲ್ಲ' ಎಂಬ ಮಂಡೇಲಾ ಅವರ ನಿಲುವು ಕರಿಯರಿಗೆ ಸದಾ ಸ್ಫೂರ್ತಿ ನೀಡುತ್ತದೆ.

ಕರಿಯರನ್ನು ಬೇರೆಯಾಗಿಡಲು ಸರ್ಕಾರ ಇನ್ನೂರಕ್ಕೂ ಹೆಚ್ಚು ಕಾಯ್ದೆಗಳನ್ನು ಜಾರಿಗೆ ತಂದಿದೆ. ಈ ಅಮಾನವೀಯ ವರ್ಣಭೇದ ನೀತಿಯನ್ನು ಇಡೀ ವಿಶ್ವವೇ ನಿಂದಿಸಿ ಅದನ್ನು ಕೊನೆಗಾಣಿಸಲು ಕರೆ ನೀಡಿದೆ. ವಿಶ್ವದಾದ್ಯಂತ ವರ್ಣಭೇದ ನೀತಿಯನ್ನು ವಿರೋಧಿಸಿ ಪ್ರದರ್ಶನಗಳು ನಡೆದಿದೆ.

ವಿಶ್ವಸಂಸ್ಥೆಯ ಜನರಲ್ ಅಸೆಂಬ್ಲಿ 1946ರಿಂದಲೂ ವರ್ಣಭೇದ ನೀತಿಯನ್ನು ವಿರೋಧಿಸುತ್ತಲೇ ಬಂದಿದೆ. ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರಗಳು ದಕ್ಷಿಣ ಆಫ್ರಿಕಾದೊಂದಿಗೆ ವ್ಯವಹರಿಸುವಂತಿಲ್ಲ ಆದರೂ ಪಶ್ಚಿಮ ಜರ್ಮನಿ, ಫ್ರಾನ್ಸ್, ಜಪಾನ್, ಇಟಲಿ, ಇಂಗ್ಲೆಂಡ್ ಮತ್ತು ಅಮೆರಿಕದಂಥ ದೇಶಗಳು ಈ ನಿಯಮವನ್ನು ಮುರಿಯುತ್ತಲೇ ಇವೆ.

ದಕ್ಷಿಣ ಆಫ್ರಿಕಾದೊಂದಿಗೆ ಯಾವುದೇ ರೀತಿಯ ಸಂಬಂಧ ಇಟ್ಟುಕೊಳ್ಳಬಾರದು ಎಂದು ಹೇಳಿರುವ ಭಾರತ ಮೊದಲಿನಿಂದಲೂ ಸಂಬಂಧ ಕಡಿದುಕೊಂಡಿದೆ.

ದಕ್ಷಿಣ ಆಫ್ರಿಕಾದ ಅಮಾನವೀಯ ನೀತಿಯನ್ನು ಅಲ್ಲಿನ ಅನೇಕ ಬಿಳಿಯರು ವಿರೋಧಿಸಿದ್ದಾರೆ. ಸಂಸದೀಯ ವಿರೋಧ ಪಕ್ಷದ ಪ್ರೊಗ್ರೆಸಿವ್ ಫೆಡರಲ್ ಪಾರ್ಟಿ ವರ್ಣಭೇದ ನೀತಿಯನ್ನು ವಿರೋಧಿಸಿದೆ. ಅನೇಕ ಆಫ್ರಿಕಾನರ್‌ಗಳು ಡಚ್ ರಿಫಾರ್ಮ್ಡ್ ಚರ್ಚಿನ ಸದಸ್ಯರಾಗಿದ್ದಾರೆ. 1982ರಲ್ಲಿ ವರ್ಲ್ಡ್ ಅಲಯೆನ್ಸ್ ಆಫ್ ರಿಫಾರ್ಮ್ಡ್ ಚರ್ಚ್‌ಸ್ ಬಿಳಿಯರ ಸೌತ್ ಆಫ್ರಿಕನ್ ಚರ್ಚ್ ಅನ್ನು ಸಸ್ಪೆಂಡ್ ಮಾಡಿತು. ವರ್ಣಭೇದ ನೀತಿ ಧರ್ಮ ವಿರೋಧಿ ಎಂದು ಸಾರಿತು.

ಸಹಸ್ರಾರು ಬಿಳಿಯ ಯುವಕರು ಅಪಾರ್ಥೈಡ್ ನೀತಿಯ ವಿರುದ್ಧ ಪ್ರತಿಭಟಿಸಿದ್ದಾರೆ. ಕರಿಯರಿಗಾಗಿ ಹೋರಾಡುವ ಬಿಳಿಯ ಯುವಕರನ್ನು ಹತೋಟಿಗೆ ತರಲು ಪೊಲೀಸರು ಅಶ್ರುವಾಯು, ಚಾವಟಿ ಮತ್ತು ನಾಯಿಗಳನ್ನು ಬಳಸುತ್ತಾರೆ.

ನೆಲ್ಸನ್ ಮಂಡೇಲಾ/೫೯

ದಕ್ಷಿಣ ಆಫ್ರಿಕಾದಲ್ಲಿ ಬಂಡವಾಳ ಹೂಡಿರುವ ದೇಶಗಳು ಕೂಡ ಅಲ್ಲಿ ಸುಧಾರಣೆ ಬಯಸುತ್ತವೆ. ಏಕೆಂದರೆ ಅವುಗಳಿಗೆ ತಾವು ಹೂಡಿರುವ ಬಂಡವಾಳದ ಚಿಂತೆಯಾಗಿದೆ.

ರೇಗನ್ ಅಮೇರಿಕದ ಅಧ್ಯಕ್ಷರಾಗಿದ್ದಾಗ ಅಮೆರಿಕನ್ ಕಾಂಗ್ರೆಸ್ ಒತ್ತಾಯಕ್ಕೆ ಮಣಿದು ದಕ್ಷಿಣ ಆಫ್ರಿಕಾಕ್ಕೆ ಆರ್ಥಿಕ ನಿರ್ಬಂಧ ಹಾಕುವ ನಿರ್ಣಯ ಕೈಗೊಂಡರು. ಆದರೆ ಆಗ ಅವರು ದಕ್ಷಿಣ ಆಫ್ರಿಕಾಕ್ಕೆ ಕೊಟ್ಟಿರುವ 'ಕನ್‌ಸ್ಟ್ರಕ್ಟಿವ್ ಎಂಗೇಜ್‌ಮೆಂಟ್' ಕಾರ್ಯಕ್ರಮ ಬಾಲಿಶವಾಗಿತ್ತು. ಇದು ದಕ್ಷಿಣ ಆಫ್ರಿಕಾ ಸರ್ಕಾರದ ಮನವೊಲಿಸುವ ವಿಧಾನವಂತೆ. ಹಂತ ಹಂತವಾಗಿ ವರ್ಣಭೇದ ನೀತಿಯನ್ನು ಕೈಬಿಡಬೇಕೆಂದು ಸರ್ಕಾರವನ್ನು ಆತ್ಮೀಯವಾಗಿ ಒತ್ತಾಯಿಸಬೇಕಂತೆ ! ರೇಗನ್ ವಿಚಾರಧಾರೆಯ ಮೂಲಕ ವರ್ಣಭೇದ ನೀತಿ ಅಳಿದುಹೋಗಬೇಕಾದರೆ ಶತಮಾನಗಳೇ ಕಳೆಯಬೇಕು. ಕರಿಯರ ಭಾವನೆಗಳ ಜೊತೆ ಆಡುವ ಆಟ ಇದು. ಇದನ್ನು ಟೀಕಿಸಿರುವ ಬಿಷಪ್ ಡೆಸ್ಮಂಡ್ ಟುಟು ಹೇಳಿದರು 'ನಮಗೆ ಅಷ್ಟೊಂದು ಆಯುಸ್ಸು ಇಲ್ಲ'

ಬುಥಲೆಜಿ

ಎಲ್ಲ ಕರಿಯರು ಒಂದಾಗಿದ್ದರೆ ಬಹುಶಃ ಈ ವೇಳೆಗೆ ಬಿಳಿಯರ ಅಪಾರ್ಥೈಡ್ ನಾಶವಾಗಿ ದಕ್ಷಿಣ ಆಫ್ರಿಕಾದಲ್ಲಿ ಪ್ರಜಾಪ್ರಭುತ್ವ ನೆಲೆಗೊಳ್ಳುತ್ತಿತ್ತು. ಆದರೆ ಎಲ್ಲ ಕರಿಯರು ಒಂದಾಗದಂತೆ ಬಿಳಿಯರು ನೋಡಿಕೊಂಡು ಬಂದಿದ್ದಾರೆ.

ಕ್ವಾಜುಲು ಬಂಟುಸ್ತಾನದ ನಾಯಕ ಮುಂಗೊಸುಥು ಗಟ್‌ಷಾ ಬುಥಲೆಜಿಗೆ ಬಿಳಿಯರ ಜೊತೆ ಅಧಿಕಾರ ಹಂಚಿಕೊಳ್ಳುವ ಆಸೆ. ಕರಿಯರು ತಿರಸ್ಕರಿಸುವ, ವರ್ಣಭೇದ ನೀತಿಯ ಅಡಿಗಲ್ಲಾಗಿರುವ ಬಂಟುಸ್ತಾನ್ ವ್ಯವಸ್ಥೆಯನ್ನು ಇವರು ಬೆಂಬಲಿಸುತ್ತಾರೆ. ಈ ವ್ಯವಸ್ಥೆಯಿಂದಾಗಿ ಕರಿಯರು ತಮ್ಮ ಬುಡಕಟ್ಟುಗಳಿಗೆ ಮೀಸಲಾದ ಪ್ರದೇಶಗಳಲ್ಲಿ ಮಾತ್ರ ವಾಸ ಮಾಡಬೇಕು. ಇತರ ಬುಡಕಟ್ಟುಗಳೊಂದಿಗೆ ಸಂಪರ್ಕವಿಟ್ಟುಕೊಳ್ಳಬಾರದು. ಬುಥಲೆಜಿ ಜುಲು ರಾಜಮನೆತನಕ್ಕೆ ಸೇರಿರುವುದರಿಂದ ಜುಲುಗಳು ಆತನಿಗೆ ಗೌರವ ಕೊಡುತ್ತಾರೆ. ಬಿಳಿಯರೊಂದಿಗೆ ಅಧಿಕಾರ ಹಂಚಿಕೊಂಡರೆ ತನಗೆ

ಇಷ್ಟಷ್ಟು ಲಾಭವಿದೆ ಎಂಬುದೇ ಬುಥಲೆಜಿ ಹಂಚಿಕೆ 'ಆತ ವ್ಯವಸ್ಥೆಯ ಚಾಲಂಗೋಚಿ' ಎಂದು ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ ಮತ್ತು ಇತರ ಪಕ್ಷಗಳ ನಾಯಕರು ಟೀಕಿಸುತ್ತಾರೆ.

ದಕ್ಷಿಣ ಆಫ್ರಿಕಾದಲ್ಲಿ ಒಟ್ಟು 60 ಲಕ್ಷ ಜುಲುಗಳಿದ್ದಾರೆ. ಅವರಲ್ಲಿ 47 ಲಕ್ಷ ಮಂದಿ ನತಾಲ್ ಪ್ರಾಂತದಲ್ಲಿ ಇದ್ದಾರೆ. ಸರ್ಕಾರದಿಂದ ಬೆಂಬಲ ಪಡೆಯುವ ಬುಥಲೆಜಿ ಇತರ ದೇಶಗಳು ದಕ್ಷಿಣ ಆಫ್ರಿಕಾದ ಮೇಲೆ ಆರ್ಥಿಕ ದಿಗ್ಬಂಧನ ಹಾಕುವುದನ್ನು ವಿರೋಧಿಸುತ್ತಾರೆ. 'ಇದರಿಂದ ಕರಿಯರಿಗೇ ಹಾನಿ' ಎಂಬುದು ಅವರ ವಾದ.

ದಕ್ಷಿಣ ಆಫ್ರಿಕಾದ ಬಿಳಿಯರಿಗೆ ಭಾರತೀಯರ ಬಗ್ಗೆ ಒಲವೇನೂ ಇಲ್ಲ. ಕರಿಯರಿಗಿಂತ ಇವರನ್ನು ಒಂದು ಮೆಟ್ಟಿಲು ಮೇಲೆ ಕೂಡಿಸಿರಬಹುದು. ಆದರೆ ಆ ಮೂಲಕ ಭಾರತೀಯರು ಮತ್ತು ಕರಿಯರು ಒಂದಾಗುವುದಕ್ಕೆ ಅಡ್ಡಗಾಲು ಹಾಕುತ್ತಲೇ ಇರುತ್ತಾರೆ.

ಭಾರತೀಯರ ಆಗಮನದಿಂದ ಜುಲು ಕರಿಯರು ತಮ್ಮ ಕೆಲಸಗಳನ್ನು ಕಳೆದುಕೊಂಡ ಕಾರಣ ಕರಿಯರು ಮತ್ತು ಭಾರತೀಯರ ಮಧ್ಯೆ ಪ್ರಾರಂಭವಾದ ಹಗೆತನ ವಿವಿಧ ರೂಪಗಳಿಂದ ಮುಂದುವರಿದಿದೆ.

ಭಾರತೀಯ ವ್ಯಾಪಾರಿಗಳು ಕರಿಯರನ್ನು ಸುಲಿಗೆ ಮಾಡಿದ್ದಾರೆ. ಅಲ್ಲದೆ ಅವರು ತಮ್ಮದೇ ಆದ ಸನಾತನ ಶೈಲಿಯ ವರ್ಣಭೇದ ನೀತಿಯನ್ನು ಪಾಲಿಸುತ್ತಾರೆ. ವರ್ಷಗಳು ಕಳೆದಂತೆ ಮಹತ್ವಾಕಾಂಕ್ಷಿಗಳಾದ ಶ್ರೀಮಂತ ಭಾರತೀಯರು ಕರಿಯರ ಹೆಗಲಿಗೆ ಹೆಗಲು ಹಚ್ಚಿ ನಡೆಯುವುದಕ್ಕಿಂತ ಬಿಳಿಯರ ನೆರಳಲ್ಲಿ ಮುಂದುವರಿಯ ಬಯಸುತ್ತಾರೆ.

ಇಂದು ಅನೇಕ ಶ್ರೀಮಂತ ಭಾರತೀಯರ ಬಳಿ ಕರಿಯರು ಕೂಲಿಯಾಳುಗಳಾಗಿದ್ದಾರೆ. ಈ ಕೂಲಿಗಳನ್ನು ಅವರು ಛಾವಟಿಯಿಂದ ಹೊಡೆಯುತ್ತಾರೆ. ಕಡಿಮೆ ಕೂಲಿ ಕೊಟ್ಟು ತುಚ್ಛವಾಗಿ ಕಾಣುತ್ತಾರೆ. ಅನೇಕ ಶ್ರೀಮಂತ ಭಾರತೀಯರು ಬಿಳಿಯರಷ್ಟೇ ಕೆಟ್ಟವರು ಎಂಬ ಭಾವನೆ ಅನೇಕ ಕಪ್ಪು ಜನರಲ್ಲಿ ಉಂಟಾಗಿದೆ.

ಈ ಸನ್ನಿವೇಶವನ್ನು ಬಳಸಿಕೊಂಡ ಸರ್ಕಾರ ಬಾಡಿಗೆ ಬಂಟರಿಂದ ಗಾಂಧೀಜಿಯವರ ಫೀನಿಕ್ಸ್ ಆಶ್ರಮದ ಮೇಲೆ ಮುತ್ತಿಗೆ ಹಾಕಿಸಿ ಭಾರತೀಯರ ಮೇಲೆ ಹಲ್ಲೆ ಮಾಡಿಸಿತು. ಇದು ಕರಿಯರ ಕೃತ್ಯ ಎಂದು ಪ್ರಚಾರ ಮಾಡಿ ಭಾರತೀಯರ ಅನುಕಂಪ ಗಳಿಸಲು ಯತ್ನಿಸಿತು.

ಶಾಂತಿ ಮತ್ತು ಅಹಿಂಸಾತ್ಮಕ ಹೋರಾಟದ ಹಿನ್ನೆಲೆಯಿರುವ, ಮಾನವ ಪ್ರೇಮದ ದ್ಯೋತಕವಾಗಿರುವ ಫಿನೀಕ್ಸ್ ಆಶ್ರಮ 1985ರ ಆಗಸ್ಟ್‌ನಲ್ಲಿ ಅಗ್ನಿಗಾಹುತಿಯಾಯಿತು. ಅದು ಜನಾಂಗ ದ್ವೇಷದ ಭಯಂಕರ ದೃಶ್ಯವಾಗಿತ್ತೆಂದು ಪ್ರತ್ಯಕ್ಷದರ್ಶಿಯೊಬ್ಬರು ತಿಳಿಸಿದ್ದಾರೆ. ಸುಮಾರು 500 ಮಂದಿ ಕರಿಯರು ಮುತ್ತಿಗೆ ಹಾಕಿದರು. ರಸ್ತೆಯ ಆಚೆ–ಈಚೆ ನಿಂತು ಕೂಗಾಡುತ್ತಿದ್ದ ಕರಿಯರು ಮತ್ತು ಭಾರತೀಯರ ಕೈಯಲ್ಲಿ ಮಚ್ಚು ಹಾಗೂ ಚೂರಿಗಳಿದ್ದವು ಎಂದು ಅವರು ವಿವರಿಸಿದ್ದಾರೆ.

ಅಲ್ಲಿಯವರೆಗೆ ಟ್ರಾನ್ಸ್‌ವಾಲ್ ಮತ್ತು ಕೇಪ್‌ಗಳಿಗೆ ಸೀಮಿತವಾಗಿದ್ದ ಹಿಂಸೆ ಯುನೈಟೆಡ್ ಡೆಮೊಕ್ರಟಿಕ್ ಫ್ರಂಟ್ (ಯು.ಡಿ.ಎಫ್)ನ ಕಪ್ಪು ಲಾಯರ್ ವಿಕ್ಟೋರಿಯಾ ಮಾಕ್ಸ್‌ನೊಯ್‌ಯ ಕೊಲೆಯ ನಂತರ ಕರಾವಳಿ ನಗರವಾದ ಡರ್ಬಾನ್‌ಗೂ ಹಬ್ಬಿತು. ಸರ್ಕಾರಿ ಕೊಲೆಗಡುಕರು ಆಕೆಯನ್ನು ಕೊಂದಿದ್ದರು. ಎರಡು ವರ್ಷಗಳ ಹಿಂದೆ ಸರ್ಕಾರ ಇದೇ ರೀತಿ ಆಕೆಯ ಗಂಡನ ಕೊಲೆ ಮಾಡಿಸಿತ್ತು.

ಕಪ್ಪು ಜನರನ್ನು ಇನ್ನೂ ಹೆಚ್ಚಿನ ತುಳಿತಕ್ಕೀಡಾಗುವಂತೆ ಮಾಡುವ ಹೊಸ ಸಂವಿಧಾನದ ರಚನೆಯಾದ ಮೇಲೆ ಯು.ಡಿ.ಎಫ್. ಪ್ರಬಲವಾದ ಪ್ರತಿಭಟನಾ ಚಳವಳಿಗಳನ್ನು ಪ್ರಾರಂಭಿಸಿತು. ಫೀನಿಕ್ಸ್ ಆಶ್ರಮ ಯು.ಡಿ.ಎಫ್. ಚಟುವಟಿಕೆಗಳಿಗೆ ಆಶ್ರಯ ನೀಡಿತ್ತು. 1918ರಲ್ಲಿ ಗಾಂಧೀಜಿ ಅವರು ತಮ್ಮ ಮಗ ಮಣಿಲಾಲ್ ಗಾಂಧಿ ಅವರನ್ನು ಆಶ್ರಮ ನೋಡಿಕೊಳ್ಳಲು ಕಳಿಸಿದಾಗ 'ಅದು ಬಿಳಿಯರಲ್ಲದವರ ಕಾರ್ಯಚಟುವಟಿಕೆಗಳ ಕೇಂದ್ರವಾಗಬೇಕು.' ಎಂದು ಆಶಿಸಿದರು. ಮಣಿಲಾಲ್ ಜೀವನಪರ್ಯಂತ (19:6) ಅಲ್ಲೇ ಇದ್ದರು. ಅವರ ಪತ್ನಿ ಸುಶೀಲಾ ಗಾಂಧಿ 1981ರವರೆಗೆ ನೋಡಿಕೊಂಡರು. 1961ರಲ್ಲಿ ಮಣಿಲಾಲ್ ಅವರ ಮಗಳು ಇಳಾಅವರ ಜೊತೆ ಮೇವಾ ರಾಮ್

ಗೋಬಿನ್‌ರ ಮದುವೆ ಆಯಿತು. ಇಳಾ ಮತ್ತು ಮೇವಾ ರಾಜಕೀಯ ಚಟು ವಟಿಕೆಗಳಲ್ಲಿ ಭಾಗವಹಿಸಲು ಪ್ರಾರಂಭಿಸಿದ್ದರಿಂದ ಫೀನಿಕ್ಸ್ ಆಶ್ರಮ ರಾಜ ಕೀಯ ಚಟುವಟಿಕೆಗಳ ಕೇಂದ್ರವಾಯಿತು. ರಾಮ್‌ಗೋಬಿನ್ ಫೀನಿಕ್ಸ್ ಆಶ್ರಮದ ಕಾರ್ಯದರ್ಶಿಗಳಾಗಿದ್ದಾರೆ. ಅಲ್ಲದೆ ಯು.ಡಿ.ಎಫ್. ನಾಯಕರು ಗಳಲ್ಲೊಬ್ಬರಾಗಿದ್ದಾರೆ. ಇಂದು ಯು.ಡಿ.ಎಫ್. ಕರಿಯರನ್ನೂ, ಭಾರತೀ ಯರನ್ನು ಮತ್ತು ಮಿಶ್ರವರ್ಣೀಯರನ್ನು ಹಿಂದೆಂದಿಗಿಂತಲೂ ಹೆಚ್ಚು ಹತ್ತಿರಕ್ಕೆ ತಂದಿದೆ. ಬೋಥಾ ಸರ್ಕಾರವಿದ್ದಾಗ ಅವರ ಮೇಲೆ ರಾಜದ್ರೋಹದ ಆಪಾ ದನೆ ಹೊರಿಸಲಾಯಿತು.

ಫೀನಿಕ್ಸ್ ಆಶ್ರಮ ಸುಟ್ಟ ವೇಳೆ ಅಲ್ಲಿ 20 ಭಾರತೀಯ ಕುಟುಂಬ ಗಳು ಮತ್ತು 40 ಕರಿಯರ ಕುಟುಂಬಗಳು ವಾಸವಾಗಿದ್ದವು.

ಸೊವೆಟೊ ಪ್ರತಿಭಟನೆ

ಈ ಎಲ್ಲ ಅಲ್ಲೋಲ ಕಲ್ಲೋಲದ ಹಿಂದೆ ಶಾರ್ಪವಿಲ್ಲೆ ದುರಂತದ ನೋವಿನಷ್ಟೇ ಸೊವೆಟೊದಲ್ಲಿ 197೬ನೇ ಜೂನ್ 16 ರಂದು ಜನ ಮತ್ತು ವಿದ್ಯಾರ್ಥಿಗಳು ಪ್ರತಿಭಟಿಸಿದ ಘಟನೆ ಕೂಡ ಮಹತ್ವದ್ದಾಗಿದೆ.

ಡಚ್ ಬಿಳಿಯರ ಆಫ್ರಿಕಾನ್ ಭಾಷೆಯನ್ನು ಶಿಕ್ಷಣದ ಮಾಧ್ಯಮವಾಗಿ ಮಾಡಲಾಯಿತು. ಕರಿಯ ಮಕ್ಕಳು ತಮ್ಮ ಮಾತೃಭಾಷೆಯನ್ನು ಕಲಿ ಯುವ ಬದಲು ಬಿಳಿಯರ ಮಾತೃಭಾಷೆ ಕಲಿಯುವಂಥ ಪರಿಸ್ಥಿತಿ ಉಂಟಾ ಯಿತು. ಕರಿಯರ ಸಾಂಸ್ಕೃತಿಕ ಬದುಕಿನ ಮೇಲೆ ಕೂಡ ಇದು ಗದಾಪ್ರಹಾರ ವಾಗಿತ್ತು. ಇದನ್ನು ವಿರೋಧಿಸಿದ ಕರಿಯ ವಿದ್ಯಾರ್ಥಿಗಳು ಆ ದಿನ ಬೆಳಿಗ್ಗೆ ಪ್ರತಿಭಟನಾ ಮೆರವಣಿಗೆ ಹೊರಡಿಸಲು ಸೊವೆಟೊದಲ್ಲಿ ಸೇರಿದರು. ಆಗ ಪೊಲೀಸರು ಅವರ ಮೇಲೆ ಗುಂಡು ಹಾರಿಸಿದರು. ಹುಡುಗರು ಕಲ್ಲು ಬೀಸಿ ದರು. ಹೆಕ್ಟರ್ ಪೀಟರ್ ಸನ್ (13) ಎಂಬ ಕರಿಯ ಬಾಲಕ ಈ ಸಂದರ್ಭ ದಲ್ಲಿ ಗುಂಡಿಗೆ ಆಹುತಿಯಾದ. ಅನೇಕರು ಗಾಯಗೊಂಡರು. ಈ ಗದ್ದಲ ದಲ್ಲಿ ಇಬ್ಬರು ಬಿಳಿಯರು ಕಪ್ಪು ಹುಡುಗರ ಕಲ್ಲಿಗೆ ಆಹುತಿಯಾದರು. ಶಾಲಾ ಮಕ್ಕಳ ವಿರುದ್ಧ ಸರ್ಕಾರ 'ಯುದ್ಧ' ಸಾರಿತು. ಸಾವು-ನೋವುಗಳು ಹೆಚ್ಚಿ

ದಂತೆಲ್ಲ ದೇಶಾದ್ಯಂತ ಕರಿಯರು ಘರ್ಷಣೆಗೆ ಇಳಿದರು. ಹತ್ತಾರು ಸಹಸ್ರ ಕರಿಯ ಮಕ್ಕಳು ಶಾಲೆಗಳನ್ನು ಬಹಿಷ್ಕರಿಸಿ ಬೀದಿಗಿಳಿದರು. ಯಾರಿಗೂ ಜಗ್ಗದ ಬಿಳಿಯ ಸರ್ಕಾರ ನಡುಗಿತು. 16 ತಿಂಗಳ ಅವಧಿಯಲ್ಲಿ ನಡೆದ ಘರ್ಷಣೆಗಳಲ್ಲಿ 600 ಕರಿಯರು ಸತ್ತರೆಂದು ಸರ್ಕಾರ ತಿಳಿಸಿತು. ಒಂದು ಸಾವಿರದಷ್ಟು ಜನ ಸತ್ತರೆಂದು ಅಂದಾಜು ಮಾಡಲಾಗಿದೆ. ಈ ಘರ್ಷಣೆಗಳಲ್ಲಿ 4000 ಮಂದಿ ಕರಿಯರು ಗಾಯಗೊಂಡರು. ಸಹಸ್ರಾರು ಕರಿಯರನ್ನು ಜೈಲಿಗೆ ಅಟ್ಟಲಾಯಿತು.

ಈ ಘಟನೆ ಕರಿಯ ಯುವಕರಿಗೆ ಹೋರಾಟದ ಹೊಸ ದಾರಿಯನ್ನು ತೋರಿಸಿಕೊಟ್ಟಿತು. ಸಾವು–ಬದುಕಿನ ಮಧ್ಯದ ಗೆರೆಯನ್ನು ತೆಗೆದುಹಾಕಿತು. ತಮ್ಮ ಶಿಕ್ಷಣ 'ಉಮ್ ಖೋಂಟೆ ವೆ ಸಿಜ್ವೆ'ಯಲ್ಲಿ ಎಂದು ಯುವಕರು ಭಾವಿಸಿದರು. ಶಿಕ್ಷಣ ಮತ್ತು ಹೋರಾಟ ಜತೆ ಜತೆಯಾಗಿ ಸಾಗಬೇಕೆಂಬ ಭಾವನೆ ಅವರಲ್ಲಿ ಮೂಡಿತು. ಸೊವೆಟೊ ಬಂಡಾಯದಿಂದ ಅಪಾರ್ಥೈಡ್ ವ್ಯವಸ್ಥೆಯಲ್ಲಿ ಬಿರುಕುಗಳು ಕಾಣತೊಡಗಿದವು. ಪಾಶವೀ ಸರ್ಕಾರ ಅನಿವಾರ್ಯವಾಗಿ ಬದುಕಿನ ಎಲ್ಲ ರಂಗದಲ್ಲಿ ಎಚ್ಚರಿಕೆಯಿಂದ ವರ್ತಿಸಲು ಪ್ರಾರಂಭಿಸಿತು. ಗಂಡಾಂತರ ಪರಿಸ್ಥಿತಿಯನ್ನು ಸದಾ ಎದುರಿಸುವುದರಿಂದ ದೇಶದ ಆರ್ಥಿಕ ಪರಿಸ್ಥಿತಿ ಮತ್ತು ಬಿಳಿಯರ ಬದುಕಿನ ಮೇಲೆ ದುಷ್ಪರಿಣಾಮ ಉಂಟಾಗುವುದರ ಬಗ್ಗೆ ಅದಕ್ಕೆ ಪ್ರಜ್ಞೆ ಇತ್ತು.

ಬದಲಾದ ಪರಿಸ್ಥಿತಿ

ಮಂಡೇಲಾ ಅವರು ರಾಜಕೀಯ ಕೈದಿ ಆದರೂ ಕಠಿಣ ಶ್ರಮದ ಶಿಕ್ಷೆ ವಿಧಿಸಲಾಗಿತ್ತು. ರಾಜಕೀಯ ಕೈದಿಗಳ ಸ್ಥಾನಮಾನಕ್ಕಾಗಿ ಅವರು ಜೈಲಿನಲ್ಲೇ ಪ್ರತಿಭಟನೆ ಮಾಡುತ್ತಿದ್ದರು. ಸೊವೆಟೊ ಘಟನೆಯಿಂದಾಗಿ ಜೈಲು ವ್ಯವಸ್ಥೆಯಲ್ಲಿ ಕೂಡ ಅಲ್ಪಸ್ವಲ್ಪ ಬದಲಾವಣೆಗಳಾದವು.

1982ರ ಜುಲೈನಲ್ಲಿ ಮಂಡೇಲಾ ಮತ್ತು ಅವರ ಸಂಗಾತಿಗಳನ್ನು ಅನಿರೀಕ್ಷಿತವಾಗಿ ಕೇಪ್‌ಟೌನ್ ಹೊರಗಡೆ ಇರುವ ಪೋಲ್ಸ್‌ಮೂರ್ ಜೈಲಿಗೆ ಕಳಿಸಲಾಯಿತು. ರಾಬ್ಬಿನ್ ನಡುಗಡ್ಡೆ ಜೈಲಿಗೆ ಜನ ಅಭಿಮಾನದಿಂದ ಮಂಡೇಲಾ ವಿಶ್ವವಿದ್ಯಾನಿಲಯ ಎಂದು ಕರೆಯುತ್ತಾರೆ. ಅಲ್ಲಿ ಬರುವ ಅನೇಕ

ಯುವಕೈದಿಗಳು ಶಿಕ್ಷಣವನ್ನು ಮುಂದುವರಿಸಿ ಪದವಿ ಪಡೆಯುವಂತೆ ಮಂಡೇಲಾ ಮಾರ್ಗದರ್ಶನ ನೀಡುತ್ತಿದ್ದರು. ಮಂಡೇಲಾ ಅವರು ದಕ್ಷಿಣ ಆಫ್ರಿಕಾ ರೇಡಿಯೋ ಕೇಳುವುದರ ಮೂಲಕ ಮತ್ತು ದಿನಪತ್ರಿಕೆಗಳನ್ನು ಓದುವುದರ ಮೂಲಕ ವಿಶ್ವದ ದೈನಂದಿನ ವ್ಯವಹಾರಗಳ ಬಗ್ಗೆ ತಿಳಿದುಕೊಳ್ಳುವುದರ ಬಗ್ಗೆ ವಿಶೇಷ ಆಸಕ್ತಿ ವಹಿಸಿದರು.

ಸರ್ಕಾರಕ್ಕೆ ಅವರ ಚೈತನ್ಯವನ್ನು ಬಂಧಿಸಲಿಕ್ಕಾಗಲಿಲ್ಲ. ತಮ್ಮ ಸಂದೇಶಗಳನ್ನು ಸಂಗಾತಿಗಳಿಗೆ ತಲುಪಿಸುವಲ್ಲಿ ಅವರು ಯಶಸ್ವಿ ಆದರು.

ಸಶಸ್ತ್ರ ಹೋರಾಟದ ವಿಚಾರವನ್ನು ಕೈ ಬಿಟ್ಟು ಟ್ರಾನ್ಸ್‌ಕೆಯಿ ಬಂಟುಸ್ತಾನದಲ್ಲಿ ವಾಸಿಸಲು ಸಿದ್ಧವಾದರೆ ಬಿಡುಗಡೆ ಮಾಡುವೆವು ಎಂದು ಅಂದಿನ ಅಧ್ಯಕ್ಷ ಪಿ. ಡಬ್ಲ್ಯೂ. ಬೋಥಾ 1985ನೇ ಜನವರಿ 31 ರಂದು ಘೋಷಿಸಿದರು. ಮಂಡೇಲಾ ಅದಕ್ಕೆ ಉತ್ತರವಾಗಿ ಜನರನ್ನು ಉದ್ದೇಶಿಸಿ ಹೇಳಿಕೆ ನೀಡಿದರು. ಮಗಳು ಜಂಜಿ ಸೊವೆಟೊದಲ್ಲಿ ಆ ಹೇಳಿಕೆಯನ್ನು ಓದಿದಳು. "I can not and will not give any undertaking at a time when I and you, the people are not free. Your freedom and mine can not be separated. I will return" ಎಂದು ಆ ಹೇಳಿಕೆ ಕೊನೆಗೊಳ್ಳುತ್ತದೆ.

ಬೋಥಾ ಷರತ್ತಿನ ಬಿಡುಗಡೆಯ ಘೋಷಣೆ ಮಾಡುವ ಸ್ವಲ್ಪ ದಿನ ಮೊದಲು ಬ್ರಿಟಿಷ್ ಪಾರ್ಲಿಮೆಂಟ್ ಸದಸ್ಯ ಲಾರ್ಡ್ ನಿಕೊಲಸ್ ಬೆಥೆಲ್ ಪೋಲ್ಸ್‌ಮೂರ್ ಜೈಲಿನಲ್ಲಿ ಮಂಡೇಲಾ ಅವರನ್ನು ಭೇಟಿ ಮಾಡಲು ಅವಕಾಶ ಸಿಕ್ಕಿತ್ತು. ಅದಕ್ಕೆ ಮೊದಲು ಅಮೆರಿಕದ ಸೆನೆಟರ್ ಎಡ್ವರ್ಡ್ ಕೆನಡಿಗೆ ಕೂಡ ಅವಕಾಶ ನೀಡಿರಲಿಲ್ಲ. ಕೆನೆಡಿ 1985ರ ಜನವರಿಯಲ್ಲಿ ದಕ್ಷಿಣ ಆಫ್ರಿಕಾಗೆ ಹೋದಾಗ ವಿನ್ನಿ ಮಂಡೇಲಾ ಅವರ ಮನೆಗೆ ಹೋಗಿ ಭೇಟಿ ಮಾಡಿದ್ದರು.

"ಸರ್ಕಾರ ನಮ್ಮ ಮೇಲೆ ಸಶಸ್ತ್ರ ಹೋರಾಟ ಹೇರಿದೆ ಅದನ್ನು ನಾವು ತ್ಯಜಿಸಬೇಕೆಂದು ಸರ್ಕಾರ ಬಯಸಿದರೆ ಮೊದಲಿಗೆ ಅವರು ಪ್ರಯತ್ನಿಸಬೇಕು. ನಮ್ಮ ಪಕ್ಷಕ್ಕೆ ಕಾಯ್ದೆ ಬದ್ಧ ಅಂತಸ್ತನ್ನು ಮಾನ್ಯ ಮಾಡಬೇಕು. ನಮ್ಮದು ರಾಜಕೀಯ ಪಕ್ಷ ಎಂದು ಪರಿಗಣಿಸಬೇಕು. ನಮ್ಮೊಡನೆ ಒಪ್ಪಂದಕ್ಕೆ

ಬರಬೇಕು ಅವರು ಹೀಗೆ ಮಾಡುವವರೆಗೆ ನಾವು ಸಶಸ್ತ್ರ ಹೋರಾಟವನ್ನು ಮುಂದುವರಿಸಬೇಕಾಗಿದೆ" ಎಂದು ಮಂಡೇಲಾ ಅವರು ಜೈಲಿನಲ್ಲಿ ಭೇಟಿಯಾದ ಲಾರ್ಡ್ ಬೆಥೆಲ್‌ಗೆ ತಿಳಿಸಿದರು.

ಬಿಳಿಯರೇ ಆಫ್ರಿಕಾದಿಂದ ತೊಲಗಿರಿ ಎಂದು ಮಂಡೇಲಾ ಎಂದೂ ಘೋಷಿಸಿಲ್ಲ. ಅಲ್ಲಿ ವಾಸಿಸುವ ಕರಿಯರು, ಬಿಳಿಯರು ಮತ್ತು ಎಲ್ಲರಿಗೂ ದಕ್ಷಿಣ ಆಫ್ರಿಕಾ ಸೇರಿದೆ. ಆದುದರಿಂದ ಅಲ್ಲಿ ಬದುಕುವ ಎಲ್ಲರಿಗೂ ಸಮಾನ ಅವಕಾಶ ಸಿಗಬೇಕು ಎಂಬ ವಿಚಾರದ ಮೂಲಕ ಅವರು ಹೋರಾಟಕ್ಕೆ ಇಳಿದಿದ್ದಾರೆ. ಅವರ ಈ ನಿಲುವಿನಿಂದಾಗಿ ವಿಶ್ವದ ಎಲ್ಲಾ ಸ್ವಾತಂತ್ರ್ಯಪ್ರಿಯರು ಅವರ ಬಗ್ಗೆ ಗೌರವ ತಾಳಿದ್ದಾರೆ.

ಜೀವಂತ ಸ್ಪಾರ್ಟಕಸ್

ರಾಜಕೀಯ ಹೋರಾಟಗಳನ್ನು ಬಿಟ್ಟು ಮಂಡೇಲಾ ಟ್ರಾನ್ಸ್‌ಕೆಯಿ ಬಂಟುಸ್ತಾನದಲ್ಲಿ ಉಳಿಯುವುದಾದರೆ ಬಿಡುಗಡೆ ಮಾಡುವುದೆಂದು ಸರ್ಕಾರ ಮೊದಲ ಬಾರಿಗೆ 1969 ರಲ್ಲಿ ತಿಳಿಸಿತು. ಟ್ರಾನ್ಸ್‌ಕೆಯಿ ಬಂಟುಸ್ತಾನದ 'ಸರ್ಕಾರ'ದಲ್ಲಿ ಒಂದು ಹುದ್ದೆಯನ್ನು ಕೂಡ ನೀಡುವುದಾಗಿ ಹೇಳಿತ್ತು. ಸರ್ಕಾರದ ಈ ಷರತ್ತು ಮಂಡೇಲಾ ಅವರಿಗೆ ಅಸಹ್ಯ ಎನಿಸಿತು. 1976 ರಲ್ಲಿ ಕಾನೂನು ಸಚಿವ ಜಿಮ್ಮಿ ಕುರ್ಗರ್ ಇದೇ ಷರತ್ತಿನ ಮೇಲೆ ಬಿಡುಗಡೆ ಮಾಡುವುದಾಗಿ ತಿಳಿಸಿದರು.

ಮಂಡೇಲಾ ಬದುಕಿನಲ್ಲಿ ಎಂದೂ ನಿರಾಶರಾಗಲಿಲ್ಲ. ಎಂದೂ ಹೊಂದಾಣಿಕೆ ಮಾಡಿಕೊಳ್ಳಲಿಲ್ಲ. ಎಂದೂ ಸಹಾಯ ಕೇಳಲಿಲ್ಲ. ಅವರು ಚೈತನ್ಯ, ಧೈರ್ಯ ಮತ್ತು ಸಮರ್ಪಣೆಯ ಆಗರವಾಗೇ ಉಳಿದರು. ಒಂದು ಮಹಾನ್ ಕಾರ್ಯಸಾಧನೆಗಾಗಿ ಎಲ್ಲ 'ಚಂಡಮಾರುತ'ಗಳನ್ನು ಎದುರಿಸಿದರು.

ದಕ್ಷಿಣ ಆಫ್ರಿಕಾದಲ್ಲಿ ಮಂಡೇಲಾ ಅವರ ಭಾವಚಿತ್ರ ಮತ್ತು ಹೆಸರನ್ನು ಪ್ರಕಟಿಸುವುದು ಕೂಡ ಅಪರಾಧವಾಗಿತ್ತು. ಆದರೆ ಮೊದಲಿನಿಂದಲೂ ಜನರಿಗೆ ಅದೆಲ್ಲ ಲೆಕ್ಕಕ್ಕಿಲ್ಲ. ಮಂಡೇಲಾ ಭಿತ್ತಿ ಚಿತ್ರಗಳು ಅಲ್ಲಿ ರಾರಾಜಿಸುತ್ತಲೇ ಇವೆ.

ಮಾನವ ಹಕ್ಕುಗಳನ್ನು ಪ್ರತಿಪಾದಿಸುವ ದಕ್ಷಿಣ ಆಫ್ರಿಕಾದ ಅನೇಕ

ಬಿಳಿಯರು 'ರಾಷ್ಟ್ರೀಯ ನಾಯಕ' ಎಂದು ಮಂಡೇಲಾ ಅವರನ್ನು ಗೌರವಿಸುತ್ತಾರೆ.

ಮಾರ್ಚ್ 1980 ರಲ್ಲಿ ಜೊಹಾನ್ಸ್‌ಬರ್ಗ್‌ನಲ್ಲಿ ಮಂಡೇಲಾರ ಬಿಡುಗಡೆ ಕುರಿತು ಅಭಿಪ್ರಾಯ ಸಂಗ್ರಹಿಸಿದಾಗ ಶೇ. 54 ರಷ್ಟು ಬಿಳಿಯರು ಅವರನ್ನು ಬಿಡುಗಡೆ ಮಾಡಬೇಕು ಎಂದು ಬಯಸಿದರು. ಮಂಡೇಲಾ 'ಜೀವಂತ ಸ್ಪಾರ್ಟಕಸ್' ಆಗಿದ್ದಾರೆ. ದಕ್ಷಿಣ ಆಫ್ರಿಕಾ ಸರ್ಕಾರ ವರ್ಣದ್ವೇಷ ವ್ಯವಸ್ಥೆಯನ್ನು ಉಳಿಸಿಕೊಳ್ಳುವುದಕ್ಕಾಗಿ ಮದ್ದುಗುಂಡುಗಳನ್ನು ಪಣಕ್ಕಿಟ್ಟಾಗ ಮಂಡೇಲಾ ತಮ್ಮ ಬದುಕನ್ನೇ ಪಣಕ್ಕಿಟ್ಟರು. ಆಗ ಸರ್ಕಾರಕ್ಕೆ ಎಲ್ಲ ಕಡೆಗಳಲ್ಲಿ ಅಂದರೆ ಗಲ್ಲಿಗಳಲ್ಲಿ, ಬೀದಿಗಳಲ್ಲಿ, ಬಂಟುಸ್ತಾನ್‌ಗಳಲ್ಲಿ ಮತ್ತು ಒಮ್ಮೊಮ್ಮೆ ರಣರಂಗವಾಗಿ ಮಾರ್ಪಡುವ ಸ್ಥಳಗಳಲ್ಲಿ ಬರೀ ಮಂಡೇಲಾಗಳು ಕಾಣತೊಡಗಿದರು.

ರಿವೋನಿಯಾ ವಿಚಾರಣೆ ವೇಳೆ ಅವರಿಗೆ ಗಲ್ಲು ಶಿಕ್ಷೆ ವಿಧಿಸಲಾಗುವುದು ಎಂದೇ ಭಾವಿಸಲಾಗಿತ್ತು. ಮಂಡೇಲಾ ಕೂಡ ಹಾಗೇ ಯೋಚಿಸಿದ್ದರು. ಆಗ "If you think that by sentencing me to death you will destory the liberation movement, you are wrong : I am prepared to die and know my death will be an inspiration to my people in their struggle" ಎಂದು ಹೇಳಿದ್ದರು.

ಜನಾಂಗವಾದ, ಮತ್ತು ವರ್ಣದ್ವೇಷ ನೀತಿಗಳ ವಿರುದ್ಧ ಜನಾಂಗಗಳ ಮಧ್ಯೆ ಸಾಮರಸ್ಯ ಸಾಧಿಸಿ ಹೋರಾಡುತ್ತಿದ್ದರೂ ದಕ್ಷಿಣ ಆಫ್ರಿಕಾದ ರಾಷ್ಟ್ರೀಯ ವಿಮೋಚನೆಯನ್ನು ಸಾಧಿಸುವ ಗುರಿಯನ್ನು ಹೊಂದಿದ್ದರೂ ವರ್ಗ ಸಮಸ್ಯೆ ಬಗ್ಗೆ ಎಚ್ಚರಿಕೆಯುಳ್ಳವರಾಗಿದ್ದಾರೆ. ಸಮಾಜವಾದದ ಹೊರತಾಗಿ ಬೇರೆ ಯಾವುದೇ ವ್ಯವಸ್ಥೆ ಜೊತೆ ಭಾಗಿಯಾಗುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ದಕ್ಷಿಣ ಆಫ್ರಿಕಾದ ರಾಷ್ಟ್ರೀಯ ವಿಮೋಚನಾ ಹೋರಾಟದಲ್ಲಿ ಕಮ್ಯೂನಿಸ್ಟರು ಮತ್ತು ಕಮ್ಯೂನಿಸ್ಟೇತರರ ನಡುವಿನ ಸಹಕಾರವನ್ನು ಅವರು ತುಂಬ ಮೌಲಿಕ ಎಂದು ಭಾವಿಸಿದ್ದಾರೆ. ವರ್ಣದ್ವೇಷವನ್ನು ಕೊನೆಗಾಣಿಸಿ 'ಸ್ವಾತಂತ್ರ್ಯ ಘೋಷಣೆ'ಯ ಆಶಯದಂತೆ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ಸ್ಥಾಪಿಸುವುದ

ಕ್ಕಾಗಿ ದಕ್ಷಿಣ ಆಫ್ರಿಕಾದ ಕಮ್ಯೂನಿಸ್ಟರು ಇತರ ಹೋರಾಟಗಾರರ ಜೊತೆ ಅವಿಶ್ರಾಂತವಾಗಿ ದುಡಿಯುತ್ತಿದ್ದಾರೆ. ಮಂಡೇಲಾ ಈ ಸಾಧನೆಯ ಕೇಂದ್ರ ಬಿಂದುವಾಗಿದ್ದಾರೆ.

ರಿವೋನಿಯಾ ವಿಚಾರಣೆಯಲ್ಲಿ ಮಂಡೇಲಾ ಅವರು ಕಮ್ಯೂನಿಸ್ಟರ ಬಗ್ಗೆ ಈ ರೀತಿ ಹೇಳಿದ್ದಾರೆ. 'ದಕ್ಷಿಣ ಆಫ್ರಿಕಾದಲ್ಲಿ ಆಫ್ರಿಕಾ ಜನಾಂಗದವರನ್ನು ಮನುಷ್ಯರು ಮತ್ತು ತಮ್ಮ ಸರಿಸಮಾನರು ಎಂದು ಭಾವಿಸುವ ಒಂದೇ ರಾಜಕೀಯ ಪಕ್ಷದವರೆಂದರೆ ಕಮ್ಯೂನಿಸ್ಟರು. ರಾಜಕೀಯ ಹಕ್ಕು ಸಾಧನೆ ಮತ್ತು ಸಾಮಾಜಿಕ ಹೊಣೆಗಾಗಿ ಅವರು ನಮ್ಮ ಜೊತೆ ಊಟ ಮಾಡಲು, ಮಾತನಾಡಲು, ಬದುಕಲು ಮತ್ತು ದುಡಿಯಲು ಸಿದ್ಧರಿದ್ದಾರೆ. ಈ ಕಾರಣಕ್ಕಾಗಿ ಇಂದು ಸ್ವಾತಂತ್ರ್ಯವನ್ನು ಕಮ್ಯೂನಿಜಂಗೆ ಸರಿಗಟ್ಟುವ ಅನೇಕ ಆಫ್ರಿಕನ್ನರುಗಳಿದ್ದಾರೆ.'

ಬೋಥಾ ಸೆಪ್ಟೆಂಬರ್ 1984ರಲ್ಲಿ ಟ್ರೈಕ್ಯಾಮರಿನ್ ಸಂಸತ್ ರಚಿಸಿದಂದಿನಿಂದ ಕರಿಯರು ಉಗ್ರಾವತಾರ ತಾಳಿದ್ದಾರೆ. ಯಾವ ಶಕ್ತಿಯೂ ಅವರನ್ನು ತಡೆಯುವ ಸ್ಥಿತಿಯಲ್ಲಿಲ್ಲ ಎಂಬ ವಾತಾವರಣ ಉಂಟಾಗಿದೆ. ಈ ಸಂಸತ್ತಿನ ಪ್ರಕಾರ ಭಾರತೀಯರು ಮತ್ತು ಮಿಶ್ರವರ್ಣೀಯರು ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡಿದಾಗ್ಯೂ ಯಾವುದೇ ನಿರ್ಣಾಯಕ ಅಧಿಕಾರವಿಲ್ಲ. ಅದೆಲ್ಲ ಬಿಳಿಯರ ಸೊತ್ತಾಗಿದೆ. ಕರಿಯರು ತಮ್ಮ ಪ್ರತಿನಿಧಿಗಳನ್ನು ಆಯ್ಕೆ ಮಾಡಿ ಈ ಸಂಸತ್ತಿನ ನಿರುಪಯುಕ್ತ ಭಾಗವಾಗಲು ಇಚ್ಛಿಸುತ್ತಿಲ್ಲ. ಆದರೆ ಸೊವೆಟೊ ಗಲಭೆ ನಂತರ ತೀವ್ರಗೊಳ್ಳುತ್ತಿರುವ ಜಂಟೀ ಹೋರಾಟಗಳನ್ನು ನಿಷ್ಕ್ರಿಯಗೊಳಿಸುವ ಉದ್ದೇಶದಿಂದ ಭಾರತೀಯರನ್ನು ಮತ್ತು ಮಿಶ್ರವರ್ಣೀಯರನ್ನು ಕರಿಯರಿಂದ ಬೇರ್ಪಡಿಸುವ ಈ ಕುತಂತ್ರದಿಂದ ಕುಪಿತಗೊಂಡಿದ್ದಾರೆ. ಅಲ್ಲದೆ ಸರ್ಕಾರದ ಶಕ್ತಿಗುಂದುತ್ತಿದೆ ಎಂಬ ಮನವರಿಕೆ ಅವರಿಗಾಗಿದೆ. ಸರ್ಕಾರಕ್ಕೆ ಜಂಟೀ ಹೋರಾಟಗಳನ್ನೂ ತಡೆಯಲಿಕ್ಕಾಗುತ್ತಿಲ್ಲ. ಈ ನಿರ್ಣಾಯಕ ಘಟ್ಟದಲ್ಲಿ ಕರಿಯರು ಜೀವದ ಹಂಗುದೊರೆದು ಹೋರಾಡುವುದು ಅನಿವಾರ್ಯವಾಗಿದೆ.

ನೊಬೆಲ್ ಶಾಂತಿ ಪ್ರಶಸ್ತಿ ವಿಜೇತ ಮತ್ತು ಆಂಗ್ಲಿಕನ್ ಚರ್ಚಿನ

ಮೊದಲ ಕರಿಯ ನಾಯಕ ಬಿಷಪ್ ಡೆಸ್ಮಂಡ್ ಟುಟು, ವರ್ಲ್ಡ್ ಅಲಯನ್ಸ್ ಆಫ್ ರಿಫಾರ್ಮ್ಡ್ ಚರ್ಚಿನ ಮಿಶ್ರವರ್ಣೀಯ ನೇತಾರ ರೆವೆರೆಂಡ್ ಅಲೆನ್ ಬೊಸೆಕ್, ಇಂಡಿಯನ್ ನ್ಯಾಷನಲ್ ಕಾಂಗ್ರೆಸ್‌ನ ಮೇವಾ ರಾಮ್‌ಗೋಬಿನ್ ಮುಂತಾದ ನೂರಾರು ಮಂದಿ ಸೌಮ್ಯನಾಯಕರು ಇಂದು ಯುನೈಟೆಡ್ ಡೆಮೊಕ್ರಟಿಕ್ ಫ್ರಂಟ್ ಮತ್ತು ಜನಾಂದೋಲನಗಳ ಮೂಲಕ ಕರಿಯರ ಹೋರಾಟಗಳನ್ನು ತೀವ್ರಗೊಳಿಸುತ್ತಿದ್ದಾರೆ.

ಈ ಹೋರಾಟಗಳಿಗೆ ಅಂಜಿ ಬೋಥಾ ಸರ್ಕಾರ ತನ್ನ ಹಿಡಿತವನ್ನು ಆಂತರಿಕವಾಗಿ ಬಿಗಿಗೊಳಿಸುವುದರ ಜತೆಗೆ ಬಾಹ್ಯವಾಗಿ ಒಂದಿಷ್ಟು ಸುಧಾರಣೆಗಳನ್ನು ತರಬಯಸಿತು.

ರಿವೋನಿಯಾ ವಿಚಾರಣೆಯಲ್ಲಿ ಮಂಡೇಲಾ ಮತ್ತು ಇತರ ಗೆಳೆಯರ ಜೊತೆ ಜೀವಾವಧಿ ಶಿಕ್ಷೆ ಅನುಭವಿಸುತ್ತಿದ್ದ ಗೋವನ್ ಮಬೇಕಿ ಅವರನ್ನು ಬೋಥಾ 1987ರಲ್ಲಿ ಬಿಡುಗಡೆ ಮಾಡಿದರು. 1984ರಿಂದ ನಡೆದ ತೀವ್ರ ಚಳವಳಿಯ ಪರಿಣಾಮಗಳಲ್ಲಿ ಇದೂ ಒಂದು.

ಏಪ್ರಿಲ್ 1982ರಲ್ಲಿ ರಾಬ್ಬೆನ್ ನಡುಗಡ್ಡೆಯ ಜೈಲಿನಿಂದ ಪೋಲ್ಸ್ ಮೂರ್ ಜೈಲಿಗೆ ಸ್ಥಳಾಂತರಿಸಿದ ನಂತರ ಮಂಡೇಲಾ ಅವರು 1988ರ ವರೆಗೆ ಅಲ್ಲೇ ಇದ್ದರು. ಅವರಿಗೆ ಕ್ಷಯರೋಗವಾದದ್ದು ಗೊತ್ತಾದ ಮೇಲೆ 1988ನೇ ಡಿಸೆಂಬರ್ 6 ರಂದು ಕೇಪ್‌ಟೌನ್ ಬಳಿಯ ಪಾರ್ಲ್‌ನಲ್ಲಿನ ವಿಕ್ಟರ್ ವೆರ್ಸ್ಟರ್ ಕಾರಾಗೃಹ ಫಾರ್ಮ್‌ಗೆ ಕಳಿಸಲಾಯಿತು.

1989ನೇ ಜುಲೈ 12 ರಂದು ಸರ್ಕಾರ ಮೊದಲ ಬಾರಿಗೆ ಮಂಡೇಲಾ ಅವರ ಹೇಳಿಕೆಯನ್ನು 'ತನ್ನ ಕಾಯ್ದೆಗೆ ವಿರುದ್ಧವಾಗಿ' ಬಿಡುಗಡೆ ಮಾಡಿತು. ದಕ್ಷಿಣ ಆಫ್ರಿಕಾದಲ್ಲಿ ಶಾಂತಿ ತರುವುದಕ್ಕಾಗಿ ನಿಷಿದ್ಧಗೊಳಿಸಿದ ಎ. ಎನ್. ಸಿ. ಜೊತೆ ಮಾತುಕತೆ ನಡೆಸುವುದೊಂದೇ ಮಾರ್ಗ ಎಂದು ಅವರು ಹೇಳಿಕೆಯಲ್ಲಿ ಸ್ಪಷ್ಟಪಡಿಸಿದ್ದಾರೆ.

1989ನೇ ಜುಲೈನಲ್ಲಿ ಬೋಥಾ ಮತ್ತು ಮಂಡೇಲಾ ಮಧ್ಯೆ 45 ನಿಮಿಷಗಳ ಮಾತುಕತೆ ಆಯಿತು. ಈ ಮಾತುಕತೆ ಬೋಥಾಗೆ ಅನಿವಾರ್ಯ

ವಾಗಿತ್ತು. ಆದರೆ ಇದರಿಂದಾಗಿ ಆತನಿಗೆ ಕರಿಯರ ಗೌರವ ಸಂಪಾದಿಸಿಕೊಳ್ಳ ಲಿಕ್ಕಾಗಲಿಲ್ಲ. ಆಳುವ ನ್ಯಾಷನಲ್ ಪಾರ್ಟಿಯಲ್ಲಿ ಕೂಡ ಬೋಥಾ ಬಗ್ಗೆ ತಿರಸ್ಕಾರ ಹೆಚ್ಚುತ್ತಿತ್ತು. ಕರಿಯರ ಹೋರಾಟಗಳಿಂದ ಮತ್ತು ಆರ್ಥಿಕ ದಿಗ್ಬಂಧನದಿಂದ ಆರ್ಥಿಕ ಸಮಸ್ಯೆಗಳು ತಲೆದೋರುವಂಥ ಪರಿಸ್ಥಿತಿ ಉಂಟಾಯಿತು. ಬಿಳಿಯರಿಗೆ ಕರಿಯರ ಬಗ್ಗೆ ಹೆಚ್ಚು ಭಯ ಶುರುವಾಯಿತು. ಅಪಾರ್ಥೈಡ್ ನೀತಿಯಿಂದ ಬಿಳಿಯರ ಬದುಕೂ ಗಂಡಾಂತರದಲ್ಲಿದೆ ಎಂದು ಅನೇಕ ಸಾಮಾನ್ಯ ಬಿಳಿಯರು ಕೂಡ ಭಾವಿಸತೊಡಗಿದರು. ಈ ಮನೋಭಾವ ಹೋಗಲಾಡಿಸಲು ಬೋಥಾ ಸಾಕಷ್ಟು ಚಡಪಡಿಸಿದರು. ಎಲ್ಲ ವ್ಯರ್ಥವಾಯಿತು. ಅನೇಕ ದಿನಗಳವರೆಗೆ ಮುಂದೂಡುತ್ತ ಬಂದು 1989ನೇ ಆಗಸ್ಟ್ 14 ರಂದು ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಕೊಟ್ಟರು. ಆಗಸ್ಟ್ 15 ರಂದು ಎಫ್. ಡಬ್ಲ್ಯೂ. ಡಿ. ಕ್ಲರ್ಕ್ ಅಧ್ಯಕ್ಷರಾಗಿ ಆಯ್ಕೆ ಆದರು.

1989ನೇ ಸೆಪ್ಟಂಬರ್ 7 ರಂದು ಆಳುವ ನ್ಯಾಷನಲ್ ಪಾರ್ಟಿ ಬಿಳಿಯರ 166 ಸ್ಥಾನಗಳಲ್ಲಿ 84 ಸ್ಥಾನಗಳನ್ನು ಪಡೆಯಿತು. ಕಾನ್ಸರ್‌ವೇಟಿವ್ ಪಾರ್ಟಿ 39 ಸ್ಥಾನಗಳನ್ನು ಗೆದ್ದುಕೊಂಡಿತು. ಡೆಮೊಕ್ರಟಿಕ್ ಪಾರ್ಟಿಗೆ 33 ಸ್ಥಾನ ಲಭಿಸಿದವು. ಇಂಡಿಪೆಂಡೆಂಟ್ ಪಾರ್ಟಿಗೆ 1 ಸ್ಥಾನ ಸಿಕ್ಕಿತು. ಡೆಮಾಕ್ರಟಿಕ್ ಮತ್ತು ಇಂಡಿಪೆಂಡೆಂಟ್ ಪಾರ್ಟಿಗಳು ವರ್ಣಭೇದ ನೀತಿಯನ್ನು ಪ್ರಬಲವಾಗಿ ವಿರೋಧಿಸುತ್ತವೆ. ತಮ್ಮ ಅಧಿಕಾರಾವಧಿಯಲ್ಲಿ ಬಿಳಿಯರ ಒಡಿತವನ್ನು ಕೊನೆಗೊಳಿಸುವುದಾಗಿ ಅಧ್ಯಕ್ಷ ಎಫ್. ಡಬ್ಲ್ಯೂ. ಡಿ. ಕ್ಲರ್ಕ್ ಘೋಷಿಸಿದ್ದಾರೆ. ಕ್ಲರ್ಕ್ ಹೇಳುವುದಕ್ಕೂ ಅವರ ಸರ್ಕಾರ ಕಾರ್ಯ ನಿರ್ವಹಿಸುವುದಕ್ಕೂ ಅಂತರವಿದೆ ಎಂದು ಕಾಮನ್‌ವೆಲ್ತ್ ಮಹಾ ಕಾರ್ಯದರ್ಶಿ ಶ್ರೀದತ್ ರಾಂಫಲ್ ಟೀಕಿಸಿದ್ದಾರೆ. ಮಂಡೇಲಾ ಅವರು ಕರ್ಕ್ ಬಗ್ಗೆ ಒಳ್ಳೆಯ ಅಭಿಪ್ರಾಯವನ್ನೇ ವ್ಯಕ್ತಪಡಿಸಿದ್ದಾರೆ.

1989ನೇ ಅಕ್ಟೋಬರ್ 15 ರಂದು ಮಂಡೇಲಾ ಜತೆ ರಿವೋನಿಯಾ ವಿಚಾರಣೆಯಲ್ಲಿ ಜೀವಾವಧಿ ಶಿಕ್ಷೆಗೊಳಗಾಗಿ ಇನ್ನೂ ಜೈಲಿನಲ್ಲಿದ್ದ ಸಿಸುಲು, ಅಹ್ಮದ ಕಥ್ರದಾ, ಮಲಂಗೆನಿ, ರೇಮಾಂಡ್ ಮಹ್ಲಬಾ ಮತ್ತು ಇಲಿಯಾಸ್ ಮೊತ್ಸೊಲೆದಿ ಅವರನ್ನು ಅಧ್ಯಕ್ಷ ಕರ್ಕ್ ಬಿಡುಗಡೆ ಮಾಡಿದರು.

ಅಹ್ಮದ್ ಕಥ್ರದಾ

ಭಾರತೀಯರ ಹೆಮ್ಮೆಯ ಅಹ್ಮದ್ ಮೊಹಮ್ಮದ್ ಕಥ್ರದಾ ಮಹೋನ್ನತ ಮಾನವಪ್ರಜ್ಞೆಯ ಪ್ರತೀಕವಾಗಿದ್ದಾರೆ. ಆ ಪ್ರಜ್ಞೆಗೆ ಕಪ್ಪು ಬಣ್ಣವಿಲ್ಲ ಬಿಳಿ ಬಣ್ಣವಿಲ್ಲ. ಅದು ವರ್ಗ ಮತ್ತು ವರ್ಣಾತೀತವಾಗಿದೆ ಎಂಬುದನ್ನು ತೋರಿಸಲು ತಮ್ಮ ಬದುಕನ್ನೇ ಮುಡಿಪಾಗಿಟ್ಟಿದ್ದಾರೆ. ದಕ್ಷಿಣ ಆಫ್ರಿಕಾದ ಕರಿಯರ ವಿಮೋಚನೆಗಾಗಿ ಹೋರಾಡುವ ಕರಿಯರು, ಬಿಳಿಯರು, ಮಿಶ್ರವರ್ಣೀಯರು ಮತ್ತು ಭಾರತೀಯರು ಹೀಗೆ ಎಲ್ಲರೂ ಒಂದೇ ಎಂಬುದನ್ನು ಕ್ರಿಯೆ ಮೂಲಕ ತೋರಿಸಿಕೊಟ್ಟ ಮೊದಲಿಗರಲ್ಲಿ ಅವರೂ ಒಬ್ಬರಾಗಿದ್ದಾರೆ.

ಅಹ್ಮದ್ ಕಥ್ರದಾ ಅವರು 1929ನೇ ಆಗಸ್ಟ್ 21ರಂದು ಟ್ರಾನ್ಸ್‌ವಾಲ್ ಬಳಿಯ ಸ್ಪವೆಮ್ಚರ್ ರೆನೆಕೆ ಎಂಬಲ್ಲಿ ವಾಸವಾಗಿದ್ದ ಭಾರತೀಯ ಕುಟುಂಬವೊಂದರಲ್ಲಿ ಜನಿಸಿದರು. ತಂದೆಯ ಹೆಸರು ಮೊಹಮ್ಮದ್ ಕಥ್ರದಾ.

ವಿದ್ಯಾಭ್ಯಾಸಕ್ಕಾಗಿ 1938ರಲ್ಲಿ ಜೊಹಾನ್ಸ್‌ಬರ್ಗ್‌ಗೆ ಬಂದರು. ಹತ್ತು ವರ್ಷದ ಬಾಲಕನಾಗಿದ್ದಾಗಲೇ ಡಾ. ಯೂಸೂ ದಾದೂ, ಮೌಲ್ವಿ ಕಚಾಲಿಯಾ, ಯೂಸೂ ಕಚಾಲಿಯಾ ಮುಂತಾದವರ ರಾಜಕೀಯ ಪ್ರಭಾವ ಕೊಳ್ಳಗಾದರು. 1941 ರಿಂದ ಸಕ್ರಿಯವಾಗಿ ರಾಜಕೀಯ ಚಟುವಟಿಕೆಗಳಲ್ಲಿ ತೊಡಗಿದರು.

ಮ್ಯಾಟ್ರಿಕ್ ಪಾಸಾದ ಮೇಲೆ 1946ರಲ್ಲಿ ಓದು ನಿಲ್ಲಿಸಿ ನತಾಲ್ ಮತ್ತು ಟ್ರಾನ್ಸ್‌ವಾಲ್ ಪ್ರಾಂತಗಳಲ್ಲಿ ಭಾರತೀಯರ ವಿರುದ್ಧ ಬಳಸುತ್ತಿದ್ದ ಅನ್ಯಾಯದ ಕಾನೂನಿನ ವಿರುದ್ಧ ಹೋರಾಡುತ್ತಿದ್ದ ಸತ್ಯಾಗ್ರಹ ಮಂಡಳಿ ಕಚೇರಿಯಲ್ಲಿ ಪೂರ್ಣ ಪ್ರಮಾಣದ ಕಾರ್ಯಕರ್ತರಾಗಿ ಸೇರಿದರು. ಆಗ ನಡೆದ ಚಳವಳಿಯಲ್ಲಿ ಎರಡು ಸಾವಿರ ಭಾರತೀಯರಿಗೆ ಜೈಲು ಶಿಕ್ಷೆಯಾಯಿತು.

1946ನೇ ಡಿಸೆಂಬರ್ ವೇಳೆ ಡರ್ಬಾನ್‌ನಲ್ಲಿ ಒಂದು ತಿಂಗಳ ಕಾಲ ಮೊದಲ ಬಾರಿಗೆ ತುರಂಗ ವಾಸ ಅನುಭವಿಸಿದರು. ಡರ್ಬಾನ್‌ನಲ್ಲಿ ಬಿಳಿಯರಿಗಾಗಿ ಮಾತ್ರ ಇರುವ ಭೂಮಿಯ ಬಳಿ ಒಂದು ತುಂಡು ನೆಲ ಪಡೆದದ್ದೇ ಈ ಶಿಕ್ಷೆಗೆ ಕಾರಣವಾಯಿತು.

ಜೈಲಿನಿಂದ ಬಂದ ನಂತರ ಆಂದೋಲನಗಳಲ್ಲಿ ಭಾಗಿಯಾಗುವುದನ್ನು ಮುಂದುವರಿಸಿದರು. ಈ ಸಂದರ್ಭದಲ್ಲಿ ಮಂಡೇಲಾ, ಸಿಸುಲು ಮತ್ತು ಆಗ ಎ.ಎನ್.ಸಿ. ಅಧ್ಯಕ್ಷರಾಗಿದ್ದ ಡಾ. ಕ್ಷುಮಾ ಅವರ ಪರಿಚಯವಾಯಿತು.

1951ರಲ್ಲಿ ಬಿ.ಎ. ಪದವಿಗಾಗಿ ವಿಟ್ ವಾಟರ್ಸ್ ರ್‍ಯಾಂಡ್ ವಿಶ್ವವಿದ್ಯಾನಿಲಯದಲ್ಲಿ ಹೆಸರು ನೋಂದಾಯಿಸಿದರು. ಆದರೆ ಬರ್ಲಿನ್‌ನಲ್ಲಿ ನಡೆದ ವಿಶ್ವ ಯುವಜನೋತ್ಸವಕ್ಕೆ ಹೋಗಬೇಕಾದ ಕಾರಣ ಕೆಲವೇ ತಿಂಗಳುಗಳಲ್ಲಿ ವಿದ್ಯಾಭ್ಯಾಸ ನಿಲ್ಲಿಸಬೇಕಾಯಿತು. ಟ್ರಾನ್ಸ್‌ವಾಲ್ ಇಂಡಿಯನ್ ಯೂತ್ ಕಾಂಗ್ರೆಸ್ ಪ್ರತಿನಿಧಿಯಾಗಿ ಅವರನ್ನು ಆಯ್ಕೆ ಮಾಡಲಾಗಿತ್ತು. ದಕ್ಷಿಣ ಆಫ್ರಿಕಾದ ಎಲ್ಲ ಜನಾಂಗಗಳ 65 ಪ್ರತಿನಿಧಿಗಳ ನಾಯಕರಾಗಿ ಅವರು ಬರ್ಲಿನ್‌ನಲ್ಲಿ ಆಯ್ಕೆ ಆದರು. ಯುವಜನೋತ್ಸವದ ನಂತರ ವಾರ್ಸಾದಲ್ಲಿನ ವಿದ್ಯಾರ್ಥಿಗಳ ಅಂತರ ರಾಷ್ಟ್ರೀಯ ಸಂಘದ ಕಾಂಗ್ರೆಸ್‌ನಲ್ಲಿ ವಿದ್ಯಾರ್ಥಿಗಳ ಉದಾರವಾದಿ ಸಂಘ (ವಿಟ್ಸ್ ವಿಶ್ವವಿದ್ಯಾನಿಲಯ)ವನ್ನು ಪ್ರತಿನಿಧಿಸಿದರು. ಆದುದರಿಂದ ಬುಡಾಪೆಸ್ಟ್‌ನಲ್ಲಿ ಇರುವ ಪ್ರಜಾಸತ್ತಾತ್ಮಕ ಯುವಕರ ವಿಶ್ವ ಒಕ್ಕೂಟ (ಡಬ್ಲ್ಯುಎಫ್.ಡಿ.ವೈ.)ದ ಕೇಂದ್ರ ಕಚೇರಿಯಲ್ಲಿ ಕಾರ್ಯನಿರ್ವಹಿಸಲು ಅವರನ್ನು ಆಹ್ವಾನಿಸಲಾಯಿತು. ಒಂಬತ್ತು ತಿಂಗಳು ಕಾಲ ಬುಡಾಪೆಸ್ಟ್‌ನಲ್ಲಿ ಉಳಿದರು. ಅದೇ ವೇಳೆ ಪೋಲಂಡ್‌ನಲ್ಲಿ ಇರುವ, ನಾಜಿಗಳು ಸೃಷ್ಟಿಸಿದ್ದ ಆಶ್‌ವಿಟ್ಜ್ ಯಾತನಾ ಶಿಬಿರಕ್ಕೆ ಭೇಟಿ ನೀಡಿದರು. ಅದು ಅವರ ಮೇಲೆ ಆಳವಾದ ಪರಿಣಾಮ ಬೀರಿತು.

ಅಹ್ಮದ್ ಅವರು 1952ರಲ್ಲಿ ದಕ್ಷಿಣ ಆಫ್ರಿಕಾಕ್ಕೆ ಮರಳಿ ಬಂದ ಮೇಲೆ ವರ್ಣಭೇದ ವ್ಯವಸ್ಥೆಯ ಕಾನೂನು ಭಂಗ ಚಳವಳಿಯಲ್ಲಿ'ಎಡಬಿಡದೆ ಭಾಗವಹಿಸಿದರು. ಆಗ ದೇಶಾದ್ಯಂತ ಒಂಬತ್ತು ಸಾವಿರ ಸ್ವಯಂ ಸೇವಕರನ್ನು ಬಂಧಿಸಲಾಯಿತು. ಇವರಲ್ಲೊಬ್ಬರಾದ ಅಹ್ಮದ್ ಅವರಿಗೆ ಒಂಬತ್ತು ತಿಂಗಳು ಶಿಕ್ಷೆ ಆಯಿತು. ಮಂಡೇಲಾ, ಸಿಸುಲು, ಡಾ॥ ದಾದೂ, ಕಚಾಲಿಯಾ ಸಹೋದರರು ಮತ್ತು ಆಗಿನ ಎ.ಎನ್.ಸಿ. ಅಧ್ಯಕ್ಷ ಡಾ॥ ಮೊರೊಕಾ ಅವರೂ ಆ ಸಮಯದಲ್ಲಿ ಜೈಲು ಶಿಕ್ಷೆ ಅನುಭವಿಸಿದರು.

ಅಹ್ಮದ್ ಅವರು 1953ರಲ್ಲಿ ಡಬ್ಲ್ಯು.ಎಫ್.ಡಿ.ವೈ.ನ. ಕಾರ್ಯಕಾರಿ

ಸಮಿತಿ ಸದಸ್ಯರಾಗಿ ಆಯ್ಕೆ ಆದರು. ಆ ವೇಳೆಯಲ್ಲಿ ಸರ್ಕಾರ ಅವರನ್ನು ಕಮ್ಯೂನಿಸ್ಟ್ ಎಂದು ಪರಿಗಣಿಸಿದ್ದರಿಂದ ಅವರು ಆ ಸಭೆಗೆ ಹಾಜರಾಗಲಿಕ್ಕಾಗಲಿಲ್ಲ.

ಅವರು ಇಂಡಿಯನ್ ಕಾಂಗ್ರೆಸ್. ಇಂಡಿಯನ್ ಯೂತ್ ಕಾಂಗ್ರೆಸ್, ಶಾಂತಿ ಸಮಿತಿ, ಯುವಜನೋತ್ಸವ ಸಮಿತಿ ಹೀಗೆ 39 ಸಂಘಟನೆಗಳ ಜವಾಬ್ದಾರಿಯುತ ಸ್ಥಾನಗಳಲ್ಲಿದ್ದರು.

1954ರಲ್ಲಿ ಸರ್ಕಾರ ಅವರ ವಿರುದ್ಧ ನಿಷೇಧಾಜ್ಞೆ ಹೊರಡಿಸಿದ್ದರಿಂದ ಎಲ್ಲ ಸಂಘಟನೆಗಳಿಗೆ ರಾಜೀನಾಮೆ ಕೊಡಬೇಕಾಯಿತು. ಸಭೆ ಸಮಾರಂಭಗಳಲ್ಲಿ ಭಾಗವಹಿಸುವ ಹಕ್ಕು ಕಳೆದುಕೊಳ್ಳಬೇಕಾಯಿತು

ಜೊಹಾನ್ಸ್‌ಬರ್ಗ್‌ನ ಭಾರತೀಯ ಮಕ್ಕಳು ವಿದ್ಯಾಭ್ಯಾಸಕ್ಕಾಗಿ ಪ್ರತಿ ದಿನ 20 ಕಿ.ಮೀ. ದೂರದ ಸ್ಥಳವಾದ ಲೆನಸಿಯಾಗೆ ಹೋಗಬೇಕಿತ್ತು. ಜನವರಿ 1955ರಲ್ಲಿ ಅಹ್ಮದ್ ಅವರು ಭಾರತೀಯ ಮಕ್ಕಳಿಗಾಗಿ ಖಾಸಗಿಯಾದ ಕೇಂದ್ರ ಭಾರತೀಯ ಪ್ರೌಢಶಾಲೆ ಪ್ರಾರಂಭಿಸಿ ಅವರಿಗೆ ಊಟದ ವ್ಯವಸ್ಥೆ ಮಾಡುವಲ್ಲಿ ಸಕ್ರಿಯ ಪಾತ್ರ ವಹಿಸಿದರು. ಅವಿವಾಹಿತ ಅಹ್ಮದ್ ಕೇಂದ್ರ ಭಾರತೀಯ ಪ್ರೌಢಶಾಲೆಯ ಪಾಲಕರ ಸಂಘದ ಕಾರ್ಯದರ್ಶಿ ಆದರು.

ಕಾನೂನು ಭಂಗ ಚಳವಳಿ ಪ್ರಾರಂಭಿಸಿದಾಗಿನಿಂದ ಅವರು ಅನೇಕ ಬಾರಿ ಬಂಧನಕ್ಕೊಳಗಾಗಿ ಶಿಕ್ಷೆ ಅನುಭವಿಸಿದ್ದರು.

1956ರಲ್ಲಿ ರಾಜದ್ರೋಹದ ಆಪಾದನೆ ಮೇಲೆ 156 ಜನರ ಜತೆ ಅವರನ್ನು ಬಂಧಿಸಲಾಯಿತು. ನಾಲ್ಕು ವರ್ಷಗಳ ನಂತರ ವಿಚಾರಣೆ ಮುಗಿದು ನಿರ್ದೋಷಿ ಎಂದು ಸಾರಲಾಯಿತು.

1962ರಲ್ಲಿ ಅಹ್ಮದ್ ಅವರನ್ನು ಗೃಹಬಂಧನದಲ್ಲಿ ಇಡಲಾಯಿತು. 1963ರ ಪ್ರಾರಂಭದಲ್ಲಿ ಭೂಗತರಾಗಿ ರಾಜಕೀಯ ಚಟುವಟಿಕೆಗಳನ್ನು ಮುಂದುವರಿಸಿದರು. 1963ನೇ ಜುಲೈ 12 ರಂದು 'ಲಿಲ್ಲೀಸ್ ಲೀಫ್'ನಲ್ಲಿ ಅಹ್ಮದ್ ಸಮೇತ ಅನೇಕ ಮಂದಿ ಪರಿಷ್ಕರನ್ನು ಬಂಧಿಸಲಾಯಿತು. ಮಂಡೇಲಾ ಅವರು 1962ನೇ ಆಗಸ್ಟ್ 8 ರಂದೇ ಬಂಧಿತರಾಗಿದ್ದರು.

ಬಂಧಿತರಲ್ಲಿ ಹೆರಾಲ್ಡ್ ವೂಲ್ಪೆ, ಆರ್ಥರ್ ಗೋಲ್ಡ್ ರೀಚ್, ಅಬ್ದುಲ್ಲಾ

ಜಸ್ಸತ್ ಮತ್ತು ಮೂಸಾ ಮೂಲಾ ಅವರು ತಪ್ಪಿಸಿಕೊಂಡರು. ಭಾರತೀಯ ರಾದ ಮೂಸಾ ಮೂಲಾ ಸದ್ಯ ಭಾರತದಲ್ಲಿ ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ ಪ್ರತಿನಿಧಿಯಾಗಿದ್ದಾರೆ. ಮಂಡೇಲಾ ಮತ್ತು ಇತರರ ಜತೆ ಅಹ್ಮದ್ ಅವರಿಗೂ ಜೀವಾವಧಿ ಶಿಕ್ಷೆ ಆಯಿತು.

ದಕ್ಷಿಣ ಆಫ್ರಿಕಾದ ಅಧ್ಯಕ್ಷ ಬೋಥಾ 1985ನೇ ಜನವರಿ 31 ರಂದು ಷರತ್ತುಗಳೊಂದಿಗೆ ಬಿಡುಗಡೆ ಮಾಡುವುದಾಗಿ ಘೋಷಿಸಿದ್ದನ್ನು ಮಂಡೇಲಾ. ಸಿಸುಲು ಮತ್ತು ಅಹ್ಮದ್ ಕಥ್ರದಾ ತಿರಸ್ಕರಿಸಿದರು. ಆಗ ಅಹ್ಮದ್ ಕಥ್ರದಾ ಅವರು ಕೇಪ್‌ಟೌನಿನ ಪೋಲ್ಸ್‌ಮೂರ್ ಜೈಲಿನಿಂದ ಲಂಡನ್‌ನಲ್ಲಿ ಇರುವ ಗೆಳೆಯನೊಬ್ಬನಿಗೆ ಬರೆದ ಪತ್ರದ ಸಾಲುಗಳಿವು.

"I don't want to indulge in any false modesty when I say I have not got that stuff that heroes are made of. But really I did not have to go through any sleepless nights to drive a decision. It was so patently designed to humiliate us that there just could be no other decision for me but to reject it".

ಜನತೆಯ ಸ್ವಾತಂತ್ರ್ಯಕ್ಕಾಗಿ ತಮ್ಮ ಸ್ವಾತಂತ್ರ್ಯ ನಿರಾಕರಿಸಿ ಇದೀಗ ಬಿಡುಗಡೆಗೊಂಡ ಅಹ್ಮದ್ ಕಥ್ರದಾ ವಿನಮ್ರತೆ, ಸ್ವಾಭಿಮಾನ ಮತ್ತು ಮಾನವಪ್ರೇಮಕ್ಕೆ ಸಾಕ್ಷಿಯಾಗಿದ್ದಾರೆ.

ಮಂಡೇಲಾ ಬಿಡುಗಡೆ

1990ನೇ ಫೆಬ್ರುವರಿ 2 ರಂದು ಎ.ಎನ್.ಸಿ. ಮೇಲೆ ಹೇರಿದ್ದ ನಿಷೇಧ ವನ್ನು ತೆಗೆಯಲಾಯಿತು. ಫೆಬ್ರುವರಿ 11 ರಂದು ಮಂಡೇಲಾ ಅವರನ್ನು ಬಿಡುಗಡೆ ಮಾಡಲಾಯಿತು. ಕರಿಯರು ಪ್ರಜಾಪ್ರಭುತ್ವಕ್ಕಾಗಿ ಹೋರಾಟ ವನ್ನು ಮುಂದುವರಿಸಬೇಕೆಂದು ಅವರು ಬಿಡುಗಡೆಯ ದಿನವಂದೇ ಕರೆ ನೀಡಿದರು. ಸ್ಟಾರ್ ಪತ್ರಿಕೆ ಅವರ ಸಂದರ್ಶನವನ್ನು ಪ್ರಕಟಿಸಿತು.

ಬಿಡುಗಡೆಯ ನಂತರ ಕೇಪ್‌ಟೌನಿನ ನಗರ ಭವನದ ಹೊರಗಡೆ 5 ಲಕ್ಷಕ್ಕೂ ಹೆಚ್ಚು ಸೇರಿದ್ದ ಜನತೆಗೆ ಶಾಂತಿ, ಪ್ರಜಾಪ್ರಭುತ್ವ ಮತ್ತು

ಸ್ವಾತಂತ್ರ್ಯದ ಶುಭಕೋರಿದರು. ನಾನು ನಿಮ್ಮ ಮುಂದೆ ಪ್ರವಾದಿ ಆಗಿ ನಿಂತಿಲ್ಲ ಆದರೆ ನೀವೆಲಾ ಜನತೆಯ ವಿನಮ್ರ ಸೇವಕನಾಗಿ ನಿಂತಿದ್ದೇನೆ ಎಂದರು.

ಕರಿಯರು ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಸಮಾನತೆ ಪಡೆಯುವ ವರೆಗೆ ತಮ್ಮ ಹೋರಾಟ ಮುಂದುವರಿಯುವು ಎಂದು ಮಂಡೇಲಾ ಘೋಷಿಸಿದರು. ಬಿಳಿಯ ಅಲ್ಪಸಂಖ್ಯಾತರು ತಮ್ಮ ಪ್ರಾಬಲ್ಯವನ್ನು ಹೇರುವ ವರೆಗೆ ದಕ್ಷಿಣ ಆಫ್ರಿಕಾದಲ್ಲಿ ಶಾಂತಿ ನೆಲೆಸಲಾರದು ಎಂದು ಎಚ್ಚರಿಸಿದರು. ದುರ್ದೈವದಿಂದ ಬಿಳಿಯರು ಪ್ರಜಾಸತ್ತೆಯ ವಾಸ್ತವತೆಗೆ ಹೆದರುತ್ತಾರೆ ಎಂದು ಅವರು ವಿಷಾದ ವ್ಯಕ್ತಪಡಿಸಿದರು.

ಅಪಾರ್ಥೈಡ್ ನೀತಿ ಇರುವ ವರೆಗೆ ಸಶಸ್ತ್ರ ಹೋರಾಟ ಮುಂದುವರಿಯುವುದು ಎಂದು ಅವರು 1990ನೇ ಫೆಬ್ರುವರಿ 12 ರಂದು ಸ್ಪಷ್ಟಪಡಿಸಿದ್ದಾರೆ.

ಶಾಂತಿಪ್ರಿಯ ನೆಲ್ಸನ್ ಮಂಡೇಲಾ ಅವರು ಸಶಸ್ತ್ರ ಹೋರಾಟದ ನಿರ್ಧಾರ ಕೈಗೊಳ್ಳುವಂಥ ಪರಿಸ್ಥಿತಿ ಸೃಷ್ಟಿಸಿರುವಂಥ ವರ್ಣಭೇದ ನೀತಿಯ ವಿರುದ್ಧ ಜಗತ್ತಿನಾದ್ಯಂತ ಜನ ಆಂದೋಲನ ತೀವ್ರಗೊಳಿಸುವ ಅವಶ್ಯಕತೆ ಇಂದು ಹಿಂದೆಂದಿಗಿಂತಲೂ ಹೆಚ್ಚಿದೆ.

ಅಪಾರ್ಥೈಡ್ ವಿರುದ್ಧದ ಜಂಟೀ ಹೋರಾಟಕ್ಕೆ ಸಂಬಂಧಿಸಿದಂತೆ ನೆಲ್ಸನ್ ಮಂಡೇಲಾ ಅವರು ಅನೇಕ ಸಮಸ್ಯೆಗಳನ್ನು ಬಗೆಹರಿಸಬೇಕಾಗಿದೆ. ದಕ್ಷಿಣ ಆಫ್ರಿಕಾದಲ್ಲಿ 60 ಲಕ್ಷ ಜುಲುಗಳಿದ್ದಾರೆ. ಅತಿ ಹೆಚ್ಚು ಜನಸಂಖ್ಯೆ ಇರುವ ಕರಿಯ ಜನಾಂಗವಿದು. ಜುಲು ಲ್ಯಾಂಡಿನ ನಾಯಕ ಬುಥಲೆಜಿಯ ರಾಜಕೀಯ ಸಂಘಟನೆಯಾದ ಇಂಕಥಾ ಚಳವಳಿಯಲ್ಲಿ 10 ಲಕ್ಷ ಜುಲುಗಳಿದ್ದಾರೆ. ಬಂಟುಸ್ತಾನಕ್ಕೆ ಸಂಬಂಧಿಸಿದಂತೆ ಇದು ಅತಿ ಪ್ರಬಲ ಸಂಘಟನೆ. ಈ ಸಂಘಟನೆ ಎ.ಎನ್.ಸಿ. ಮತ್ತು ಸರ್ವಪಕ್ಷಗಳ ಯುನೈಟೆಡ್ ಡೆಮೊಕ್ರಟಿಕ್ ಫ್ರಂಟ್ ಜೊತೆ ಸಹಕರಿಸಿದರೆ ಅಪಾರ್ಥೈಡ್ ವಿರುದ್ಧದ ಹೋರಾಟ ಇನ್ನೂ ಪ್ರಬಲವಾಗುತ್ತದೆ.

ಜುಲುಗಳಲ್ಲಿ ಬಹಳಷ್ಟು ಯುವಕರು ಎ.ಎನ್.ಸಿ. ಪ್ರತಿಪಾದಕರಿದ್ದಾರೆ.

ಅವರ ಮತ್ತು ಇಂಕಥಾ ಕಾರ್ಯಕರ್ತರ ಮಧ್ಯೆ ಕೂಡ ಘರ್ಷಣೆಗಳು ಉಂಟಾಗುತ್ತದೆ. ಇಂಕಥಾ ಕಾರ್ಯಕರ್ತರು ಭಾರತೀಯರ ಮತ್ತು ಬೇರೆ ಕರಿಯ ಜನಾಂಗದವರ ಕೂಡ ಘರ್ಷಣೆಗೆ ಇಳಿಯುವುದು ಸಾಮಾನ್ಯವಾಗಿದೆ. ಈ ಸಮಸ್ಯೆಯನ್ನು ಬಗೆಹರಿಸುವಲ್ಲಿ ನೆಲ್ಸನ್ ಮಂಡೇಲಾ ಹೆಚ್ಚಿನ ಆಸಕ್ತಿ ತಾಳಿದ್ದಾರೆ. ಎಲ್ಲ ಜನಾಂಗಗಳ ಕರಿಯರ, ಭಾರತೀಯರ, ಅಪಾರ್ಥೈಡ್ ಅನ್ನು ವಿರೋಧಿಸುವ ಬಿಳಿಯರ ಹಾಗೂ ಇವರೆಲ್ಲರ ರಕ್ತಸಂಬಂಧದಿಂದ ಹುಟ್ಟಿ ಬೆಳೆದ ಮತ್ತು ಹೊಸ ಸಂಸ್ಕೃತಿಯ ಪ್ರತೀಕವಾದ ಮಿಶ್ರವರ್ಣೀಯರ ಒಗ್ಗಟ್ಟಿನಿಂದ ಮಾತ್ರ ಹೊಸ ಸಮಾಜದ ನಿರ್ಮಾಣ ಸಾಧ್ಯ ಎಂಬುದು ಮಂಡೇಲಾರ ಸ್ಪಷ್ಟ ನಿಲುವು.

ದಕ್ಷಿಣ ಆಫ್ರಿಕಾದಲ್ಲಿ ಮೊದಲಿನಿಂದಲೂ ವರ್ಣಭೇದ ನೀತಿ ವಿರುದ್ಧ ಹೋರಾಡುತ್ತಿರುವ ಭಾರತೀಯರ ಬಗ್ಗೆ ಅವರಿಗೆ ವಿಶೇಷವಾದ ಪ್ರೀತಿ ಇದೆ.

1990ನೇ ಫೆಬ್ರುವರಿ 25 ರಂದು ಡರ್ಬಾನ್‌ನಲ್ಲಿ ಬೃಹತ್ ಬಹಿರಂಗ ಸಭೆಯನ್ನು ಉದ್ದೇಶಿಸಿ ಮಾತನಾಡುವಾಗ ಅವರು ನತಾಲ್ ಪ್ರಾಂತ್‌ನಲ್ಲಿನ ಭಾರತೀಯರ ಬಗ್ಗೆ ಕಾಳಜಿ ವ್ಯಕ್ತಪಡಿಸಿದರು. ಜುಲುಗಳು ಅವರ ಮೇಲೆ ಇತ್ತೀಚೆಗೆ ಮಾಡಿದ ಹಲ್ಲೆಯನ್ನು ಖಂಡಿಸಿದರು. ಭಾರತೀಯರ ಮತ್ತು ಆಫ್ರಿಕಾ ಜನಾಂಗಗಳ ಮಧ್ಯೆ ಒಡಕನ್ನುಂಟು ಮಾಡುವುದೆಂದರೆ ವರ್ಣಭೇದ ನೀತಿಗೆ ಸಹಾಯ ಮಾಡಿದಂತೆ ಎಂದ ಅವರು ಅಂಥ ಶಕ್ತಿಗಳಿಗೆ ಅವಕಾಶ ಕೊಡಬಾರದು ಎಂದು ಜನತೆಗೆ ಕರೆ ನೀಡಿದರು. ಅಂಥವರು ವಿಮೋಚನಾ ಹೋರಾಟದ ವೈರಿಗಳು ಎಂದು ತಿಳಿಸಿದರು.

ದಕ್ಷಿಣ ಆಫ್ರಿಕಾದಲ್ಲಿ ಕರಿಯರಲ್ಲಿ ಸಂಘಟಿತ ರಾಜಕೀಯ ಪ್ರಜ್ಞೆ ಮೂಡಿಸಿದ ಮೊದಲ ಪಕ್ಷವೆಂದರೆ 1894ರಲ್ಲಿ ಮಹಾತ್ಮಾಗಾಂಧಿ ಅವರು ಸ್ಥಾಪಿಸಿದ ನತಾಲ್ ಇಂಡಿಯನ್ ಕಾಂಗ್ರೆಸ್ ಎಂದು ಅವರು ಸ್ಮರಿಸಿದರು. ಡಾ॥ ಯುಸೂಫ್ ದಾದೂ, ಡಾ॥ ಮೋಂಟಿ, ನಾಯ್ಕರ್ ಮತ್ತು ಡಾ॥ ಕ್ಷುಮಾ ಅವರ 'ಡಾಕ್ಟರ್ಸ್ ಪ್ಯಾಕ್ಟ್' ಅನ್ನು ಜ್ಞಾಪಿಸಿ ಅದರ ಮಹತ್ವವನ್ನು ತಿಳಿ ಹೇಳಿದರು.

ಮಂಡೇಲಾ ಅವರ ಪ್ರತಿ ಮಾತಿಗೂ ಇಂದು ಅವರ ನಾಡಿನಲ್ಲಿ ಮತ್ತು ಜಗತ್ತಿನಲ್ಲಿ ಬೆಲೆ ಇದೆ. ಅವರ ಮಾರ್ಗದರ್ಶನದಲ್ಲಿ ಅಪಾರ್ಥೈಡ್ ವಿರೋಧಿ ಸಂಯುಕ್ತ ಹೋರಾಟ ಯಶಸ್ವಿ ಆಗುವುದರಲ್ಲಿ ಸಂದೇಹವಿಲ್ಲ.





ಸ್ವಾತಂತ್ರ್ಯ ಘೋಷಣೆ

(ದಕ್ಷಿಣ ಆಫ್ರಿಕಾದ ಹೋರಾಟಗಾರರ ಪ್ರಣಾಳಿಕೆ)

ನಮ್ಮ ಇಡೀ ದೇಶ ಮತ್ತು ಲೋಕ ತಿಳಿದುಕೊಳ್ಳಲೆಂದು ನಾವು ದಕ್ಷಿಣ ಆಫ್ರಿಕಾದವರು ಸಾರಿ ಹೇಳುತ್ತಿದ್ದೇವೆ :

ಕರಿಯರ–ಬಿಳಿಯರ ಅಲ್ಲಿ ಬದುಕುವವರೆಲ್ಲರ ಸೊತ್ತು ದಕ್ಷಿಣ ಆಫ್ರಿಕಾ. ಎಲ್ಲರಿಚ್ಛೆಯ ಮೇಲೆ ನಿಲ್ಲದ ಸರ್ಕಾರಕ್ಕೆ ಅಧಿಕಾರ ತನಗುಂಟೆಂದು ಹೇಳುವ ಹಕ್ಕಿಲ್ಲ.

ಅನ್ಯಾಯ ಅಸಮಾನತೆಯ ಸರ್ಕಾರದಿಂದಾಗಿ ಸ್ವಾತಂತ್ರ್ಯ, ಶಾಂತಿ ಮತ್ತು ನೆಲದ ಜನ್ಮಸಿದ್ಧ ಹಕ್ಕುಗಳು ಲೂಟಿಗೊಳಗಾಗಿವೆ ;

ಸಮಾನ ಹಕ್ಕು ಮತ್ತು ಅವಕಾಶಗಳನ್ನು ಅನುಭವಿಸುತ್ತ ನಮ್ಮ ಜನ ಸೋದರತೆಯಲ್ಲಿ ಬದುಕುವ ವರೆಗೆ ನಮ್ಮ ದೇಶ ಸಮೃದ್ಧಿಯಾಗದು, ವಿಮೋಚನೆಗೊಳ್ಳದು ;

ಎಲ್ಲರಿಚ್ಛೆಯ ಮೇಲೆ ನಿಂತ ಪ್ರಜಾಸತ್ತಾತ್ಮಕ ರಾಷ್ಟ್ರ ಮಾತ್ರ ವರ್ಣ, ಕುಲ, ನಂಬಿಕೆ ಮತ್ತು ಲಿಂಗಭೇದಗಳಿಲ್ಲದೆ ಜನರೆಲ್ಲರ ಜನ್ಮ ಸಿದ್ಧ ಹಕ್ಕನ್ನು ರಕ್ಷಿಸಬಲ್ಲದು ;

ಆದ್ದರಿಂದ ನಾವು ದಕ್ಷಿಣ ಆಫ್ರಿಕಾದ ಜನತೆ, ಕರಿಯರು ಮತ್ತು ಬಿಳಿಯರು ಸಮಾನರು, ದೇಶವಾಸಿಗಳು ಹಾಗೂ ಸಹೋದರರು ಎಂಬ ಸ್ವಾತಂತ್ರ್ಯ ಪ್ರಣಾಳಿಕೆಯನ್ನು ಅಂಗೀಕರಿಸುವೆವು, ಇಲ್ಲಿ ಬಯಸಿದ ಪ್ರಜಾಸತ್ತಾತ್ಮಕ ಬದಲಾವಣೆಗಳು ಈಡೇರುವ ವರೆಗೆ ಎದೆಗುಂದದೆ ಬಲಗುಂದದೆ ಒಂದಾಗಿ ಹೋರಾಡುವ ಪ್ರತಿಜ್ಞೆ ಮಾಡುವೆವು.

ಬಂದೇ ಬರುವುದು ಜನರಾಳುವ ದಿನ

ಕಾನೂನು ರಚಿಸುವ ಎಲ್ಲ ಮಂಡಳಿಗಳಿಗೂ ಅಭ್ಯರ್ಥಿಯಾಗಿ ನಿಲ್ಲುವ ಮತ್ತು ಮತ ಚಲಾಯಿಸುವ ಹಕ್ಕು ಪ್ರತಿಯೊಬ್ಬ ಪುರುಷ ಮತ್ತು ಸ್ತ್ರೀಗೆ ಇರುವುದು. ಎಲ್ಲರಿಗೂ ದೇಶದ ಆಡಳಿತದಲ್ಲಿ ಭಾಗಿಯಾಗುವ ಅಧಿಕಾರ ಬರುವುದು. ಜನರ ಹಕ್ಕುಗಳು ಕುಲ–ಬಣ್ಣ–ಲಿಂಗಭೇದಗಳಿಲ್ಲದೆ ಸಮಾನವಾಗಿರುವವು. (ಬಿಳಿಯರ) ಅಲ್ಪಸಂಖ್ಯಾತ ಆಳ್ವಿಕೆಯ ಎಲ್ಲ ಮಂಡಳಿ, ಪರಿಷತ್ ಮತ್ತು ಪ್ರಾಧಿಕಾರಗಳ ಸ್ಥಾನಗಳಲ್ಲಿ ಸ್ವಯಂ ಸರ್ಕಾರದ ಪ್ರಜಾಸತ್ತಾತ್ಮಕ ಅಂಗಗಳು ಬರುವವು.

ಎಲ್ಲ ರಾಷ್ಟ್ರೀಯ ಪಂಗಡಗಳಿಗೆ ಸಮಾನ ಹಕ್ಕುಗಳು

ಎಲ್ಲ ರಾಷ್ಟ್ರೀಯ ಪಂಗಡಗಳಿಗೆ ಮತ್ತು ಜನಾಂಗಗಳಿಗೆ ರಾಷ್ಟ್ರೀಯ ಮಂಡಳಿಗಳಲ್ಲಿ, ನ್ಯಾಯಾಲಯ ಮತ್ತು ಶೈಕ್ಷಣಿಕ ಕ್ಷೇತ್ರಗಳಲ್ಲಿ ಸಮಾನ ಹಕ್ಕುಗಳು ಲಭಿಸುವವು.

ತಮ್ಮ ಭಾಷೆಗಳನ್ನು ಬಳಸಿಕೊಳ್ಳಲು, ಪರಂಪರೆ ಮತ್ತು ಜನಪದ ಸಂಸ್ಕೃತಿಯನ್ನು ಅಭಿವೃದ್ಧಿಪಡಿಸಲು ಜನರು ಸಮಾನ ಹಕ್ಕುಗಳನ್ನು ಪಡೆಯುವರು.

ಅವರವರ ಜನಾಂಗ ಮತ್ತು ರಾಷ್ಟ್ರೀಯ ಹಿರಿಮೆಗಳು ಅಪಮಾನಕ್ಕೀಡಾಗದಂತೆ ಕಾನೂನು ಬದ್ಧವಾಗಿ ರಾಷ್ಟ್ರೀಯ ಪಂಗಡಗಳನ್ನು ರಕ್ಷಿಸಲಾಗುವುದು.

ಜನಾಂಗ, ಬಣ್ಣ ಅಥವಾ ರಾಷ್ಟ್ರೀಯ ಭೇದಭಾವ ಮತ್ತು ತಿರಸ್ಕಾರಗಳನ್ನು ಕಲಿಸುವುದು, ಆಚರಿಸುವುದು ಶಿಕ್ಷಾರ್ಹ ಅಪರಾಧವಾಗುವುದು.

ಎಲ್ಲಾ ವರ್ಣದ್ವೇಷ ನೀತಿಯ ಕಾನೂನು ಮತ್ತು ಆಚರಣೆಗಳನ್ನು ಬಹಿಷ್ಕರಿಸುವುದು.

ದೇಶದ ಸಂಪತ್ತಿನಲ್ಲಿ ಜನರೆಲ್ಲ ಪಾಲ್ಗೊಳ್ಳುವರು

ರಾಷ್ಟ್ರೀಯ ಸಂಪತ್ತನ್ನು ಮತ್ತು ದಕ್ಷಿಣ ಆಫ್ರಿಕಾದವರ ಪರಂಪರೆಯನ್ನು ಜನತೆಗಾಗಿ ಸಂರಕ್ಷಿಸುವುದು.

ಭೂಗರ್ಭದ ಸಂಪತ್ತು, ಬ್ಯಾಂಕ್ ಮತ್ತು ಏಕಸ್ವಾಮ್ಯ ಉದ್ದಿಮೆಗಳನ್ನು ಇಡಿಯಾಗಿ ಜನತೆಯ ಮಾಲೀಕತ್ವಕ್ಕೆ ಒಳಪಡಿಸುವುದು.

ಜನರ ಹಿತರಕ್ಷಣೆಗೆ ಸಹಕಾರಿಯಾಗುವಂತೆ ಇತರ ಉದ್ದಿಮೆ ಮತ್ತು ವ್ಯವಹಾರಗಳನ್ನು ಹಿಡಿತದಲ್ಲಿಡುವುದು.

ಯಾವುದೇ ಉತ್ಪಾದನೆ, ಎಲ್ಲಾ ವ್ಯವಹಾರ ಮತ್ತು ಕುಶಲ ವೃತ್ತಿಗಳಲ್ಲಿ ಎಲ್ಲರೂ ಸಮಾನ ಹಕ್ಕುಗಳನ್ನು ಪಡೆಯುವರು.

ಉಳುವವರಿಗೆಲ್ಲ ಭೂಮಿಯಲ್ಲಿ ಪಾಲು

ಜನಾಂಗೀಯ ಆಧಾರದ ಮೇಲೆ ಭೂ ಒಡೆತನಕ್ಕೆ ಹಾಕಲಾದ ನಿರ್ಬಂಧವನ್ನು ತೆಗೆಯುವುದು. ಬರಗಾಲ ಮತ್ತು ಭೂ ಬಯಕೆ ನೀಗಿಸಲು ಭೂಮಿಯನ್ನು ಉಳುವವರಿಗೆ ಪುನರ್ ಹಂಚಲಾಗುವುದು.

ಮಣ್ಣಿನ ರಕ್ಷಣೆ ಮತ್ತು ಬೇಸಾಯಕ್ಕೆ ಸಹಾಯಕವಾಗಲು : ಉಪಕರಣಗಳು ಬೀಜ, ಟ್ರಾಕ್ಟರ್, ಮತ್ತು ಅಣೆಕಟ್ಟುಗಳ ಮೂಲಕ ಸರ್ಕಾರ ರೈತರಿಗೆ ಸಹಕಾರಿಯಾಗುವುದು.

ಭೂಮಿಯಲ್ಲಿ ದುಡಿಯುವವರಿಗೆಲ್ಲ ಚಲನವಲನ ಸ್ವಾತಂತ್ರ್ಯ ಭರವಸೆ ನೀಡಲಾಗುವುದು.

ಜನರಿಚ್ಛೆಯಂತೆ ಭೂಮಿಯನ್ನು ಹಂಚಲಾಗುವುದು. ಜನರ ದನಕರುಗಳ ದರೋಡೆಯಾಗದಂತೆ ನೋಡಿಕೊಳ್ಳಲಾಗುವುದು.

ನ್ಯಾಯದ ಮುಂದೆ ಎಲ್ಲರೂ ಒಂದೇ

ಯೋಗ್ಯ ವಿಚಾರಣೆ ಇಲ್ಲದೆ ಯಾರನ್ನೂ ಜೈಲಿಗೆ ಹಾಕಲಾಗದು, ಗಡಿಪಾರು ಮಾಡಲಾಗದು ಅಥವಾ ತಡೆಯಲಾಗದು.

ಯಾವುದೇ ಸರ್ಕಾರಿ ಅಧಿಕಾರಿಯ ಆಜ್ಞೆಯಿಂದ ಯಾರನ್ನೂ ದಂಡಿಸಲಾಗದು.

ನ್ಯಾಯಾಲಯಗಳು ಎಲ್ಲರ ಪ್ರತಿನಿಧಿಗಳು. ಗಂಭೀರ ಅಪರಾಧಗಳಿಗೆ ಮಾತ್ರ ಜೈಲು ಶಿಕ್ಷೆ. ಶಿಕ್ಷೆಯ ಗುರಿ ಪುನರ್ಶಿಕ್ಷಣ.

ಪೊಲೀಸ್ ದಳ ಮತ್ತು ಸೈನ್ಯದಲ್ಲಿ ಎಲ್ಲರಿಗೂ ಸಮಾನ ತಳಹದಿಯ ಮೇಲೆ ಅವಕಾಶ ದೊರೆಯುವುದು. ಅವು ಇರುವುದು ಜನರ ರಕ್ಷಣೆ ಮತ್ತು ಸಹಾಯಕ್ಕಾಗಿ.

ಜನಾಂಗ, ಬಣ್ಣ ಅಥವಾ ನಂಬಿಕೆಗಳ ಆಧಾರದ ಮೇಲೆ ಪಕ್ಷಪಾತ ಮಾಡುವ ಎಲ್ಲಾ ಕಾಯ್ದೆಗಳನ್ನು ರದ್ದುಗೊಳಿಸಲಾಗುವುದು.

ಸರ್ವರಿಗೂ ಸಮಾನ ಹಕ್ಕುಗಳು

ಮಾತನಾಡುವ, ಸಂಘಟಿಸುವ, ಜೊತೆಗೂಡುವ, ಪ್ರಕಟಿಸುವ, ಧರ್ಮೋಪದೇಶ ಮಾಡುವ ಪೂಜಿಸುವ ಮತ್ತು ತಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡುವ ಎಲ್ಲರ ಹಕ್ಕನ್ನು ಕಾನೂನಿನ ಮೂಲಕ ರಕ್ಷಿಸುವ ಭರವಸೆ ನೀಡಲಾಗುವುದು.

ಪೊಲೀಸ್ ಮುತ್ತಿಗೆಯಿಂದ ಮನೆಯ ಗೋಪ್ಯ ಬಹಿರಂಗವಾಗದಂತೆ ಕಾಯ್ದೆ ಮೂಲಕ ರಕ್ಷಿಸಲಾಗುವುದು.

ಹಳ್ಳಿಯಿಂದ ಪಟ್ಟಣಕ್ಕೆ, ಪ್ರಾಂತದಿಂದ ಪ್ರಾಂತಕ್ಕೆ ಮತ್ತು ದಕ್ಷಿಣ ಆಫ್ರಿಕಾದಿಂದ ವಿದೇಶಕ್ಕೆ ಪ್ರವಾಸ ಕೈಗೊಳ್ಳಲು ಯಾರಿಗೂ ಅಡೆತಡೆಗಳಾಗದಂತೆ ನೋಡಿಕೊಳ್ಳಲಾಗುವುದು.

ಇಂಥ ಸ್ವಾತಂತ್ರ್ಯಗಳಿಗೆ ಅಡ್ಡಿಯಾಗಿರುವ ಪಾಸ್ ಕಾಯ್ದೆಗಳು, ಪರ್ಮಿಟ್‌ಗಳು ಮತ್ತು ಇತರ ಕಾಯ್ದೆಗಳನ್ನು ರದ್ದುಗೊಳಿಸಲಾಗುವುದು.

ಜನರಿಗೆಲ್ಲ ಕೆಲಸ ಮತ್ತು ಭದ್ರತೆ

ಕೆಲಸಗಾರರಿಗೆಲ್ಲ ಕಾರ್ಮಿಕ ಸಂಘಗಳನ್ನು ರಚಿಸುವ, ತಮ್ಮ ನಾಯಕರ ಆಯ್ಕೆ ಮಾಡುವ ಮತ್ತು ಮಾಲೀಕರೊಂದಿಗೆ ವೇತನ ಒಪ್ಪಂದ ಮಾಡಿಕೊಳ್ಳುವ ಸ್ವಾತಂತ್ರ್ಯ ಇರುವುದು. ಎಲ್ಲರೂ ಕೆಲಸ ಮಾಡುವ ಇಲ್ಲವೆ ನಿರುದ್ಯೋಗ ಭತ್ಯ ಪಡೆಯುವ ಹಕ್ಕು ಮತ್ತು ಕರ್ತವ್ಯವನ್ನು ಸರ್ಕಾರ ಮಾನ್ಯ ಮಾಡುತ್ತದೆ. ಎಲ್ಲಾ ಜನಾಂಗಗಳ ಗಂಡಸರು–ಹೆಂಗಸರು ಸಮಾನ ಕೆಲಸಕ್ಕೆ ಸಮಾನ ವೇತನ ಪಡೆಯುವರು. ಎಲ್ಲಾ ಕೆಲಸಗಾರರಿಗೆ ವಾರಕ್ಕೆ ನಲವತ್ತು

ಗಂಟೆಗಳ ಕೆಲಸವಿರುವುದು. ರಾಷ್ಟ್ರೀಯ ಕನಿಷ್ಠ ವೇತನ, ಕಾಯಿಲೆ ರಜೆ ಮತ್ತು ವೃತ್ತಿನಿರತ ತಾಯಂದಿರಿಗೆ ಪೂರ್ಣ ವೇತನದೊಂದಿಗೆ ಹೆರಿಗೆ ರಜೆ ನೀಡ ಲಾಗುವುದು. ಗಣಿಗೆಲಸಗಾರರು, ಮನೆಗೆಲಸಗಾರರು, ಕೃಷಿ ಕಾರ್ಮಿಕರು, ಸರ್ಕಾರೀ ಅಧಿಕಾರಿಗಳು ಮತ್ತು ಇತರ ಕೆಲಸಗಾರರು ಒಂದೇ ತೆರನಾದ ಹಕ್ಕನ್ನು ಹೊಂದುವರು. ಬಾಲ ಕಾರ್ಮಿಕರ ದುಡಿಮೆ, ಸರ್ವ ಕೆಲಸಗಳ ದುಡಿಮೆ, ಜೀತ ಪದ್ಧತಿ ಮತ್ತು ಗುತ್ತಿಗೆ ಕೂಲಿಯನ್ನು ರದ್ದುಗೊಳಿಸಲಾಗುವುದು.

ವಿದ್ಯೆ ಸಂಸ್ಕೃತಿಗಳ ಬಾಗಿಲು ತೆರೆಯುವುದು

ನಮ್ಮ ಸಾಂಸ್ಕೃತಿಕ ಬದುಕಿನ ವಿಕಾಸಕ್ಕಾಗಿ ಸರ್ಕಾರ ರಾಷ್ಟ್ರೀಯ ಪ್ರತಿಭೆ ಯನ್ನು ಅಭಿವೃದ್ಧಿಪಡಿಸುವುದು ಮತ್ತು ಪ್ರೋತ್ಸಾಹಿಸುವುದು.

ಹೊರದೇಶಗಳ ಸಂಪರ್ಕ, ಗ್ರಂಥ ಮತ್ತು ವಿಚಾರಗಳ ಮುಕ್ತ ವಿನಿಮಯದ ಮೂಲಕ ಎಲ್ಲರಿಗಾಗಿ ಮನುಕುಲದ ಸಾಂಸ್ಕೃತಿಕ ಭಂಡಾರಗಳೆಲ್ಲ ತೆರೆಯುವುವು.

ತಮ ಜನರನ್ನು ಮತ್ತು ಸಂಸ್ಕೃತಿಯನ್ನು ಪ್ರೀತಿಸುವುದು, ಮಾನವ ಸೋದರತ್ವ, ಸ್ವಾತಂತ್ರ್ಯ ಮತ್ತು ಶಾಂತಿಯನ್ನು ಗೌರವಿಸುವಂತೆ ಯುವಕ ರಿಗೆ ಕಲಿಸುವುದು ಶಿಕ್ಷಣದ ಉದ್ದೇಶವಾಗಿರುವುದು.

ಎಲ್ಲ ಮಕ್ಕಳಿಗೂ ಸಮನಾದ ಸಾರ್ವತ್ರಿಕವಾದ ಕಡ್ಡಾಯ ಮತ್ತು ಉಚಿತ ಶಿಕ್ಷಣವಿರುವುದು.

ಅರ್ಹತೆಯ ಆಧಾರದ ಮೇಲೆ ಸರ್ಕಾರಿ ಭತ್ಯ ಮತ್ತು ವಿದ್ಯಾರ್ಥಿ ವೇತನ ನೀಡಿ ಉನ್ನತ ಶಿಕ್ಷಣ ಹಾಗೂ ತಾಂತ್ರಿಕ ತರಬೇತಿ ಕೊಡಲಾಗುವುದು.

ಸಾಮೂಹಿಕ ರಾಜ್ಯ ಶಿಕ್ಷಣ ಯೋಜನೆ ಮೂಲಕ ವಯಸ್ಕರ ನಿರಕ್ಷರತೆ ಯನ್ನು ಹೋಗಲಾಡಿಸುವುದು.

ಎಲ್ಲರಿಗೂ ಇರುವ ಹಕ್ಕುಗಳು ಶಿಕ್ಷಕರಿಗೂ ಇರುವುವು.

ಸಾಂಸ್ಕೃತಿಕ ಜೀವನ, ಆಟ ಮತ್ತು ಶಿಕ್ಷಣದಲ್ಲಿನ ವರ್ಣಭೇದ ನೀತಿ ಯನ್ನು ಅಳಿಸಿಹಾಕಲಾಗುವುದು.

ಮನೆ, ಭದ್ರತೆ ಮತ್ತು ವಿರಾಮ

ಮನೆ, ಭದ್ರತೆ ಮತ್ತು ವಿಶ್ರಾಂತಿ ಸಿಗುವುದು, ಬಯಸಿದಲ್ಲಿ ಬದುಕುವ, ಅಚ್ಚುಕಟ್ಟಾಗಿ ಮನೆ ಕಟ್ಟುವ ತಮ್ಮ ಕುಟುಂಬಕ್ಕೆ ಆರಾಮ – ಭದ್ರತೆ ಒದಗಿಸುವ ಹಕ್ಕಿರುವುದು.

ಖಾಲಿ ಬಿದ್ದಿರುವ ಗೃಹ ನಿವೇಶನಗಳು ಜನರಿಗೆ ದೊರಕುವುವು.

ಬಾಡಿಗೆ ಮತ್ತು ಬೆಲೆಗಳು ಇಳಿಯುವವು, ಆಹಾರದ ಕೊರತೆ ಇರದು. ಯಾರೂ ಹಸಿವಿನಿಂದ ಬಳಲರು.

ಸರ್ಕಾರ ಮುಂಜಾಗೃತಾ ಆರೋಗ್ಯ ಯೋಜನೆಯನ್ನು ಪ್ರಾರಂಭಿಸುವುದು. ಎಲ್ಲರಿಗೂ ಉಚಿತ ವೈದ್ಯಕೀಯ ನೆರವು ಮತ್ತು ಚಿಕ್ಕ ಮಕ್ಕಳ ಬಗ್ಗೆ ವಿಶೇಷ ಕಾಳಜಿ ವಹಿಸಲಾಗುವುದು.

ಕೊಳಚೆ ಪ್ರದೇಶಗಳನ್ನು ನಿರ್ಮೂಲನ ಮಾಡಿ ಹೊಸ ಉಪನಗರಗಳನ್ನು ನಿರ್ಮಿಸಲಾಗುವುದು. ಅಲ್ಲಿ ಸಾರಿಗೆ, ರಸ್ತೆ, ವಿದ್ಯುತ್, ಆಟದ ಬಯಲು, ಶಿಶುವಿಹಾರ ಮತ್ತು ಸಮುದಾಯ ಕೇಂದ್ರಗಳಿರುವವು.

ವೃದ್ಧರು, ಅನಾಥರು, ಅಶಕ್ತರು ಮತ್ತು ರೋಗಿಗಳನ್ನು ಸರ್ಕಾರ ನೋಡಿಕೊಳ್ಳುವುದು.

ವಿಶ್ರಾಂತಿ, ಪುರಸತ್ತು ಮತ್ತು ಉಲ್ಲಾಸದ ಚಟುವಟಿಕೆಗಳು ಎಲ್ಲರ ಹಕ್ಕಾಗುವವು.

ಬೇಲಿಯಿಂದ ಸುತ್ತುವರಿದ ಪ್ರದೇಶ (ಬಂಟುಸ್ಥಾನ್) ಮತ್ತು ಘೆಟೊ (ನಿರ್ದಿಷ್ಟ ವಾಸಸ್ಥಳ)ಗಳನ್ನು ನಿರ್ನಾಮಗೊಳಿಸುವುದು. ಮನೆ ಮುರುಕ ಕಾಯ್ದೆಗಳನ್ನು ಕಿತ್ತೊಗೆಯಲಾಗುವುದು.

ಶಾಂತಿ ಮತ್ತು ಮೈತ್ರಿ ಇರುವುದು

ದಕ್ಷಿಣ ಆಫ್ರಿಕಾ ಸಂಪೂರ್ಣ ಸ್ವತಂತ್ರ ದೇಶವಾಗುವುದು. ಅದು ಎಲ್ಲಾ ದೇಶಗಳ ಹಕ್ಕು ಮತ್ತು ಪ್ರಭುತ್ವವನ್ನು ಗೌರವಿಸುವುದು. ವಿಶ್ವ ಶಾಂತಿಯನ್ನು ಕಾಪಾಡುವುದಕ್ಕಾಗಿ ಯುದ್ಧ ಬಿಟ್ಟು, ಸಂಧಾನದ ಮೂಲಕ ಎಲ್ಲಾ ಅಂತರ ರಾಷ್ಟ್ರೀಯ ವಿವಾದಗಳನ್ನು ಬಗೆಹರಿಸಿಕೊಳ್ಳುವುದು. ಸಮಾನ

ಪಕ್ಕ, ಅವಕಾಶ ಮತ್ತು ಎಲ್ಲರ ಘನತೆಯನ್ನು ಎತ್ತಿ ಹಿಡಿಯುವುದರ ಮೂಲಕ ನಮ್ಮ ಎಲ್ಲಾ ಜನಾಂಗಗಳ ಮಧ್ಯೆ ಶಾಂತಿಯನ್ನು ರಕ್ಷಿಸುವುದು ಬಸುತೊಲ್ಯಾಂಡ್, ಬೆಚುವಾನಾ ಲ್ಯಾಂಡ್ ಮತ್ತು ಸ್ವಾಜಿಲ್ಯಾಂಡ್ ರಾಜ್ಯಗಳ ಜನತೆ ತಮ್ಮ ಭವಿಷ್ಯದ ಬಗ್ಗೆ ತಾವೇ ನಿರ್ಧರಿಸುವ ಸ್ವಾತಂತ್ರ್ಯ ಪಡೆಯುವರು. ಆಫ್ರಿಕಾ ಖಂಡದ ಎಲ್ಲ ಜನಾಂಗಗಳ ಸ್ವಾತಂತ್ರ್ಯ ಮತ್ತು ಸರ್ಕಾರದ ಹಕ್ಕನ್ನು ಪರಿಗಣಿಸಲಾಗುವುದು. ಅದುವೆ ನಿಕಟ ಸಹಕಾರದ ತಳಹದಿಯಾಗುವುದು.

ತಮ್ಮ ಜನ ಮತ್ತು ದೇಶವನ್ನು ಪ್ರೀತಿಸುವ ಎಲ್ಲರೂ ನಾವಿಲ್ಲಿ ಹೇಳುವಂತೆ ಈಗ ಹೇಳಲಿ : 'ಈ ವಿಮೋಚನೆಗಳಿಗಾಗಿ ಹೆಗಲಿಗೆ ಹೆಗಲು ಕೊಟ್ಟು ಬದುಕಿನುದ್ದಕ್ಕೂ ನಾವು ಸ್ವಾತಂತ್ರ್ಯ ಗಳಿಸುವವರೆಗೆ ಹೋರಾಡುತ್ತೇವೆ'

ಭಾರತಕ್ಕೆ ಒಂದು ಪತ್ರ

ಅಂತರರಾಷ್ಟ್ರೀಯ ತಿಳಿವಳಿಕೆಗಾಗಿ ಇರುವ ಜವಾಹರಲಾಲ ನೆಹರೂ ಪ್ರಶಸ್ತಿಗಾಗಿ ಕಳೆದ 27 ವರ್ಷಗಳಿಂದ ದಕ್ಷಿಣ ಆಫ್ರಿಕಾದ ಜೈಲಿನಲ್ಲಿದ್ದ ನೆಲ್ಸನ್ ಮಂಡೇಲಾ ಅವರನ್ನು 1979ರಲ್ಲಿ ಆಯ್ಕೆಮಾಡಲಾಯಿತು. ಆ ಸಂಬಂಧದಲ್ಲಿ ಅವರು ಆಗಸ್ಟ್ 3, 1980 ರಂದು ಈ ಪ್ರಶಸ್ತಿ ನೀಡುವ ಸಾಂಸ್ಕೃತಿಕ ಸಂಬಂಧಗಳ ಭಾರತೀಯ ಮಂಡಳಿಯ ಕಾರ್ಯದರ್ಶಿ ಶ್ರೀಮತಿ ಮನೋರಮಾ ಭಲ್ಲಾ ಅವರಿಗೆ ಪತ್ರ ಬರೆದರು.

ಜೈಲು ಅಧಿಕಾರಿಗಳು ಆ ಪತ್ರವನ್ನು ತಡೆ ಹಿಡಿದರು. ಜೈಲಿನಿಂದ ರಹಸ್ಯವಾಗಿ ಕಳಿಸಿದ ಆ ಪತ್ರವನ್ನು ಸಾಂಸ್ಕೃತಿಕ ಸಂಬಂಧಗಳ ಭಾರತೀಯ ಮಂಡಳಿ ಆಗಸ್ಟ್ 26, 1981 ರಂದು ಬಿಡುಗಡೆ ಮಾಡಿತು.

ಮಂಡೇಲಾ ಪರವಾಗಿ ಅವರ ಪತ್ನಿ ವಿನ್ನಿ ಮಂಡೇಲಾ ಅವರು ಪ್ರಶಸ್ತಿ ಪಡೆಯಲು ದಕ್ಷಿಣ ಆಫ್ರಿಕಾ ಸರ್ಕಾರ ಅನುಮತಿ ನೀಡಲಿಲ್ಲ. ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ ಅಧ್ಯಕ್ಷ ಆಲಿವರ್ ಟಾಂಬೊ ಅವರು ನವೆಂಬರ್ 1980 ರಂದು ದೆಹಲಿಯಲ್ಲಿ ಪ್ರಶಸ್ತಿ ಸ್ವೀಕರಿಸಿದರು.

ಪ್ರೀತಿಯ ಶ್ರೀಮತಿ ಭಲ್ಲಾ,

"ಅಂತರರಾಷ್ಟ್ರೀಯ ತಿಳಿವಳಿಕೆಗಾಗಿ ಇರುವ ಜವಾಹರಲಾಲ ನೆಹರೂ ಪ್ರಶಸ್ತಿ" ನೀಡಿ ನನ್ನನ್ನು ಗೌರವಿಸಿದ್ದಕ್ಕಾಗಿ, ಸಾಂಸ್ಕೃತಿಕ ಸಂಬಂಧಗಳ ಭಾರತೀಯ ಮಂಡಳಿಗೆ ನನ್ನ ಹೃತ್ಪೂರ್ವಕ ಕೃತಜ್ಞತೆ ಮತ್ತು ಮೆಚ್ಚುಗೆ ವ್ಯಕ್ತಪಡಿಸುವುದಕ್ಕಾಗಿ ಬರೆಯುತ್ತಿದ್ದೇನೆ. ಈ ಪ್ರಶಸ್ತಿಗಾಗಿ ನನ್ನನ್ನು ಪ್ರತ್ಯೇಕಿಸಿ ಆಯ್ಕೆ ಮಾಡಿದ್ದರೂ ಇದು ನಿಜವಾಗಿ ಸಲ್ಲಬೇಕಾದುದು ನನ್ನ ದೇಶದ ಜನರಿಗೆ. ಈ ಗೌರವಕ್ಕಾಗಿ ನಾನು ಕೇವಲ ಮಾಧ್ಯಮವಾಗಿದ್ದೇನೆ ಎಂಬುದು ನನ್ನ ಭಾವನೆ ಆಗಿದೆ,

ಈ ಹಿಂದೆ ಈ ಪ್ರಶಸ್ತಿ ಪಡೆದ ಪ್ರತಿಷ್ಠಿತ ಸ್ತ್ರೀ–ಪುರುಷರ ಸಾಲಿಗೆ ಸೇರು

ಪ್ರದಕ್ಕಾಗಿ ತಮ್ಮ ದೇಶದವನೊಬ್ಬ ಆಯ್ಕೆ ಆಗಿದ್ದಾನೆ ಎಂಬುದು ನಮ್ಮ ದೇಶದ ಜನರಲ್ಲಿ ವಿನಯ ಮತ್ತು ಹೆಮ್ಮೆ ಉಂಟುಮಾಡಿದೆ.

ಆ ಹೆಸರುಗಳನ್ನು ನಾನು ಏಕೆ ಜ್ಞಾಪಿಸಿಕೊಳ್ಳುತ್ತಿದ್ದೇನೆ ಎಂದರೆ ಆ ಹೆಸರುಗಳು ಈ ಪ್ರಶಸ್ತಿಯ ವ್ಯಾಪ್ತಿ ಮತ್ತು ಲಕ್ಷಣಗಳ ಸಂಕೇತ ಮಾತ್ರವಲ್ಲ; ಯಾರ ಹೆಸರಿನಲ್ಲಿ ಈ ಪ್ರಶಸ್ತಿ ಇದೆಯೊ ಆ ಮಹಾವ್ಯಕ್ತಿ ಪಂಡಿತ್ ಜವಾಹರ ಲಾಲ ನೆಹರೂಗೆ ಸಲ್ಲುವ 'ಗೌರವ'ವಾಗಿದ್ದಾರೆ.

ಆ ಜೀವಗಳು ಮತ್ತು ಆ ಪ್ರತಿಯೊಬ್ಬರ ವಿವಿಧ ಕಾಣಿಕೆಗಳು ಕೆಲ ಅಳತೆಯಲ್ಲಿ ಪಂಡಿತ್‌ಜಿ ಅವರ ಸಮೃದ್ಧ ಮತ್ತು ಬಹುಮುಖ ಬದುಕನ್ನು ಪ್ರತಿಬಿಂಬಿಸುತ್ತಿವೆ. ನಿಸ್ವಾರ್ಥ ಮಾನವತಾವಾದಿ ಮದರ್ ತೆರೆಸಾ, ಅಂತರ ರಾಷ್ಟ್ರೀಯ ರಾಜನೀತಿಜ್ಞ ಜೊಸಿಪ್ ಬ್ರೊಜ್ ಟಿಟೊ, ಪ್ರಸಿದ್ಧ ರಾಜಕೀಯ ನಾಯಕರಾದ ಜೂಲಿಯಸ್ ನೈರೇರೆ ಮತ್ತು ಕೆನೆತ್ ಕೌಂಡಾ, ವೈದ್ಯಕೀಯ ಉಪಕಾರಿ ಜೋನಸ್ಕ್ ಮತ್ತು ನಾಗರಿಕ ಹಕ್ಕುಗಳ ನಾಯಕ ಮಾರ್ಟಿನ್ ಲೂಥರ್ ಕಿಂಗ್.

ನಿಜವಾಗಿಯೂ ಜವಾಹರಲಾಲ ನೆಹರೂ ಅವರು ಗಣನೀಯ ವ್ಯಕ್ತಿ ಆಗಿದ್ದರು. ಅನೇಕ ಜನರ ಒಂದು ಸಂಯೋಗವಾಗಿದ್ದರು. ಸ್ವಾತಂತ್ರ್ಯ ಹೋರಾಟಗಾರ, ರಾಜಕಾರಣಿ, ಜಾಗತಿಕ ರಾಜನೀತಿಜ್ಞ, ಇಂಗ್ಲಿಷ್ ಭಾಷೆಯ ಮೇಲೆ ಪ್ರಭುತ್ವ ಪಡೆದವರು. ನ್ಯಾಯವಾದಿ ಮತ್ತು ಇತಿಹಾಸತಜ್ಞ. ಅಲಿಪ್ತ ಚಳವಳಿಯ ಮೂಲಕರ್ತರಲ್ಲಿ ಒಬ್ಬರಾಗಿ ಅವರು ವಿಶ್ವಶಾಂತಿ ಮತ್ತು ಮಾನವ ಸಹೋದರತ್ವಕ್ಕೆ ಶಾಶ್ವತ ಕಾಣಿಕೆ ಸಲ್ಲಿಸಿದ್ದಾರೆ.

ಯುದ್ಧಾನಂತರದ ಅವಧಿಯಲ್ಲಿ ಏಷ್ಯಾ ಮತ್ತು ಆಫ್ರಿಕಾದ ತುಂಬೆಲ್ಲ ಬೀಸಿದ ವಸಾಹತುಷಾಹಿ ವಿರೋಧಿ ಮತ್ತು ಸ್ವಾತಂತ್ರ್ಯ ಹೋರಾಟಗಳ ಬಿರು ಗಾಳಿಯಲ್ಲಿ ಜವಾಹರಲಾಲ ನೆಹರೂ ಮತ್ತು ಅಖಿಲ ಭಾರತ ಕಾಂಗ್ರೆಸ್ಸಿನ ವಿಚಾರಗಳು, ಚಟುವಟಿಕೆಗಳು ಮತ್ತು ಉದಾಹರಣೆಗಳಿಂದ ಒಂದಿಲ್ಲೊಂದು ರೀತಿಯಲ್ಲಿ ಪ್ರಭಾವಕ್ಕೊಳಗಾಗದ ಸ್ವಾತಂತ್ರ್ಯ ಚಳವಳಿಯಾಗಲೀ ರಾಜಕೀಯ ನಾಯಕರಾಗಲೀ ಇಲ್ಲ.

ನನ್ನ ಸ್ವಂತದ ರಾಜಕೀಯ ಶಿಕ್ಷಣ ಮತ್ತು ಬೆಳವಣಿಗೆಯ ಸಿಂಹಾವಲೋಕನ ಮಾಡಿದಾಗ, ನನ್ನ ವಿಚಾರಗಳು ಅವರ ಅನುಭವದಿಂದ ಪ್ರಭಾವಿತವಾದದ್ದು ಕಂಡುಬರುತ್ತದೆ.

ವಿಶ್ವವಿದ್ಯಾನಿಲಯದಲ್ಲಿ ಇದ್ದಾಗ ಮತ್ತು ವಿದ್ಯಾರ್ಥಿ ರಾಜಕೀಯದಲ್ಲಿ ತಲ್ಲೀನವಾದಾಗ ಮೊದಲ ಬಾರಿಗೆ ಈ ಪ್ರಸಿದ್ಧ ಪುರುಷನ ಹೆಸರು ನನಗೆ ಗೊತ್ತಾಯಿತು. ನಲವತ್ತರ ದಶಕದಲ್ಲಿ ನಾನು ಮೊದಲ ಬಾರಿಗೆ ಅವರ ಪುಸ್ತಕಗಳಲ್ಲೊಂದಾದ 'ಭಾರತದ ಏಕತೆ' ಓದಿದೆ. ಅದು ನನ್ನ ಮನಸ್ಸಿನ ಮೇಲೆ ಅಚ್ಚಳಿಯದ ಪ್ರಭಾವ ಬೀರಿತು. ಅಂದಿನಿಂದ ಲಭ್ಯವಾಗುವಂಥ ಅವರ ಗ್ರಂಥಗಳನ್ನೆಲ್ಲ ಪಡೆದೆ, ಓದಿದೆ ಮತ್ತು ಸಂಗ್ರಹಿಸಿದೆ.

ಅವರ ಜೀವನ ಚರಿತ್ರೆ ಅಥವಾ 'ಜಾಗತಿಕ ಇತಿಹಾಸದ ನಸುನೋಟ' ಓದುವಾಗ, ಅವರ ವಿಚಾರಗಳ ಅಪರಿಮಿತ ವ್ಯಾಪ್ತಿಯ ತೀವ್ರ ಪರಿಣಾಮ ಮತ್ತು ಅವರ ದರ್ಶನದ ಪ್ರಭಾವ ಉಂಟಾಗುವುದು.

ಜೈಲಿನಲ್ಲಿ ಇದ್ದಾಗ ಕೂಡ; ಐಹಿಕ ವಸ್ತುಗಳು ಅಥವಾ ವಿಷಮ ವಾತಾವರಣದಿಂದ ಉಂಟಾದ ದೈಹಿಕ ಕಷ್ಟಕಾರ್ಪಣ್ಯಗಳಿಗೆ ಅವರು ಸೋಲಲು ಒಪ್ಪಲಿಲ್ಲ. ಅದಕ್ಕೆ ಬದಲು ಅವರು ಸೃಜನಶೀಲ ಚಟುವಟಿಕೆಗಳಲ್ಲಿ ತಲ್ಲೀನರಾದರು. ಅನೇಕ ತಲೆಮಾರುಗಳ ಸ್ವಾತಂತ್ರ್ಯಪ್ರಿಯರಿಗೆ ಪೂರ್ವಾರ್ಜಿತ ಆಸ್ತಿ ಆಗುವಂಥ ಗ್ರಂಥಗಳ ರಚನೆ ಮಾಡಿದರು.

"ಗೋಡೆಗಳು ಅಪಾಯಕಾರಿ ಸಂಗಾತಿಗಳು" ಅವರು ಬರೆದರು; "ಅವು ಕೆಲವು ಸಲ ಹೊರಗಿನ ಅನಿಷ್ಟದಿಂದ ರಕ್ಷಿಸಬಹುದು ಮತ್ತು ಆಕ್ರಮಣಕಾರರನ್ನು ತಡೆಗಟ್ಟಬಹುದು. ಆದರೆ ಅವು ನಿಮ್ಮನ್ನು ಕೈದಿ ಮತ್ತು ಗುಲಾಮನನ್ನಾಗಿಯೂ ಮಾಡಬಲ್ಲವು. ಸ್ವಾತಂತ್ರ್ಯದ ಬೆಲೆ ತೆತ್ತು ನೀವು ಪಾವಿತ್ರ್ಯ ಮತ್ತು ನಿರೋಧಕ ಶಕ್ತಿ ಎನ್ನುವಂಥದ್ದನ್ನು ಪಡೆಯುವಿರಿ. ಹಳೆಯದೆನ್ನುವ ಒಂದೇ ಕಾರಣದಿಂದ ಅನಿಷ್ಟ ಸಂಪ್ರದಾಯಗಳನ್ನು ಹೊರಹಾಕುವುದನ್ನು ಮತ್ತು ನವೀನವಾಗಿರುವ ಹೊಸ ಯೋಜನೆಗಳನ್ನು ಸ್ವೀಕರಿಸುವುದನ್ನು ತಡೆ

ಗಟ್ಟುವಂತೆ ಮನಸ್ಸಿನಲ್ಲಿ ಬೆಳೆಯುವ ಗೋಡೆಗಳು, ಗೋಡೆಗಳಲ್ಲೆಲ್ಲ ಭಯಂಕರವಾದವು."

ನಮ್ಮದನ್ನು ಹೋಲುವ ಸಂದರ್ಭಗಳಲ್ಲಿನ ಅನೇಕ ಯುವಜನರ ಹಾಗೆ ರಾಜಕೀಯವಾಗಿ ಕಾರ್ಯೋನ್ಮುಖವಾದ ನನ್ನ ತಲೆಮಾರಿನ ಯುವಕರು ಕೂಡ ತೀವ್ರ ಭಾವನೆಗಳಿಂದ ಆದರೆ ರಾಷ್ಟ್ರವಾದದ ಸಂಕುಚಿತ ರೂಪದಿಂದ ಆಕರ್ಷಿತ ರಾದರು. ಹಾಗಿದ್ದರೂ ಅನುಭವದಿಂದಾಗಿ ದೇಶ ವಿದೇಶಗಳಲ್ಲಿ ನಡೆದ ಘಟನೆಗಳಿಂದಾಗಿ ನಾವು ಹೊಸ ದೃಷ್ಟಿಕೋನ ಪಡೆದವು. ಕ್ಷಿತಿಜ ವಿಸ್ತಾರ ಗೊಂಡಂತೆಲ್ಲ ಕೆಲ ತಾರುಣ್ಯದ ವಿಚಾರಗಳ ಅಸಮರ್ಪಕತೆಯನ್ನು ಗುರುತಿಸಲು ಪ್ರಾರಂಭಿಸಿದೆವು. ಕಾಲ ನಮಗೆ ಕಲಿಸಬೇಕಾಗಿತ್ತು ಪಂಡಿತ್‌ಜಿ ಹೇಳಿದಂತೆ :

ರಾಷ್ಟ್ರವಾದ ತನ್ನ ಸ್ಥಾನದಲ್ಲಿ ಒಳ್ಳೆಯದೇ ಆಗಿದೆ. ಆದರೆ ಅದು ಸಂಬಲಸರ್ಪ ವಾದ ಮಿತ್ರ ಮತ್ತು ಅಪಾಯಕಾರಿ ಚರಿತ್ರಕಾರ ಅನೇಕ ಆಗು ಹೋಗುಗಳಿಗೆ ನಮ್ಮನ್ನು ಕುರುಡಾಗಿಸುವಂಥದ್ದು. ಕೆಲ ಸಲ, ಅದರಲ್ಲೂ ನಮ್ಮ ಮತ್ತು ನಮ್ಮ ದೇಶಕ್ಕೆ ಸಂಬಂಧಿಸಿ ದಂತೆ ಅದು ಸತ್ಯವನ್ನು ವಿರೂಪಗೊಳಿಸುತ್ತದೆ—

ನಿಬ್ಬೆರಗಾಗಿಸುವ ತಂತ್ರಜ್ಞಾನ ಮತ್ತು ಸಂಪರ್ಕ ವಿಧಾನಗಳಲ್ಲಿನ ಪ್ರಗತಿ ಯಿಂದಾಗಿ ಈ ಮುಂಚೆ ಪ್ರವೇಶಿಸಲು ಅಸಾಧ್ಯವೆನಿಸಿದ್ದ ದೂರದ ಪ್ರದೇಶಗಳ ನಡುವಿನ ಅಂತರವನ್ನು ತೊಡೆದು ಹಾಕಿರುವ, ಹಳೆ ತಲೆಮಾರಿನ ನಂಬಿಕೆಗಳು ಮತ್ತು ಮನುಷ್ಯರ ಮಧ್ಯದ ಕಾಲ್ಪನಿಕ ವ್ಯತ್ಯಾಸಗಳು ತ್ವರಿತವಾಗಿ ನಿವಾರಣೆ ಆಗುತ್ತಿರುವ ಮತ್ತು ಒಂಟಿತನ ಕಳೆದು ಸಹಕಾರ ಹಾಗೂ ಪರಸ್ಪರ ಅವಲಂಬನೆ ಗಳು ಕಂಡುಬರುವ ಈ ಪ್ರಪಂಚದಲ್ಲಿ ನಾವು ಕೂಡ ನಮ್ಮ ಸಂಕುಚಿತ ದೃಷ್ಟಿ ಕೋನ ತೊರೆದು ಹೊಸ ವಾಸ್ತವತೆಗಳಿಗೆ ಹೊಂದಿಕೊಳ್ಳುವ ಅಗತ್ಯ ಕಂಡು ಬಂದಿತು.

ವಸಾಹತುಶಾಹಿ ಜಗತ್ತಿನ ಪ್ರಮುಖ ರಾಷ್ಟ್ರೀಯ ವಿಮೋಚನಾ ಚಳವಳಿಗಳಲ್ಲೊಂದಾದ ಅಖಿಲ ಭಾರತ ಕಾಂಗ್ರೆಸ್ ರೀತಿಯಲ್ಲಿ ನಾವು ಕೂಡ ನಮ್ಮ ಪರಿಸ್ಥಿತಿಯನ್ನು ಜಾಗತಿಕ ಹಿನ್ನೆಲೆಯಲ್ಲಿ ತೂಗಿನೋಡಲು ಪ್ರಾರಂಭಿಸಿದೆವು.

ಇತರ ಭಾಗಗಳಲ್ಲಿ ಇರುವ ತಮ್ಮ ಸಹೋದರರು ಇನ್ನೂ ಪರಕೀಯರ

ಆಳ್ವಿಕೆಗೆ ಒಳಪಟ್ಟಿದ್ದರೆ, ವಿಶ್ವದ ಯಾವುದೇ ಒಂದು ಭಾಗದ ಜನತೆ ನಿಜ ವಾಗಿಯೂ ಸ್ವತಂತ್ರರಾಗಲು ಸಾಧ್ಯವಿಲ್ಲ ಎಂಬ ಒಬ್ಬ ಮಹಾನ್ ರಾಜಕೀಯ ಚಿಂತಕ ಮತ್ತು ಶಿಕ್ಷಕನ ಎಚ್ಚರಿಕೆಯನ್ನು ನಾವು ಶೀಘ್ರವಾಗಿ ಅರಿತೆವು.

ಫ್ಯಾಸಿಸ್ಟ್ ಇಟಲಿಯು ಇಥಿಯೋಪಿಯಾವನ್ನು ನಾಶಗೊಳಿಸುತ್ತಿದ್ದಾಗ ಆ ದೇಶದ ಜನತೆಯ ಜತೆ ಅಖಿಲ ಭಾರತ ಕಾಂಗ್ರೆಸ್ ತೋರಿಸಿದ ಸೌಹಾರ್ದತೆ ಯನ್ನು ನಮ್ಮ ಜನ ಕೊಂಡಾಡಿದರು. ಹಣೆಪಟ್ಟಿಗೆ ಹೆದರದೆ ಸ್ಪೇನ್ ಗಣ ರಾಜ್ಯಕ್ಕೆ ಧೈರ್ಯವಾಗಿ ಅಖಿಲ ಭಾರತ ಕಾಂಗ್ರೆಸ್ ತೋರಿಸಿದ ಅನುಕಂಪ ವನ್ನು ನಾವು ಗಮನಿಸಿದೆವು. 1938ರ ಕಾಂಗ್ರೆಸ್ ವೈದ್ಯಕೀಯ ತಂಡ ಚೀನಾ ದೇಶಕ್ಕೆ ಹೋದದ್ದನ್ನು ಕೇಳಿ ನಾವು ಸ್ಫೂರ್ತಿಗೊಂಡೆವು.

ಸೋವಿಯತ್ ದೇಶದ ವಿರುದ್ಧ ಅನಾಗರಿಕ ನಾಜಿ ಪಡೆಗಳನ್ನು ಮುನ್ನುಗ್ಗಿಸಲು ಆಶಿಸುತ್ತಿದ್ದ ಮತ್ತು ಅದಕ್ಕಾಗಿ ಪಿತೂರಿ ಮಾಡುತ್ತಿದ್ದ ಸಮಯದಲ್ಲಿ ಪಂಡಿತ್‌ಜಿ ಅವರು ಮುಸೋಲಿನಿಯನ್ನು ಭೇಟಿ ಮಾಡುವ ಒತ್ತಾಯದ ಆಮಂತ್ರಣವನ್ನು ಸಾರ್ವಜನಿಕವಾಗಿ ತಿರಸ್ಕರಿಸಿದರು. ಎರಡು ವರ್ಷಗಳ ನಂತರ ನಾಜಿ ಜರ್ಮನಿಗೆ ಭೇಟಿ ನೀಡಬೇಕೆಂಬ ಆಮಂತ್ರಣವನ್ನು ಅವರು ಮತ್ತೆ ತಿರಸ್ಕರಿಸಿದುದನ್ನು ನಾವು ಗಮನಿಸಿದೆವು. ಅದಕ್ಕೆ ಬದಲಾಗಿ ಕುಪ್ರಸಿದ್ಧ ಮ್ಯೂನಿಕ್ ಒಪ್ಪಂದದಲ್ಲಿ ನಂಬಿ ಮೋಸಹೋದ ಮತ್ತು ಹೊರಗೆ ಹಾಕಲಾದ ಜೆಕೊಸ್ಲೊವಾಕಿಯಾಗೆ ಹೋಗಲು ಅವರು ನಿರ್ಧರಿಸಿದರು.

ಅಖಿಲ ಭಾರತ ಕಾಂಗ್ರೆಸ್ ಮತ್ತು ಅದರ ನಾಯಕತ್ವದ ಅಂತರ ರಾಷ್ಟ್ರೀಯತೆಯನ್ನು ಗಮನಿಸುತ್ತ ನಾವು ಮಹಾತ್ಮಾ ಗಾಂಧಿ ಅವರ ಅರ್ಥ ಪೂರ್ಣ ವಿವರಣೆಯನ್ನು ಸ್ಮರಿಸಿದೆವು.

"ಸರ್ಕಾರ ಸೃಷ್ಟಿಸಿದ ಗಡಿಗಳ ಆಚೆ ಇರುವ ನೆರೆ ಹೊರೆಯುವರಿಗೆ ನಮ್ಮ ಸೇವೆ ಸಲ್ಲಿಸುವುದಕ್ಕೆ ಯಾವುದೇ ಮಿತಿ ಇಲ್ಲ, ದೇವರು ಎಂದೂ ಗಡಿಗಳನ್ನು ಸೃಷ್ಟಿಸಿಲ್ಲ."

ನಮ್ಮ ಜನ ಮತ್ತು ಭಾರತದ ಜನತೆಯ ಮಧ್ಯದ ನಿಕಟ ಸಂಬಂಧ ಗಳನ್ನು ಹಾಗೂ ಅಖಿಲ ಭಾರತ ಕಾಂಗ್ರೆಸ್ಸಿನ ಅಂತರ ರಾಷ್ಟ್ರೀಯ ದೃಷ್ಟಿ ಕೋನದ ಪರಿಣಾಮವಾಗಿ ನಾವು ಪಡೆದಿರುವ ಪ್ರೋತ್ಸಾಹ, ಸ್ಫೂರ್ತಿ ಮತ್ತು

ವಾಸ್ತವ ನೆರವುಗಳನ್ನು ನಮೂದಿಸದೆ ಹೋದಲ್ಲಿ ಅದೊಂದು ಗಂಭೀರ ಕೊರತೆ ಆದೀತು.

ದಕ್ಷಿಣ ಆಫ್ರಿಕಾದಲ್ಲಿ ಇನ್ನೂ ಇರುವಂಥ ಅತ್ಯಂತ ಹಳೆಯ ರಾಜಕೀಯ ಸಂಘಟನೆ ನತಾಲ್ ಇಂಡಿಯನ್ ಕಾಂಗ್ರೆಸ್ ಅನ್ನು 1894ರಲ್ಲಿ ಮಹಾತ್ಮಾ ಗಾಂಧಿ ಅವರು ಸ್ಥಾಪಿಸಿದರು. ಅವರು ಅದರ ಮೊದಲ ಕಾರ್ಯದರ್ಶಿಗಳಾದರು. ಇಲ್ಲಿ ಇದ್ದಂಥ 21 ವರ್ಷಗಳ ಅವಧಿಯಲ್ಲಿ ದಕ್ಷಿಣ ಆಫ್ರಿಕಾ ಮತ್ತು ಭಾರತದ ಇತಿಹಾಸದ ಮೇಲೆ ಅಗಣಿತ ಪ್ರಭಾವವನ್ನು ಬೀರುವಂಥ ವಿಚಾರ ಮತ್ತು ಹೋರಾಟಗಳ ಹುಟ್ಟಿಗೆ ನಾವು ಸಾಕ್ಷಿ ಆದೆವು. ಹಾಗೆ ನೋಡಿದರೆ ಮಹಾತ್ಮಾ ಗಾಂಧಿ ಅವರು ದಕ್ಷಿಣ ಆಫ್ರಿಕಾದ ನೆಲದ ಮೇಲೆಯೇ ಸತ್ಯಾಗ್ರಹದ ತತ್ವ ಜ್ಞಾನವನ್ನು ಕಂಡುಹಿಡಿದು ಆಚರಿಸಲು ಪ್ರಾರಂಭಿಸಿದರು.

ಮಹಾತ್ಮಾಜಿ ಅವರು ಭಾರತಕ್ಕೆ ಮರಳಿ ಬಂದ ಮೇಲೆ ದಕ್ಷಿಣ ಆಫ್ರಿಕಾದ ಕಾಳಜಿಗಳು ಅಖಿಲ ಭಾರತ ಕಾಂಗ್ರೆಸ್‌ನ ಮತ್ತು ಇಡೀ ಭಾರತ ಜನತೆಯ ಕಾಳಜಿಗಳಾದವು. ಭಾರತ ಸ್ವಾತಂತ್ರ್ಯದ ಮುನ್ನಾ ದಿನ ಪಂಡಿತ್ ನೆಹರೂ ಹೇಳಿದರು.

"ತುಂಬ ವರ್ಷಗಳ ಹಿಂದೆ ನಾವು ವಿಧಿಯ ಜತೆ ಒಪ್ಪಂದ ಮಾಡಿಕೊಂಡೆವು. ಈಗ ನಾವು ನಮ್ಮ ಪ್ರತಿಜ್ಞೆಯನ್ನು ಈಡೇರಿಸುವ ಸಮಯ ಬಂದಿದೆ. ಮಧ್ಯರಾತ್ರಿಯ ಗಂಟೆ ಬಾರಿಸುವಾಗ, ಜಗತ್ತು ಮಲಗಿರುವಾಗ ಬದುಕು ಮತ್ತು ಸ್ವಾತಂತ್ರ್ಯಕ್ಕೆ ಭಾರತ ಎಚ್ಚರ ಗೊಳ್ಳುವುದು. ಈ ಗಂಭೀರ ಕ್ಷಣದಲ್ಲಿ ನಾವು ಭಾರತದ, ಅದರ ಜನತೆಯ ಮತ್ತು ಮನುಕುಲದ ಹಿರಿದಾದ ಧ್ಯೇಯಗಳ ಸೇವೆಗೆ ಸಮರ್ಪಣೆ ಮಾಡಿಕೊಳ್ಳುವ ಪ್ರತಿಜ್ಞೆ ಕೈಗೊಳ್ಳುವುದು ಯೋಗ್ಯವಾಗಿದೆ."

ಈ ಪ್ರತಿಜ್ಞೆಯನ್ನು ಅವರು ಕೈಗೊಂಡಾಗ ಪಂಡಿತ್‌ಜಿ ಅವರ ಮನಸ್ಸಿನಲ್ಲಿ ನಮ್ಮ ಹೋರಾಟ ಎಷ್ಟು ಗಮನಾರ್ಹವಾಗಿತ್ತೆಂಬುದನ್ನು ಕಂಡುಕೊಳ್ಳಲು ನಮ್ಮ ಜನ ಬಹಳ ಕಾಲ ಕಾಯಬೇಕಾಗಲಿಲ್ಲ.

ಅವರ ಪ್ರತಿಭಾವಂತ ಸಹೋದರಿ ಶ್ರೀಮತಿ ವಿಜಯಲಕ್ಷ್ಮೀ ಪಂಡಿತ್ ಅವರು ವಿಶ್ವಸಂಸ್ಥೆಗೆ ಸ್ವತಂತ್ರ ಭಾರತದ ರಾಯಭಾರಿ ಆದಾಗ ದೃಢ ನಿರ್ಧಾರ ದಿಂದ ನಮ್ಮ ಹೋರಾಟದೊಂದಿಗೆ ವಿಶ್ವ ಸೌಹಾರ್ದತೆಯನ್ನು ಸಾಧಿಸಿದ

ಕಾರಣ, ನಮ್ಮ ದೇಶ ಮತ್ತು ನಮೀಬಿಯಾದ ಧ್ವನಿಕಟ್ಟಿದ ಜನತೆಗಷ್ಟೇ ಅಲ್ಲದೆ ವಿಶ್ವಾದ್ಯಂತ ನಮ್ಮಂತೇ ಇರುವ ಇತರ ಜನತೆಯು ಆದರದ ವಕ್ತಾರರಾದರು. ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿನ ಕಾಂಗ್ರೆಸ್ ಹೇಳಿಕೆಗಳು ಮತ್ತು ಪ್ರಯತ್ನಗಳನ್ನು ಈಗ ಭಾರತ ಸರ್ಕಾರ ತನ್ನ ನೀತಿಯಾಗಿ ಒಪ್ಪಿಕೊಂಡು ಕಾರ್ಯತತ್ಪರತೆಯಿಂದ ಆಚರಿಸುತ್ತಿದೆ ಎನ್ನುವುದು ನಮಗೆ ಧನ್ಯಭಾವ ವನ್ನುಂಟು ಮಾಡುವ ವಿಚಾರ.

1947ರಲ್ಲಿ ಮುಂಬೈನಲ್ಲಿ ನಡೆದ ಏಷ್ಯಾ ಜನತೆಯ ಸಮ್ಮೇಳನ, 1955ರ ಬಾಂಡುಂಗ್ ಸಮ್ಮೇಳನ, ಕಾಮನ್‌ವೆಲ್ತ್ ಚರ್ಚೆಗಳು, ಅಲಿಪ್ತ ಚಳವಳಿ ಹೀಗೆ ಎಲ್ಲೆಡೆ ಮತ್ತು ಎಲ್ಲ ಕಾಲದಲ್ಲಿ ಸ್ವತಂತ್ರ ಭಾರತ ಹಾಗೂ ಪಂಡಿತ್‌ಜಿ ನಮ್ಮ ಹೋರಾಟವನ್ನು ಏಕಪ್ರಕಾರವಾಗಿ ಎತ್ತಿ ಹಿಡಿದರು.

ಅದೇ ಹಾದಿಯಲ್ಲಿ, ಕಡಿಮೆಯಾಗದ ಚೈತನ್ಯ ಮತ್ತು ದೃಢ ನಿರ್ಧಾರ ಗಳಿಂದ ಮುನ್ನಡೆಯುತ್ತಿರುವ, ಅವರಷ್ಟೇ ಉದಾಹರಿಸಬಲ್ಲ ಅವರ ಪುತ್ರಿ ಶ್ರೀಮತಿ ಇಂದಿರಾಗಾಂಧಿ ಅವರನ್ನು ನೋಡಿ ನಾವು ಇಂದು ಆಳವಾದ ಸ್ಫೂರ್ತಿ ಪಡೆಯುತ್ತಿದ್ದೇವೆ. ಅವರ ಕಾರ್ಯಚಟುವಟಿಕೆಗಳು, ಆಸಕ್ತಿಗಳು ಮತ್ತು ಹೇಳಿಕೆಗಳು ನಮಗೆ ಭರವಸೆ ಮತ್ತು ಪ್ರೇರಣೆಯ ನಿರಂತರ ಮೂಲ ಗಳಾಗಿವೆ.

ವಿಶ್ವದ ಜನಸಂಖ್ಯೆಯ ಒಂದು ಅತಿಸಣ್ಣ ಭಾಗವಾಗಿರುವ 21 ದಶಲಕ್ಷ ಗಳಿಗೆ ಮೀರದ ಜನಸಂಖ್ಯೆ ಹೊಂದಿದ ನಮ್ಮ ದೇಶ 153 ದೇಶಗಳನ್ನೊಳ ಗೊಂಡ ರಾಷ್ಟ್ರಗಳ ಕುಟುಂಬದಲ್ಲಿ ಒಂದಾಗಿರುವುದನ್ನು ಗಣನೆಗೆ ತೆಗೆದು ಕೊಂಡಾಗ, ಭಾರತ ನಮ್ಮ ಹೋರಾಟವನ್ನು ಎತ್ತಿಹಿಡಿಯುವುದು ಹೆಚ್ಚು ಅರ್ಥಗರ್ಭಿತವಾಗುತ್ತದೆ.

ಅದೂ ಅಲ್ಲದೆ, ಘರ್ಷಣೆ, ಯುದ್ಧಗಳು, ಕ್ಷಾಮ, ಪೌಷ್ಟಿಕ ಆಹಾರದ ಕೊರತೆ, ರೋಗ ರುಜಿನಗಳು, ಬಡತನ, ನಿರಕ್ಷರತೆ ಮತ್ತು ದ್ವೇಷ ಇವೆಲ್ಲವು ಗಳಿಂದ ಸುತ್ತುವರೆದು ಅಲ್ಲೋಲ ಕಲ್ಲೋಲಗೊಂಡಿರುವ ಜಗತ್ತಿನ ಹಿನ್ನೆಲೆ ಯಲ್ಲಿ ನಮ್ಮ ಕಷ್ಟ ಕಾರ್ಪಣ್ಯಗಳು ದೊಡ್ಡದಾಗಿದ್ದರೂ ಚಿಕ್ಕದಾಗಿ ಕಾಣುವವು.

ವಿಶ್ವದ ಎಲ್ಲ ಮೂಲೆಗಳಿಂದ ಮಾನವ ನಿರ್ಮಿತ ನೋವಿನ ಕೊನೆಯ ಕುರುಹು ಅಳಿದು ಹೋಗುವ ದಿನದವರೆಗೂ ವಿಶ್ವದ ಯಾವುದೇ ಭಾಗವು ತನ್ನಷ್ಟಕ್ಕೇ ಅವುಗಳಿಂದ ಮುಕ್ತ ಎಂದು ತಿಳಿದುಕೊಳ್ಳುವ ಧೈರ್ಯ ಮಾಡ ಕೂಡದು ಮತ್ತು ನಮ್ಮ ಸಮಸ್ಯೆಗಳು, ಅವೆಷ್ಟೇ ತೀವ್ರವಾಗಿರಲಿ, ಮನು ಕುಲದ ಸಮಸ್ಯೆಗಳ ಭಾಗ ಎಂಬುದನ್ನು ನಮಗೆ ನೆನಪು ಮಾಡಿಕೊಡುವ ಪಾತ್ರ ವನ್ನು ಜಾಗತಿಕ ವ್ಯವಹಾರಗಳಲ್ಲಿ ಭಾರತ ಉದಾಹರಿಸಲು ಯೋಗ್ಯವಾಗಿ ನಿರ್ವಹಿಸಿದೆ.

ಬೃಹತ್ ಗಾತ್ರದ್ದಾಗಿದ್ದರೂ ಆ ನೋವನ್ನು ಹಂಚಿಕೊಂಡ ಜ್ಞಾನ ಮನುಕುಲದೊಂದಿಗೆ ನಮ್ಮ ಏಕತೆಯನ್ನು ಹಾಗೂ ಅದರಿಂದ ಉದ್ಭವಿಸುವಂಥ ಜಾಗತಿಕ ಜವಾಬ್ದಾರಿಗಳನ್ನು ಕೂಡ ಜೀವಂತವಾಗಿ ಇಡುತ್ತದೆ. ನಮ್ಮ ಭವಿಷ್ಯದಲ್ಲಿ ವಿಶ್ವಾಸ ಮತ್ತು ನಂಬಿಕೆಯನ್ನು ಬಲಗೊಳಿಸುವಲ್ಲಿ ಸಹಾಯಕ ವಾಗಿದೆ.

ಪುನಃ ಪಂಡಿತ್‌ಜಿ ಅವರು ಕಂಡ ಲೋಕವನ್ನು ಇನ್ನೊಮ್ಮೆ ಅವಲೋಕಿಸಿ ದಾಗ ಘರ್ಷಣೆ, ದ್ವೇಷ ಮತ್ತು ಹಿಂಸೆಗಳಿಂದ ತುಂಬಿದ ಪ್ರಪಂಚದಲ್ಲಿ ಮಾನವ ಗುರಿಯಲ್ಲಿ ನಂಬಿಕೆ ಇಡುವುದು ಬೇರೆ ಎಲ್ಲ ಕಾಲಕ್ಕಿಂತ ಈಗ ಹೆಚ್ಚು ಅಗತ್ಯ ವಾಗಿದೆ. ನಾವು ಯಾವ ಭವಿಷ್ಯಕ್ಕಾಗಿ ದುಡಿಯುತ್ತಿದ್ದೇವೋ ಅದು ಮನು ಕುಲಕ್ಕೆ ಸಂಪೂರ್ಣ ಭರವಸೆ ನೀಡುವಂಥದ್ದಾಗಿದ್ದ ಪಕ್ಷದಲ್ಲಿ ವರ್ತಮಾನದ ಅನಿಷ್ಟಗಳ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳಬೇಕಾಗಿಲ್ಲ. ಆ ಭವಿಷ್ಯಕ್ಕಾಗಿ ದುಡಿಯುವುದೇ ಸಮರ್ಥನೀಯ.

ಈ ತಿಳಿವಳಿಕೆ ಮತ್ತು ನಂಬಿಕೆಗಳ ಬಗೆಗಿನ ಗಾಢ ನಿಷ್ಠೆಯಲ್ಲಿ, ನಮ್ಮ ಸ್ನೇಹಿತರ ನಿಷ್ಠೆ ಮತ್ತು ಸೌಹಾರ್ದತೆಯಲ್ಲಿ ನಮ್ಮದೇ ಶಕ್ತಿ ದೃಢನಿಶ್ಚಯ ಮತ್ತು ಹೋರಾಟದ ಬಗೆಗಿನ ನಂಬಿಕೆಯಲ್ಲಿ ನಾವು ಮುಂದುವರಿಯುತ್ತಿದ್ದೇವೆ. ಭಾರತದ ಜನತೆ ಜತೆ. ಇಡೀ ಜಗತ್ತಿನ ಜತೆ ಹೊಸತೊಂದು ನಾಳೆಯನ್ನು ಸೃಷ್ಟಿ ಮಾಡುವುದಕ್ಕಾಗಿ ನಾವು ಸೇರುತ್ತಿದ್ದೇವೆ. ಈ ನಾಳೆ ರವೀಂದ್ರನಾಥ್ ಟಾಗೋರ್ ಅವರು 'ಗೀತಾಂಜಲಿ'ಯಲ್ಲಿ ಕನಸು ಕಂಡ ನಾಳೆಯನ್ನು ವಿಶ್ವದ ಜನತೆಗಾಗಿ ವಾಸ್ತವ ಮಾಡಲು ಪ್ರಯತ್ನಿಸುವಂಥದ್ದು :

ನೆಲ್ಸನ್ ಮಂಡೇಲಾ/೯೧

"ಎಲ್ಲಿ ಮನಸಿರುವುದೋ ಭಯವಿಲ್ಲದೆ.
ತಲೆ ಎತ್ತಿಹುದೊ.
ಜ್ಞಾನ ಎಲ್ಲಿ ಮುಕ್ತವಾಗಿರುವುದೊ
ಎಲ್ಲಿ ಸಂಕುಚಿತ ನಾಡಗೋಡೆಗಳಿಂದ
ತಿರೆ ತುಂಡು ತುಂಡಾಗಿಲ್ಲವೊ,
ಎಲ್ಲಿ ಸತ್ಯದಾಳದಿಂದ
ಮಾತುಗಳು ಹೊಂಹೊಮ್ಮುವವೊ,
ಎಲ್ಲಿ ಪೂರ್ಣತೆಯೆಡೆಗೆ
ಅವಿಶ್ರಾಂತ ಹೆಣಗು
ಕೈಚಾಚುತ್ತಿದೆಯೋ,

ಎಲ್ಲಿ ವಿವೇಕದ ನಿಚ್ಚಳ ಹೊಳೆ
ಜಡರೂಢಿಯ ಮಂಕು ಕವಿದ
ಮರುಭೂಮಿಯ ಮರಳಲ್ಲಿ
ದಾರಿ ಕಳೆದು ಕೊಂಡಿಲ್ಲವೊ

ಎಲ್ಲಿ ಇವೆಲ್ಲ ಸದಾ
ವಿಶಾಲಗೊಳ್ಳುವ ವಿಚಾರ
ಕ್ರಿಯೆಯೆಡೆಗೆ ಮನವ ಮುನ್ನಡೆಸುವವೊ
ಆ ಸ್ವಾತಂತ್ರ್ಯದ ಸ್ವರ್ಗದಲ್ಲಿ
ತಂದೆ-
ನನ್ನ ನಾಡು ಎಚ್ಚರಗೊಳ್ಳಲಿ.

ನಿಮ್ಮ ವಿಶ್ವಾಸದ
ನೆಲ್ಸನ್ ಮಂಡೇಲಾ

(ನಂತರದ ಮಾತು : ಮೇಲಿನ ದಿನಾಂಕ ತಿಳಿಸುವಂತೆ ಈ ಪತ್ರವನ್ನು ತಮಗೆ 3ನೇ ಆಗಸ್ಟ್ 1980 ರಂದು ಕಳಿಸುವುದಕ್ಕಾಗಿ ರಾಬ್ಬೆನ್ ದ್ವೀಪದ ಕಮಾಂಡಿಂಗ್ ಆಫೀಸರ್‌ಗೆ ಕೊಡಲಾಯಿತು. ಈ ಕೆಲಸವನ್ನು ತ್ವರಿತವಾಗಿ ಮಾಡಲು ಕೂಡ ಹೇಳಿದ್ದೆ. ತಮಗೆ ಈ ಪತ್ರ ಕಳಿಸಿದ್ದಾಯಿತೆ ಎಂದು ಅಂದಿನಿಂದ ಪದೆ ಪದೆ ಜೈಲು ಇಲಾಖೆಯಲ್ಲಿ ವಿಚಾರಿಸಿದೆ. ಡಿಸೆಂಬರ್

ಕೊನೆಯ ವಾರದಲ್ಲಿ "ಸಾಂಸ್ಕೃತಿಕ ಸಂಬಂಧಗಳ ಭಾರತೀಯ ಮಂಡಳಿಗೆ ಕೃತಜ್ಞತೆಗಳನ್ನು ಸಲ್ಲಿಸಬಹುದು ಆದರೆ ಆ ಪತ್ರದಲ್ಲಿ ಉಪಯೋಗಿಸಿರುವ ಮಾತುಗಳಿಂದಲ್ಲ" ಎಂದು ನನಗೆ ಉತ್ತರ ಬಂದಿತು. ಆ ಕಾರಣಕ್ಕಾಗಿ ಈ ಪತ್ರ ತಮಗೆ ತಲುಪಿಸಲು ನನ್ನದೇ ಆದ ಮಾರ್ಗಗಳನ್ನು ಉಪಯೋಗಿಸಲು ನಿರ್ಧರಿಸಿದೆ.)

ನಾ ಮರಳಿ ಬರುವೆ

ಪಿ.ಡಬ್ಲ್ಯೂ. ಬೋಥಾ ದಕ್ಷಿಣ ಆಫ್ರಿಕಾದ ಅಧ್ಯಕ್ಷರಾಗಿದ್ದಾಗ ಷರತ್ತಿನ ಮೇಲೆ ಬಿಡುಗಡೆ ಮಾಡುವುದಾಗಿ ನೆಲ್ಸನ್ ಮಂಡೇಲಾ ಅವರಿಗೆ ತಿಳಿಸಿದರು. ಮಂಡೇಲಾ ಅದಕ್ಕೆ ಈ ರೀತಿ ಪ್ರತಿಕ್ರಿಯೆ ವ್ಯಕ್ತಪಡಿಸಿದರು. 198೫ನೇ ಫೆಬ್ರುವರಿ 10 ರಂದು ಸೊವೆಟೊದ ಜುಬುಲಾನಿಯಲ್ಲಿ ನಡೆದ ರ‍್ಯಾಲಿಯಲ್ಲಿ ಅವರ ಮಗಳು ಜಿಂಜಿ ಈ ಪ್ರತಿಕ್ರಿಯೆಯನ್ನು ಓದಿದರು.

ನಾನು ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ ಸದಸ್ಯನಾಗಿದ್ದೇನೆ. ನಾನು ಯಾವಾಗಲೂ ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ ಸದಸ್ಯನಾಗಿದ್ದೇನೆ. ನಾನು ಸಾಯುವವರೆಗೂ ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ ಸದಸ್ಯನಾಗಿರುತ್ತೇನೆ. ಆಲಿವರ್ ಟಾಂಬೊ ನನಗೆ ಸಹೋದರನಿಗಿಂತ ಹೆಚ್ಚು. ಸುಮಾರು 50 ವರ್ಷಗಳಿಂದ ಅವರು ನನ್ನ ಮಹಾನ್ ಗೆಳೆಯ ಮತ್ತು ಸಂಗಾತಿ. ನಿಮ್ಮೊಳಗಿನ ಯಾರಾದರೂ ನನ್ನ ಸ್ವಾತಂತ್ರ್ಯವನ್ನು ಪ್ರೇಮದಿಂದ ಪೋಷಿಸಿದರೆ ಆಲಿವರ್ ಟಾಂಬೊ ಇನ್ನೂ ಹೆಚ್ಚು ಪ್ರೇಮದಿಂದ ಪೋಷಿಸುವರು. ನಾನು ಸ್ವತಂತ್ರವಾಗುವುದನ್ನು ನೋಡಲಿಕ್ಕೆ ಅವರು ತಮ್ಮ ಬದುಕನ್ನೇ ಕೊಡುವರು ಎಂಬುದು ನನಗೆ ಗೊತ್ತಿದೆ. ನನ್ನ ಮತ್ತು ಅವರ ಅಭಿಪ್ರಾಯಗಳಲ್ಲಿ ಯಾವುದೇ ಭೇದವಿಲ್ಲ.

ಸರ್ಕಾರ ನನ್ನ ಮೇಲೆ ಹೇರ ಬಯಸುವ ಷರತ್ತುಗಳ ಬಗ್ಗೆ ನಾನು ಚಕಿತಗೊಂಡಿದ್ದೇನೆ. ನಾನು ಹಿಂಸಾತ್ಮಕ ಮನುಷ್ಯನಲ್ಲ. ನಮ್ಮ ದೇಶದ ಸಮಸ್ಯೆಗಳಿಗೆ ಪರಿಹಾರ ಹುಡುಕುವುದಕ್ಕಾಗಿ ದುಂಡುಮೇಜಿನ ಪರಿಷತ್ತು ಕರೆಯಲು ನಾನು ಮತ್ತು ನನ್ನ ಸಂಗಾತಿಗಳು ಮಲಾನ್ ಅವರಿಗೆ 1952ರಲ್ಲಿ ಕೇಳಿಕೊಂಡೆವು. ಆದರೆ ಆ ಬಗ್ಗೆ ಅಸಡ್ಡೆ ತೋರಲಾಯಿತು. ಸ್ಟ್ರಿಜ್‌ಡೊಮ್ ಅವರು ಅಧಿಕಾರದಲ್ಲಿದ್ದಾಗ ನಾವು ಇದೇ ರೀತಿ ನಿವೇದನೆ ಮಾಡಿದೆವು. ಮತ್ತೆ

ಆ ಬಗ್ಗೆ ಅಲಕ್ಷ್ಯ ತೋರಲಾಯಿತು. ವೆರ್‌ವೊಡ್ದ್ ಅಧಿಕಾರದಲ್ಲಿದ್ದಾಗ ಭವಿಷ್ಯದ ಕುರಿತು ನಿರ್ಧರಿಸುವುದಕ್ಕಾಗಿ ದಕ್ಷಿಣ ಆಫ್ರಿಕಾದ ಎಲ್ಲ ಜನರ ರಾಷ್ಟ್ರೀಯ ಸಮಾವೇಶ ಕರೆಯುಲು ನಾವು ಕೇಳಿದೆವು. ಅದು ಕೂಡ ವ್ಯರ್ಥ ವಾಯಿತು.

ಇತರ ಎಲ್ಲ ಪ್ರಕಾರದ ಪ್ರತಿರೋಧ ಕ್ರಮಗಳು ನಿರುಪಯುಕ್ತವಾದಾಗ ನಾವು ಸಶಸ್ತ್ರ ಹೋರಾಟದ ಮಾರ್ಗ ಹಿಡಿದೆವು. ಮಲಾನ್, ಸ್ಟ್ರಿಜ್‌ಡೊವ್ ಮತ್ತು ವೆರ್‌ವೋಡ್ದ್‌ಗಿಂತಾ ತಾವು ಭಿನ್ನ ಎಂಬುದನ್ನು ಬೋಥಾ ತೋರಿಸಿ ಕೊಡಲಿ. ಅವರು ಹಿಂಸೆಯನ್ನು ತ್ಯಜಿಸಲಿ. ಅಪಾರ್ಥೈಡ್ ಅನ್ನು ನಾಶ ಗೊಳಿಸುವುದಾಗಿ ಹೇಳಲಿ. ಜನತೆಯ ಸಂಘಟನೆಯಾದ ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್ ಮೇಲೆ ನಿಷೇಧವನ್ನು ರದ್ದುಪಡಿಸಲಿ. ಅಪಾರ್ಥೈಡ್ ಅನ್ನು ವಿರೋಧಿಸಿದ್ದಕ್ಕಾಗಿ ಜೈಲು ಶಿಕ್ಷೆಗೊಳಗಾದ, ಹೊರಗಟ್ಟಿದ ಅಥವಾ ಗಡಿ ಪಾರು ಮಾಡಿದ ಎಲ್ಲರನ್ನು ಬಿಡುಗಡೆಗೊಳಿಸಲಿ. ತಮ್ಮನ್ನು ಯಾರು ಆಳ ಬೇಕೆಂಬುದನ್ನು ಜನರೇ ನಿರ್ಧರಿಸಲು ಸಾಧ್ಯವಾಗುವಂಥ ಮುಕ್ತ ರಾಜಕೀಯ ಚಟುವಟಿಕೆಗಳ ಭರವಸೆ ನೀಡಲಿ.

ನಾನು ನನ್ನ ಸ್ವಾತಂತ್ರ್ಯವನ್ನು ಪ್ರೀತಿಯಿಂದ ಪೋಷಿಸುವೆ ಆದರೆ ನಿಮ್ಮ ಸ್ವಾತಂತ್ರ್ಯಕ್ಕಾಗಿ ಇನ್ನೂ ಹೆಚ್ಚಿನ ಕಾಳಜಿ ವಹಿಸುವೆ. ನಾನು ಜೈಲಿಗೆ ಹೊದಂದಿನಿಂದ ಎಷ್ಟೊಂದು ಜನ ಸತ್ತಿದ್ದಾರೆ. ಸ್ವಾತಂತ್ರ್ಯದ ಪ್ರೀತಿಗಾಗಿ ಎಷ್ಟೊಂದು ಜನ ನರಳಿದ್ದಾರೆ. ಅವರಿಗಾಗಿ ದುಃಖಪಟ್ಟ ಮತ್ತು ಅತ್ತ ವಿಧವೆಯರಿಗೆ, ಅನಾಥ ಮಕ್ಕಳಿಗೆ, ಅಪ್ಪ-ಅಮ್ಮಂದಿರರಿಗೆ ನಾನು ಋಣಿ ಯಾಗಿದ್ದೇನೆ. ಈ ದೀರ್ಘ ಒಂಟಿತನದ ಮತ್ತು ನಿಸ್ಸಾರ ವರ್ಷಗಳಲ್ಲಿ ದುಃಖಿ ಆದವನು ನಾನೊಬ್ಬನೇ ಅಲ್ಲ. ನಾನು ನಿಮಗಿಂತ ಕಡಿಮೆ ಬದುಕು ಪ್ರೀತಿಸಿ ದವನಲ್ಲ. ಆದರೆ ನಾನು ನನ್ನ ಜನ್ಮಸಿದ್ಧ ಹಕ್ಕನ್ನು ಮಾರಲಾರೆ. ಸ್ವತಂತ್ರ ರಾಗಬೇಕಾದ ನನ್ನ ಜನರ ಜನ್ಮಸಿದ್ಧ ಹಕ್ಕನ್ನು ಮಾರಲು ನಾ ಸಿದ್ಧನಿಲ್ಲ. ಜನತೆಯ ಮತ್ತು ನಿಷೇಧಿಸಿದ ಆಫ್ರಿಕನ್ ನ್ಯಾಷನಲ್ ಕಾಂಗ್ರೆಸ್‌ನ ಪ್ರತಿನಿಧಿ ಯಾಗಿ ನಾನು ಜೈಲಿನಲ್ಲಿ ಇದ್ದೇನೆ.

ಜನರ ಸಂಘಟನೆ ಮೇಲಿನ ನಿಷೇಧ ಹಾಗೇ ಇರುವಾಗ ನನಗೆ ಎಂಥ

ಸ್ವಾತಂತ್ರ್ಯ ಕೊಡಲು ಸಾಧ್ಯ ? ಪಾಸ್ ಆಪಚಣೆಯೊಡ್ಡಿ ನನ್ನನ್ನು ಬಂಧಿಸಲು ಸಾಧ್ಯವಿರುವಾಗ ನನಗೆ ಎಂಥ ಸ್ವಾತಂತ್ರ್ಯ ಕೊಡಲು ಸಾಧ್ಯ ? ನನ್ನ ಪ್ರಿಯ ಪತ್ನಿ ಬ್ರ್ಯಾಂಡ್‌ಫ್ರೋರ್ಟ್‌ನಲ್ಲಿ ಗಡೀಪಾರಾಗಿ ಬದುಕುತ್ತಿರುವಾಗ ಕುಟುಂಬ ಜೀವನ ಸಾಗಿಸಲು ನನಗೆ ಎಂಥ ಸ್ವಾತಂತ್ರ್ಯ ಕೊಡಲು ಸಾಧ್ಯ ? ನಗರ ಪ್ರದೇಶದಲ್ಲಿ ಬದುಕಲು ನಾನು ಅನುಮತಿ ಕೇಳಲೇಬೇಕಾದಾಗ ನನಗೆ ಎಂಥ ಸ್ವಾತಂತ್ರ್ಯ ಕೊಡಲು ಸಾಧ್ಯ ? ಕೆಲಸ ಪಡೆಯುವುದಕ್ಕಾಗಿ ನನ್ನ ಪಾಸ್‌ನಲ್ಲಿ ಸ್ಟಾಂಪಿನ ಅವಶ್ಯಕತೆ ಇರುವಾಗ ನನಗೆ ಎಂಥ ಸ್ವಾತಂತ್ರ್ಯ ಕೊಡಲು ಸಾಧ್ಯ? ನನ್ನ ದಕ್ಷಿಣ ಆಫ್ರಿಕಾದ ಪೌರತ್ವವನ್ನೇ ಕಡೆಗಣಿಸಿದಾಗ ನನಗೆ ಎಂಥ ಸ್ವಾತಂತ್ರ್ಯ ಕೊಡಲು ಸಾಧ್ಯ ?

ಕೇವಲ ಸ್ವತಂತ್ರ ಮನುಷ್ಯರು ಮಾತ್ರ ಒಪ್ಪಂದ ಮಾಡಿಕೊಳ್ಳಲು ಸಾಧ್ಯ. ಕೈದಿಗಳು ಸಂಧಾನದಲ್ಲಿ ಭಾಗಿಯಾಗಲಾರರು. ಹರ್ಮನ್ ತೊಯಿವೊ ಜಾ ತೊಯಿವೊ ಬಿಡುಗಡೆಯಾದಾಗ ಯಾವುದೇ ವಾಗ್ದಾನ ಮಾಡಲಿಲ್ಲ. ಹಾಗೇ ಮಾಡಬೇಕೆಂದು ಅವರಿಗೆ ಹೇಳಲೂ ಇಲ್ಲ.

ನಾನು ಮತ್ತು ನೀವು, ಜನತೆ ಸ್ವತಂತ್ರರಾಗಿ ಇಲ್ಲದ ಈ ಕಾಲ ಘಟ್ಟದಲ್ಲಿ ನಾನು ಯಾವುದೇ ವಾಗ್ದಾನ ಮಾಡಲಾರೆ, ಮಾಡುವುದಿಲ್ಲ.

ನಿಮ್ಮ ಮತ್ತು ನನ್ನ ಸ್ವಾತಂತ್ರ್ಯವನ್ನು ಬೇರ್ಪಡಿಸಲು ಸಾಧ್ಯವಿಲ್ಲ. ನಾ ಮರಳಿ ಬರುವೆ.

ಗ್ರಂಥ ಋಣ

1) South Africa : Foreign Investment and Apartheid *by Lawrence Litvak, Robert De Grasse & Kathleen Mc Tigue*

2) Apartheid Hand book : *by Roger Omond*

3) South Africa A Modern History : *by T.R.H Davenport*

4) Nelson Mandela : *by Mary Benson*

5) Nelson Mandela : *by Boris Asoyan*

6) African National Congress, 75 Fighting Years : *by C.P.I Publication*

7) Freedom to the People in South Africa : *by Novosti Press Agency*

8) Sechaba Journals of A,N.C.

9) Press clippings on South Africa : *by Information Centre, The Printers (Mysore) Ltd, Bangalore*

10) Press clippings of V.S. Shrinivasan (Pu. Vya. Shri)

11) Kaleidoscope : Current world data (South Africa) : *by ABC—clio, INC*

12) No Easy Walk to Freedom : *by Nelson Mandela*

ನಮ್ಮ ಪ್ರಕಟಣೆಗಳು

1) ನಾಗಸಂದ್ರ ಭೂ ಆಕ್ರಮಣ ಚಳುವಳಿ : ಗಂಗಾಧರ ಮೂರ್ತಿ

2) ಭಾರತದ ಬೌದ್ಧಿಕ ದಾರಿದ್ರ್ಯ : ವಿ.ಆರ್. ನಾರ್ಲ
ಅನು : ಗಂಗಾಧರ ಮೂರ್ತಿ

3) ಭಾರತೀಯ ಸಂಸ್ಕೃತಿಯ ಜಾತಿ ಲಕ್ಷಣ : ವಿ.ಆರ್. ನಾರ್ಲ
ಅನು : ಗಂಗಾಧರಮೂರ್ತಿ

4) ದಲಿತ ಕಲಾಮಂಡಳಿ ಹಾಡುಗಳು : ವಿವಿಧ ಲೇಖಕರು

5) ಅಂಬೇಡ್ಕರ್ ವಾಣಿ : ಕೆ. ನಾರಾಯಣಸ್ವಾಮಿ

6) ಬಾಲ್ಯದಿಂದ ಪ್ರಾಯಕ್ಕೆ : ಎಸ್.ಕೆ. ಥೋರಟ್
ಅನು : ನಗರಗೆರೆ ರಮೇಶ್,
ಗಂಗಾಧರ ಮೂರ್ತಿ

7) ನೆಲ್ಸನ್ ಮಂಡೇಲಾ : ರಂಜಾನ್‌ದರ್ಗಾ

ಕರ್ನಾಟಕ ದಲಿತ ಸಂಘರ್ಷ ಸಮಿತಿ
ಕೋಲಾರ ಜಿಲ್ಲಾ ಶಾಖೆ
ಕೋಲಾರ

75

1912 — 1987

ANC